ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276

2015–16ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

# ಕಬ್ಬಾಳಮ್ಮ ಒಂದು ಸಾಂಸ್ಕೃತಿಕ ಅಧ್ಯಯನ

ನಿಬಂಧಕಾರರು
ನೋಂದಣಿ ಸಂಖ್ಯೆ : KVTM/K 150901030049
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ.)



2015–16

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583 276

2015–16ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

# ಕಬ್ಬಾಳಮ್ಮ ಒಂದು ಸಾಂಸ್ಕೃತಿಕ ಅಧ್ಯಯನ

ನಿಬಂಧಕಾರರು

ನೋಂದಣಿ ಸಂಖ್ಯೆ : KVTM/K 150901030049

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

2015–16

# ಕಬ್ಬಾಳಮ್ಮ ಒಂದು ಸಾಂಸ್ಕೃತಿಕ ಅಧ್ಯಯನ

## ವಿಷಯಸೂಚಿ



*****

# ಅಧ್ಯಾಯ – ೧

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

**ಪೀಠಿಕೆ**

ಭಾರತ ಹಳ್ಳಿಗಳಿಂದ ಕೂಡಿದ ದೇಶ. ನಮ್ಮ ದೇಶದ ಹೃದಯವೆಂದರೆ ಹಳ್ಳಿಗಳ ಸಮುಚ್ಛಯ.ಶೇ ೬೫%ಕ್ಕಿಂತಲೂ ಹೆಚ್ಚು ಮಂದಿ ಬೇಸಾಯವನ್ನೇ ನಂಬಿ ಬದುಕುತ್ತಿರುವ ನಮ್ಮ ದೇಶದಲ್ಲಿನ ಪ್ರತಿ ಹಳ್ಳಿಯಲ್ಲು ತಮ್ಮದೇ ಆದ ಸಂಪ್ರದಾಯಗಳನ್ನು ರೂಡಿಸಿಕೊಂಡು ಬದುಕುತ್ತಿರುವ ಜನಸಮುದಾಯಗಳಿವೆ. ದೇಶದ ಪ್ರಗತಿಯಲ್ಲಿ ಗ್ರಾಮೀಣ ಕೊಡುಗೆ ಬಹಳ ದೊಡ್ಡದು.ಭಾರತೀಯರ ಬದುಕಿನ ಹಿಂದೆ ಹಳ್ಳಿಗಾಡಿನ ಭದ್ರ ಬುನಾದಿ ಇದ್ದು ನಂತರದಲ್ಲಿ ನಾಗರೀಕತೆಯ ತಲೆಎತ್ತಿ ನಿಂತಿದೆ.

ಭಾರತ ದೇಶ ಒಂದು ವಿಭಿನ್ನ, ವೈಶಿಷ್ಟ್ಯ ಪೂರ್ಣ, ಸಂಸ್ಕೃತಿಭರಿತವಾದಂತಂಹ ದೇಶ. ಇಲ್ಲಿ ಆಚಾರ–ವಿಚಾರ, ನಂಬಿಕೆ, ರೂಢಿ–ಸಂಪ್ರದಾಯ, ವಿಭಿನ್ನ ಭಾಷೆ, ವೇಷ–ಭೂಷಣ, ನಂಬಿಕೆ, ಧಾರ್ಮಿಕ ಕಟ್ಟುಪಾಡುಗಳನ್ನು ಕಾಣಬಹುದಾಗಿದೆ.ದೇವುಡು ನರಸಿಂಹ ಶಾಸ್ತ್ರಿಗಳು ಸಂಸ್ಕೃತಿಯ ಬಗ್ಗೆ ತಮ್ಮದೇ ಆದ ಅಭಿಪ್ರಾಯ (ವ್ಯಾಖ್ಯಾನ) ತಿಳಿಸಿದ್ದಾರೆ. "ಕಲಿತ ವಿದ್ಯೆಯ ಪ್ರಭಾವವೆನ್ನುವುದಕ್ಕಿಂತಲೂ ಅರಗಿದ ವಿದ್ಯೆಯ ಪರಿಣಾಮವೇ ಸಂಸ್ಕೃತಿ" ಎಂದು ಹೇಳಿ ಅದು ತಾಳಿಂದ ತುದಿಯವರೆಗೂ ಆಸ್ತಿಕವಾದದು, ಧರ್ಮ, ಕರ್ಮ ಜೀವನ, ಬ್ರಹ್ಮ ಜನ್ಮಸಂಸ್ಕಾರಗಳನ್ನು ಅಂಗೀಕರಿಸಿರುವುದು ಇಹದಲ್ಲಿ ಋಣಗಳನ್ನು ಪರದಲ್ಲಿ ಲೋಕಾಂತರಗಳನ್ನು ಒಪ್ಪಿರುವುದು.ಬಾಳು ಈಗ ಬೇಕಾದ ಹಾಗೆ ಎದ್ದು ಬಿದ್ದರೂ ಕೊನೆಗೆ ಎಂದಾದರೂ ಒಂದು ದಿನ ಆನಂದದಲ್ಲಿ ಮುಗಿಯುವುದು ಎಂಬುದನ್ನು ನಂಬಿರುವುದೇ ಸಂಸ್ಕೃತಿ ಎಂಬುದಾಗಿ ವಿವರಿಸಿದ್ದಾರೆ. ಹೀಗೆ ಸಂಸ್ಕೃತಿ ಎಂಬುದಕ್ಕೆ ವ್ಯಕ್ತಿಯ ಅಂತರಂಗದ

ಅಮೂರ್ತವಾದ ಜಗತ್ತಿನ ವಿವರಗಳೇ ಸಂಸ್ಕೃತಿಯಲ್ಲದ ಭಾರತವನ್ನು ಊಹಿಸಿಕೊಳ್ಳುವುದೇ ಕಷ್ಟವಾಗಿದೆ. ಏಕೆಂದರೆ ಮನುಷ್ಯ ಒಂದಲ್ಲ ಒಂದು ರೀತಿಯಲ್ಲಿ ವೈವಿಧ್ಯ ಪೂರ್ಣ ಸಂಸ್ಕೃತಿಯನ್ನು ಅನುಸರಿಸಿ ಬರುತ್ತಿದ್ದಾನೆ. ಆ ದಿವ್ಯ ಅಗೋಚರ ಅನಾಗರೀಕನಾಗಿದ್ದ ಮಾನವ ಆರಂಭದಲ್ಲಿ ಪ್ರಕೃತಿಯ ಆರಾಧಕನಾಗಿದ್ದ. ಕಲ್ಲು, ಭೂಮಿ, ಗಿಡ, ಮರ, ಸೂರ್ಯ, ಚಂದ್ರ ಮುಂತಾದವನ್ನು ಆರಾಧಿಸುತ್ತಿದ್ದನು. ಕಾಲಾನಂತರದಲ್ಲಿ ತನಗಿಂತಲೂ ಬಲಿಷ್ಠವಾದ ಸೂತ್ರಧಾರಿ ಶಕ್ತಿ ಇದೆ ಎಂದು ಪರಿಭಾಷಿಸಿ ಆ ದಿವ್ಯ ಅಗೋಚರ ಶಕ್ತಿಯನ್ನೇ ಜನರು ದೇವರೆಂದೂ, ಪರಮಾತ್ಮನೆಂದೂ, ಭಗವಂತನೆಂದೂ, ದೇವತೆಯೆಂದೂ, ಆದಿಶಕ್ತಿಯೆಂದೂ ಕರೆದರು.ಆರಾಧಕರು ತಮಗೆ ಸರಿಕಂಡ ಒಂದು ಆಕಾರ ಕಲ್ಪಿಸಿ ಇಲ್ಲವೇ ವಿಗ್ರಹ ಇರಿಸಿಕೊಂಡು ಶ್ರದ್ಧಾಭಕ್ತಿಗಳಿಂದ ಭಗವದ್ಶಕ್ತಿಯನ್ನು ಆರಾಧಿಸುತ್ತಾ, ದೇವಾನು ದೇವತೆಗಳ ಪರಮೋಚ್ಚ ಗುಣಗಳನ್ನು ಧ್ಯಾನಿಸುತ್ತಾ ಬರಲು, ಆ ದಿವ್ಯ ಗುಣಗಳು ಕ್ರಮೇಣ ವ್ಯಾಪ್ತಿಯಾಗಿ ನಮಗೆ ದಿವ್ಯಾನಂದ ಪ್ರಾಪ್ತಿಯಾಗುವುದು ಎಂದು ಶಾಸ್ತ್ರಗಳು ಹೇಳಿದೆ. ಇದೇ ತತ್ವವನ್ನು ಆದರಿಸಿ ನಮ್ಮ ಹಿರಿಯರು, ಅನೇಕಾನೇಕ ದೇವಾಲಯಗಳನ್ನು ನಿರ್ಮಿಸಿ ದೇವಿಯ ಕೃಪೆಗೆ ಪಾತ್ರರಾಗಿದ್ದಾರೆ. ಭವ ಬಂಧನದಿಂದ ದೂರಾಗಿ, ನೆಮ್ಮದಿಯ ಜೀವನ ನಡೆಸಿದ್ದಾರೆ. ಅಂತಹ ಪವಿತ್ರ ದೇವಾಲಯಗಳಲ್ಲಿ ಶ್ರೀ ಕಬ್ಬಾಳು ದುರ್ಗದ ಪರಮೇಶ್ವರಿ ದೇವಿಯ ದೇಗುಲವೂ ಒಂದಾಗಿದೆ.

ಕರ್ನಾಟಕ ರಾಜ್ಯದ ರಾಮನಗರ ಜಿಲ್ಲೆಯ, ಕನಕಪುರ ತಾಲ್ಲೂಕಿನ ಕಬ್ಬಾಳು ಗ್ರಾಮದಲ್ಲಿ ದುರ್ಗದ ಕೆಳಗೆ ಪೂಜಿಸಲ್ಪಡುತ್ತಿರುವ ಕಬ್ಬಾಳಮ್ಮ ಲಕ್ಷಾಂತರ ಭಕ್ತರನ್ನು ಹೊಂದಿರುವ ದೇವತೆ. ಕಬ್ಬಾಳಮ್ಮನನ್ನು ಸತ್ಯದೇವತೆ, ಕರಿದುರ್ಗಿ, ಕಬ್ಬಾಳಮ್ಮ ದುರ್ಗದ ದುರ್ಗಮ್ಮ ಇನ್ನೂ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಕೋಟಿ ಕೋಟಿ ಭಕ್ತರ ಹೃದಯ ಮಂದಿರದಲ್ಲಿ ಆರಾಧ್ಯ ದೈವವಾಗಿರುವ ಮಹಾದೇವಿ, ಶಕ್ತಿರೂಪಿಣಿ ಎನಿಸಿದ ಕಬ್ಬಾಳು ದುರ್ಗಾದೇವಿಯ ಕೀರ್ತಿಯನ್ನು ಕೇಳರಿಯದ

ಕನ್ನಡಿಗರಿಲ್ಲ. ಇಂದಿಗೂ ನಂದಿ ಆರಾಧಿಸುವ ಭಕ್ತರಿಗೆಲ್ಲ ಕಬ್ಬಾಳಿ ಶ್ರೀ ರಕ್ಷೆಯಾಗಿ ನಿಂತಿರುವುದು ಕಾಣಬಹುದು. ನಮ್ಮಮ್ಮ ಕಾಳಿ ಅನವರತವೂ ಅನಂತ ಲೀಲೆಗಳನ್ನು ತೋರುತ್ತಾ ಭಕ್ತೋದ್ಧಾರದ ಕಾರ್ಯವನ್ನು ಗೈಯ್ಯುತ್ತಿರುವುದು ಭಕ್ತಿಯ ಅಂತರಾಳಕ್ಕೆ ಗೋಚರಿಸುತ್ತದೆ.

ಜಗದೇಶ್ವರಿ ಕಬ್ಬಾಳಮ್ಮ ಭಕ್ತರ ಮನೆಮನಗಳಲ್ಲಿ ತುಂಬಿ ಭಕ್ತರ ಆರಾಧ್ಯ ಮೂರ್ತಿಯಾಗಿ ಪೂಜೆಗೊಳ್ಳುತ್ತಾ ಭಕ್ತರ ಬಾಳಗೆ ಬೆಳಕಾಗಿದ್ದಾಳೆ. ಜೀವ ಜೀವನ ಚೇತನವಾಗಿದ್ದಾಳೆ. ಕಲಿಯುಗದಲ್ಲಿ ಕಬ್ಬಾಳು ದೇವಿ ನಂಬಿದ ಭಕ್ತರ ಕಾಮಧೇನುವಾಗಿ ಅನಂತ ಭಕ್ತರ ಸಕಲಾಭೀಷ್ಟ ನೆರವೇರಿಸುವ ಅಮ್ಮನಾಗಿದ್ದಾಳೆ. ಜನರನ್ನು ಕಾಡುವ ಕಷ್ಟಗಳ ಗುಮ್ಮನಿಗೆ ಮಾರಿಯಾಗಿರುವುದು ತಿಳಿದು ಬರುತ್ತದೆ. ಇಂತಹ ಕಬ್ಬಾಳಮ್ಮನ ಹಿನ್ನೆಲೆ, ಕ್ಷೇತ್ರದ ಮಹಿಮೆಯನ್ನು ಆಚರಣೆಗಳನ್ನು ಸಾಂಸ್ಕೃತಿಕ ಲೋಕಕ್ಕೆ ಪರಿಚಯಿಸುವುದೇ ಈ ಪ್ರಭಂದದ ಮುಖ್ಯ ಉದ್ದೇಶವಾಗಿದೆ.

# ಅಧ್ಯಾಯ - ೨

## ದೇವರು ಧರ್ಮ ಕುರಿತ ವಿವೇಚನೆ

ದೇವರು ಎಂಬ ಕಲ್ಪನೆಯ ಪೂರ್ವ ಇತಿಹಾಸ. ಆ ಕಲ್ಪನೆಯ ಹಿಂದೆ ಭಯ, ಆಶ್ಚರ್ಯ, ರಕ್ಷಣೆಯನ್ನು ಬೇಡುವ ಮನೋವೃತ್ತಿ ಇವೆಲ್ಲವನ್ನು ಗುರುತಿಸಬಹುದು. ಅಂತೂ ದೇವರನ್ನು ಎದರು ಹಾಕಿಕೊಂಡರೆ ಅವನು ವಿಪತ್ತು ತಂದೊಡ್ಡು ತಾನೆ ಎಂಬ ಭಯದಿಂದಲೋ ಸುತ್ತಿನ ಅಪಾಯಕರ ಪ್ರಪಂಚದ ಕೋಟಲೆಯಿಂದ ನಮ್ಮನ್ನು ಪಾರು ಮಾಡಿಯಾನು ಎಂಬ ನಿರೀಕ್ಷೆಯಿಂದಲೋ ಅವನು ನಮ್ಮ ಉನ್ನತೋನ್ನತ ಮೌಲ್ಯಗಳ ಸಂಕೇತ ಎಂಬ ಭಾವನೆಯಿಂದಲೇ ಒಂದಲ್ಲ ಒಂದು ಕಾರಣದಿಂದಾಗಿ ಅಥವಾ ಅವೆಲ್ಲ ಕಾರಣಗಳಿಂದಾಗಿ ಈ ದೇವರು ಎಂಬ ಕಲ್ಪನೆ ನಮ್ಮ ಮನಸ್ಸಿನಲ್ಲಿ ಸುಳಿದಾಡುತ್ತಲೇ ಇರುತ್ತದೆ. ದೇವರು ಎಂದಾಕ್ಷಣ ಯಾವ ದೇವರನ್ನು ನೆನೆಯಬೇಕೋ ಎಂಬುದು ತಿಳಿಯದು ಯಾಕೆಂದರೆ ಮುನ್ನೂರ ಮೂವತ್ತು ಕೋಟಿ ದೇವತೆಗಳಿವೆಯಂತೆ ಯಾವ ದೇವರನ್ನು ನೆನೆಯುವುದು, ಯಾವ ದೇವರನ್ನು ಬಿಡುವುದು ಒಂದನ್ನು ನೆನೆದರೆ ಒಂದಕ್ಕೆ ಮುನಿಸು ಕೆಲವು ಶಕ್ತಿ ದೇವತೆಗಳು ಕೆಲವು ಭಯಪಡಿಸುವ ದೇವತೆಗಳನ್ನು ಕಾಣಬಹುದು. ಶಕ್ತಿ ದೇವತೆಗಳು ಎಂದಾಕ್ಷಣ ಹೆಚ್ಚಾಗಿ ಹೆಣ್ಣು ದೇವತೆಗಳು ಕಂಡು ಬರುತ್ತವೆ. ಆದಿಶಕ್ತಿ, ದುರ್ಗಾಶಕ್ತಿ, ಕಾಳಿ, ಚಾಮುಂಡೇಶ್ವರಿ ಎಂದೆಲ್ಲ ಕಂಡುಬರುತ್ತವೆ. ಹೆಣ್ಣು ದೇವತೆಗಳು ಸರ್ವಶಕ್ತಳಾಗಿ ಲೋಕವನ್ನೇ ಬೆಳಗಿರುವುದ ಕಾಣಬಹುದು. ಚಾಮುಂಡೇಶ್ವರಿ ಮಹಿಸಸೂರನನ್ನು ಒಂದು ತೊಟ್ಟು ರಕ್ತವು ಕೆಳಗೆ ಬೀಳದಂತೆ ಕೊಂದು 'ಮಹಿಸಮರ್ದಿನಿ' ಎನಿಸಿಕೊಂಡಳು. ಹೀಗೆ ಹೆಣ್ಣು ದೇವತೆಗಳು ಶಕ್ತಿ ದೇವತೆಗಳು ಎನಿಸಿಕೊಂಡರೆ ಮತ್ತೊಂದು ಕಡೆ ಹೆಸರನ್ನು ಕೇಳಿದಾಕ್ಷಣ ಮೈನಡುಕವಾಗಿ ಮೈಕೂದಲುಗಳು ನಿಂತು ಭಯವಾಗುವ ದೇವತೆಗಳನ್ನು ಕಾಣುತ್ತೇವೆ. ಆ ದೇವತೆಗಳೆಂದರೆ ಶನೇಶ್ವರ, ಶನೇಶ್ವರ ಎಂದಾಕ್ಷಣ ಭಯದಿಂದ ಸುಮ್ಮನಿದ್ದ ಕೈಗಳು ತನಗೆ ತಾನೆ ನಮಸ್ಕರಿಸುತ್ತವೆ. ಇದು ಆ ದೇವರಲ್ಲಿರುವ ಶಕ್ತಿ ಎಂದೇಳಬಹುದು. ಇವನು ಒಲಿದರೆ ಮಾದೇಶ್ವರ ಒಲಿಯದಿದ್ದರೆ ಶನೇಶ್ವರನಾಗಿದ್ದಾನೆ. ತನ್ನ ತಂದೆಯಾದ

ಸೂರ್ಯದೇವನನ್ನೇ ಬಿಡದೇ ಕಾಡಿದವನನು ಅದಕ್ಕಾಗಿಯೇ ನಾವು ಸೂರ್ಯಗ್ರಹಣ ಎಂದು ಸೂರ್ಯನನ್ನು ನೋಡಲು ಮಕ್ಕಳನ್ನು ಮನೆಯಿಂದ ಹೊರಬಿಡದೇ ಕೂಡಿಹಾಕುವುದು ಇಂದಿಗೂ ಕಾಣುತ್ತಿದ್ದೇವೆ. ಇಂದಿಗೂ ಹಲವಾರು ಜನರಲ್ಲಿ ಶನೇಶ್ವರನ ಕಥೆಗಳನ್ನು ಓದಿಸುತ್ತಿದ್ದಾರೆ.

ಗಣಪತಿ ಹಾಸ್ಯಕ್ಕೆ ಗುರಿಯಾದವನು ಆದರೂ ಭಕ್ತಿಯನ್ನು ಮರೆದಿರುವುದು ಕಾಣಬಹುದು.ಅವನಲ್ಲಿ ಹಾಸ್ಯವನ್ನು ಪ್ರೇರಿಸುವ ಶಕ್ತಿ ಇದೆ. ಹಾಸ್ಯ ಮಾಡುವ ಶಕ್ತಿಯೂ ಇದೆ. ತುಂಟ ಚೇಷ್ಟೆಗೆ ಅದಿದೇವತೆಯೊಬ್ಬನನ್ನು ನೇಮಿಸಬೇಕಾದರೆ ಆ ಸ್ಥಾನಕ್ಕೆ ಅರ್ಹನಾದವನೆಂದರೆ ಗಣಪತಿಯೊಬ್ಬನೇ? ಅವನ ತುಂಟತನದ ಹಿಂದೆ ಆಲೋಚನಾ ಪರತೆಯೂ ಒಂದು ಸಾರಿ ಅವನಿಗೂ ಸಣ್ಮುಕ (ಕುಮಾರಸ್ವಾಮಿ)ನಿಗೂ ಜಗಳ ಬಂದಿತಂತೆ ಇಬ್ಬರಲ್ಲಿ ಯಾರು ಹೆಚ್ಚು ಎಂದು. ತಂದೆಯಾದ ಶಿವ ಮಕ್ಕಳ ಜಗಳವನ್ನು ಬಿಡಿಸಲು ಮಧ್ಯೆ ಪ್ರವೇಶಿಸಬೇಕಾಯಿತು. "ನೀವಿಬ್ಬರೂ ಒಂದೇ ಘಳಿಗೆಯಲ್ಲಿ ಭೂಪ್ರದಕ್ಷಿಣೆಗೆ ಹೊರಡಿ ಯಾರು ಮೊದಲು ಪ್ರದಕ್ಷಿಣೆ ಮುಗಿಸಿ ಇಲ್ಲಿಗೆ ಬಂದು ಸೇರುತ್ತಾರೋ ಅವರು ಶ್ರೇಷ್ಠ" ಎಂದು ಹೇಳಿದ.ಇಬ್ಬರೂ ಒಪ್ಪಿಕೊಂಡರು. ಕುಮಾರಸ್ವಾಮಿ ಪಾಪ ನವಿಲೇರಿ ಕಷ್ಟಪಟ್ಟು ಭೂಮಿಯನ್ನೆಲ್ಲ ಸುತ್ತಿಕೊಂಡು ಬಂದರೆ, ಗಣಪತಿ ತನ್ನ ತಂದೆ ತಾಯಿಯರ ಸುತ್ತ ಒಂದು ಭೂ ಪ್ರದಕ್ಷಿಣೆ ಮಾಡಿ ಹಾಯಾಗಿ ಕೂತಕೊಂಡ ಈ ಬೊಬ್ಬು ಗಣಪ ನನಗಿಂತ ಬೇಗ ಭೂಪ್ರದಕ್ಷಿಣೆ ಮುಗಿಸಿಯಾನೆ! ಎಂದು ಸಣ್ಮುಕ ನಾನೆ ಗೆದ್ದೆ ಎಂದು ಕೊಂಡು ಬಂದು ನೋಡಿದರೆ ಗಣಪತಿ ಅಷ್ಟರಲ್ಲಾಗಲೇ ಬಂದು ಕುಳಿತಿದನ್ನು ಕಂಡು ಮುಂಚೆ ಬಂದು ಬಿಟ್ಟಿದ್ದಾನೆ. ಅಷ್ಟು ಬೇಗ ಭೂ ಪ್ರದಕ್ಷಿಣೆ ಮುಗಿಸಲು ಹೇಗೆ ಸಾಧ್ಯ ಎಂದು ಚರ್ಚೆ ನಡೆದಾಗ ಗಣಪತಿ ಹೇಳಿದ "ವಿಶ್ವವೆಲ್ಲ ಶಿವನಲ್ಲಿದೆ. ಅವನ ಸುತ್ತ ಒಂದು ಸಾರಿ ತಿರುಗಿದೆ ಮುಗಿಯಿತು! ಎಂದನಂತೆ.

ಇನ್ನೂ ಗಣಪನ ಬಗ್ಗೆ ಹೇಳಬೇಕೆಂದರೆ ತುಂಟತನ, ಸುಲಿಗೆ, ಹಾಸ್ಯ, ವಿದ್ಯೆ, ಬುದ್ಧಿ, ಕಲೆ, ಜನರಲ್ಲಿ ಭಕ್ತಿಯನ್ನು ಮಾತ್ರವಲ್ಲ ಪ್ರೀತಿಯನ್ನು ಅರಳಿಸುವಲ್ಲಿ ಊಟ

ತಿಂಡಿಗಳನ್ನು ಕಡೆಗಣಿಸಲೊಲ್ಲದ ಆರೋಗ್ಯಕರ ಮನೋಧರ್ಮ ಬೇರೆ ಯಾವ ಮತದ ದೈವಗಳಲಿಲ್ಲ. ಈ ಎಲ್ಲ ಗುಣಗಳೂ ಕಾಣುವುದಿಲ್ಲ.

ಪ್ರಾಣಿಗಳು ದೇವರಾಗಬಹುದಲ್ಲವೇ ನಾಗರ ಹಾವನ್ನು ದೇವರೆಂದು ಪೂಜೆ ಮಾಡುವುದು ನಮಲ್ಲಿ ಆಚರಣೆಯಲ್ಲಿದೆಯಷ್ಟೇ. ನಾಗಪ್ರತಿಷ್ಠೆ ಮಾಡಿದರೆ ಪುತ್ರಸಂತಾನ ಲಭಿಸುತ್ತದೆಂದು ಲಕ್ಷಗಟ್ಟಲೇ ಜನ ನಂಬಿದ್ದಾರೆ. ಅನಕ್ಷರಸ್ಥರಷ್ಟೇ ಅಲ್ಲದೇ ಘನ ವಿದ್ವಾಂಸರು ಕೂಡ ನಾಗಪ್ರತಿಷ್ಠೆ ಮಾಡಿದ್ದನ್ನು ನಾವು ಕಾಣಬಹುದು. ಮೊನ್ನೆಯಷ್ಟೇ ನಡೆದ ನಾಗರ ಪಂಚಮಿಗೆ ಗಂಡು-ಹೆಣ್ಣು ಬೇದವಿಲ್ಲದೇ ಬಂದ ಹಾವಿನ ಹೆಸರೇಳಿ ಹುತ್ತಕ್ಕೆ ಹಾಲೆರೆಯುವುದನ್ನು ನಾನು ಕಂಡಿದ್ದೇನೆ. ಬಸವಣ್ಣನವರು ಹೇಳುವಂತೆ "ಕಲ್ಲನಾಗರ ಕಂಡರೆ ಪೂಜಿಸುವರಯ್ಯ ದೇವದ ನಾಗರ ಕಂಡರೆ ಕೊಲ್ಲೆಂಬರಯ್ಯ ಎಂಬಂತೆ ನಿಜವಾದ ನಾಗರಹಾವು ಕಂಡರೆ ಅದನ್ನು ಸಾಯಿಸುವ ತನಕ ಬಿಡದೇ ಕೊಲ್ಲುತ್ತಾರೆ. ಇದು ಯಾವ ಧರ್ಮವೋ ಒಂದು ತಿಳಿಯದು.

ನಮ್ಮ ಹಿಂದೂ ಧರ್ಮವೆಂದರೆ ಆಚರಣೆಗಳ ಹುತ್ತ.ನಮ್ಮ ಹೈಂದವ ಋಷಿಗಳು, ಶಾಸ್ತ್ರ ಪಂಡಿತರು, ಸ್ಮೃತಿಕಾರರು ಮತ್ತು ನಮ್ಮ ವಂಶದ ಪೂರ್ವಜರು ನಮಗೆ ಈ ಆಚಾರ ಸಂಪ್ರದಾಯಗಳನ್ನು ವಶವಾಗಿ ಕೊಟ್ಟಿದ್ದಾರೆ. ಈ ಸದಾಚಾರಗಳಿಂದ ಮಾನವರ ಆಯುಃ ಕಾಲ ವೃದ್ಧಿಯಾಯ್ತು.ಆಚಾರ ರೂಪಗಳಿಂದ ಅನೇಕ ಆರೋಗ್ಯ ಭಾಗ್ಯಗಳನ್ನು ನಮಗೆ ದೇಣಿಗೆಯಾಗಿ ನೀಡಿದ್ದಾರೆ.ಧನಿಕನಾಗಲೀ, ದರಿದ್ರನಾಗಲೀ ಆಚಾರ ವ್ಯವಹಾರಗಳು ಕೈಬಿಡಬಾರದು ಪರಧರ್ಮದ ಆಚಾರಗಳನ್ನು ಪಾಲಿಸಬಾರದು. ಒಂದೊಂದು ಜಾತಿಗೆ ಕುಲ ಧರ್ಮಾಚಾರದಂತೆ ಆಚಾರಗಳಿವೆ. ಅವೆಲ್ಲವನ್ನು ನಾವು ಆಚರಿಸಲಾಗದಿದ್ದರೂ ಕೆಲವೊಂದು ಕುಲಾಚಾರಗಳನ್ನು ಆಚರಿಸಬೇಕು, ತಿಳಿಯಬೇಕು. ನಾವು ತಿಳಿದುಕೊಂಡ ನಂತರ ಹತ್ತಾರು ಮಂದಿಗೆ ತಿಳಿಸಬೇಕು. ಹೀಗೆ ಮಾಡುವುದರಿಂದ ನಮ್ಮ ಧರ್ಮಕ್ಕೆ ನಾವು ಸೇವೆ ಮಾಡಿದಂತಾಗುತ್ತದೆ.

ಆದರೇ ಪರಮತದವರ ಆಚಾರಗಳನ್ನು ಹೀಯಾಳಿಸಬಾರದು, ವಿಮರ್ಶೆ ಮಾಡಬಾರದು. ಅಪಹಾಸ್ಯ ಮಾಡಬಾರದು, ವಾದಕ್ಕಿಳಿಯಬಾರದು. ಜಗತ್ತಿನಲ್ಲಿ

ಐದುನೂರಾ ಎರಡು ಮತಧರ್ಮಗಳಿವೆ. ಇವುಗಳಲ್ಲಿ ಹತ್ತು ಮತ-ಧರ್ಮಗಳು ಬಹಳ ಪ್ರಚಾರದಲ್ಲಿವೆ. ಕೆಲವು ಭಾರತದಲ್ಲಿ ಮುಖ್ಯವಾಗಿ ಪ್ರಚಾರದಲ್ಲಿ ಆರು ಮತ ಧರ್ಮಗಳಿವೆ. (ಹಿಂದೂ, ಮಹಮ್ಮದೀಯ, ಕ್ರೈಸ್ತ, ಜೈನ, ಬೌದ್ಧ, ಸಿಖ್) ಒಂದೊಂದು ಧರ್ಮಕ್ಕೆ ಒಂದೊಂದು ರೀತಿಯ ವಿಚಾರ ವ್ಯವಹಾರಗಳಿವೆ. ಒಂದೊಂದು ರಾಜ್ಯಕ್ಕೆ ಒಂದೊಂದು ವಿಧವಾದ ಪೂರ್ವಾಚರಗಳು ಇವೆ.

ಒಂದೇ ಧರ್ಮಕ್ಕೆ ಸಾವಿರಾರು ರೀತಿಯ ಆಚಾರಗಳಿವೆ. ಇವುಗಳಲ್ಲಿ ಅರ್ಧ ಭಾಗದಷ್ಟು ಮೂಢಾಚಾರಗಳಿವೆ. ಉಳಿದ ಅರ್ಧ ಭಾಗದಲ್ಲಿ ಕಾಲುಭಾಗ ಡಂಬಾಚಾರಗಳಿವೆ. ಪ್ರತಿಯೊಂದು ಧರ್ಮಾಚಾರದಲ್ಲಿಯೂ ಪ್ರಯೋಜನವಿದೆ.

ಕಲ್ಲು ಮರಗಿಡಗಳು ದೇವರಾಗಬಹುದು.ಮಾರಮ್ಮನ ಗುಡಿಗಳಲ್ಲೆಲ್ಲ ಸಾಮಾನ್ಯವಾಗಿ ಇರುವುದು. ಕಲ್ಲಿನ ವಿಗ್ರಹವಲ್ಲ, ಬರೀ ಕಲ್ಲು, ಮಾರಮ್ಮ ಅದರಲ್ಲಿ ನೆಲಸಿ ಅದಕ್ಕೆ ದೇವತ್ವ ಕೊಡುತ್ತಾಳೆ ಎಂದು ನಂಬಿಕೆ. ಗಿಡಗಳ ಪೂಜೆಗೆ ಸುಲಭವಾಗಿ ನೆನಪಿಗೆ ಬರುವ ಉದಾಹರಣೆಯೆಂದರೆ ಈಗಲೂ ಚಾಲತಿಯಲ್ಲಿರುವ ತುಳಸಿ ಪೂಜೆ.ತುಳಸಿ ಪೂಜಾ ಸಾಮಾಗ್ರಿಯೂ ಆಗುತ್ತದೆ. ತಾನೂ ಪೂಜೆಯನ್ನು ಸ್ವೀಕರಿಸುತ್ತದೆ. ಅರಳಿಯ ಮರವು ದೇವರು.ಅದು ದೈವತ್ವವನ್ನು ಪಡೆದು ಅಶ್ವತ್ಥ ನಾರಾಯಣ ಆಗಿದೆ. ಅದಕ್ಕೆ ನೂರೆಂಟು ಪ್ರದಕ್ಷಿಣೆ ಮಾಡಿದವರಿಗೆ ಸಂತಾನ ಲಭಿಸುತ್ತದೆ.ಅದರ ಮಗ್ಗಲಲ್ಲಿ ಒಂದು ಬೇವಿನ ಮರವನ್ನು ಬೆಳಸಿ ಎರಡಕ್ಕೂ ಶಾಸ್ತ್ರೋಕ್ತವಾಗಿ ಮದುವೆ ಮಾಡಿದರೆ ಪುಣ್ಯ ಬರುತ್ತದೆ ಎಂದು ನಂಬಿ ಮದುವೆ ಮಾಡಿಸುವ ಜನ ಈಗಲೂ ಇದ್ದಾರೆ. ಹಾಗೆಯೇ ತಾರೆ ಮರ ಪೂಜೆ ಮಾಡಿದರೆ ಹಿಡಿದಿರುವ ಶನಿ ಬಿಟ್ಟು ಒಳ್ಳೆಯ ದಿನಗಳು ಬರುತ್ತವೆ ಎಂದು ಮರಗಳನ್ನು ಪೂಜಿಸುವುದನ್ನು ನಾವು ಕಾಣಬಹುದು.ಬಿಲ್ವಪತ್ರೆಯ ಮರದಲ್ಲಿ ಶಿವನಿರುವನೆಂದು ಪೂಜಿಸುವುದು ನೋಡುತ್ತಿದ್ದೇವೆ. ದೇವರು ಅನಂತ ಅವನಿಗೆ ಯಾವ ಮಿತಿಯೂ ಇರುವುದು ಸಾಧ್ಯವಿಲ್ಲ. ಅವನಿಗೆ ಯಾವುದೊಂದು ಗುಣವನ್ನು ಆರೋಪಿಸಿದರೂ ಮಿತಿಯನ್ನು ಕಲ್ಪಿಸಿದಂತಾಗುತ್ತದೆ. ಉದಾ:- ಅವನು ಅಣುವಿಗಿಂತ ಚಿಕ್ಕವನು ಎಂದ

ಕೂಡಲೇ ಅವನು ಅಣುವಿಗಿಂತ ದೊಡ್ಡವನಾಗಿರುವುದು ಸಾಧ್ಯವಿಲ್ಲ ಎಂದಂತಾಗುತ್ತದೆ. ಆದರೆ ಗುಣವೇ ಇಲ್ಲದ ವಸ್ತುವನ್ನು ಎಲ್ಲಿಂದ ತರೋಣ! ಅಂಥ ವಸ್ತು ಇಲ್ಲವೇ ಇಲ್ಲ ಗುಣವಿಲ್ಲದವನಾದರೆ ದೇವರಿಗೆ ಅಸ್ತಿತ್ವವಿಲ್ಲ. ಗುಣವಿದ್ದರೆ ಅವನು ದೇವರಲ್ಲ. ಈ ತರ್ಕದ ಜಾಲದಿಂದ ಬಿಡಿಸಿಕೊಳ್ಳುವುದಕ್ಕಾಗಿ 'ನಿರ್ಗುಣ' ಎಂಬ ಪದಕ್ಕೆ ನಿರ್ದಿಷ್ಟವಾದ ಇಂಥದೊಂದು ಗುಣವುಳ್ಳವನು ಎಂದು ಹೇಳಲಾಗದ ವ್ಯಕ್ತಿ. ಆದರೆ ಎಲ್ಲ ಗುಣಗಳನ್ನು ವಿನಾಯಿತಿಯಿಲ್ಲದೇ ಎಲ್ಲ ಗುಣಗಳನ್ನು ಹೊಂದಿರುವವನು ಎಂದು ಕೆಲವರು ಅರ್ಥ ಮಾಡುತ್ತಾರೆ.

'ತಮಸೋಮಾ ಜೋತಿರ್ಗಮಯ' ಎಂದು ಹೇಳುತ್ತಿದ್ದ ಬೌದ್ಧ ಧರ್ಮ ತಮಸೋಮ ಜೋತಿರ್ಗಮಯ ಎಂದರೆ "ಕತ್ತಲಿನಿಂದ ಬೆಳಕಿನೆಡೆಗೆ ಬಾ" ಎಂದರ್ಥ. ದೇವರ ಮುಂದೆ ದೀಪವನ್ನೇಕೆ ಬೆಳಗಿಸಬೇಕೆಂದರೆ ನಮ್ಮ ಮನಸ್ಸಿನಲ್ಲಿರುವ ಅಜ್ಞಾನ, ವ್ಯಾಮೋಹ, ಭಯ, ಅಪನಂಬಿಕೆ, ಪಾಪಚಿಂತನೆ, ದುರಾಪೇಕ್ಷೆ, ವಕ್ರಬುದ್ಧಿಗಳನ್ನು ದೂರಮಾಡಿ ವಿವೇಕ ಮಾರ್ಗಕ್ಕೆ ದೇವರು ದಾರಿತೋರಲಿ ಎಂಬ ಸೂಚನೆಗಾಗಿ ದೇವರಿಗೆ ಆತ್ಮ ನಿವೇದನೆಯನ್ನು ಮಾಡುವ ಪದ್ಧತಿ ಇದೆ.

ದೇವರನ್ನು ಹೂಗಳಿಂದಲೇ ಪೂಜಿಸಬೇಕೆಂಬ ನಿಯಮವೇನಿಲ್ಲ. ದೇವರನ್ನು ತಪೋಶಕ್ತಿಯಿಂದ ಪ್ರಸನ್ನ ಮಾಡಿಕೊಂಡು ದರ್ಶನ ಪಡೆದು ದಿವ್ಯ ವರಗಳನ್ನು ಪಡೆದ ಮಹರ್ಷಿಗಳು ಹೂಗಳಿಂದ ಪೂಜಿಸಲಿಲ್ಲ. ತೆಂಗಿನಕಾಯಿ ಒಡೆಯಲಿಲ್ಲ, ಅಗರಬತ್ತಿ ಹಚ್ಚಲಿಲ್ಲ, ಕರ್ಪೂರ ಬೆಳಗಲಿಲ್ಲ, ಗಂಟೆ ಬಾರಿಸಲಿಲ್ಲ. ಆದರೂ ನಾವು ಪೂಜೆ ಮಾಡುವ ಅನೇಕ ಹೂಗಳಿಗೆ ಅನೇಕ ಧರ್ಮಗಳಿವೆ. ಒಂದೊಂದು ಹೂವಿನಲ್ಲಿ ಒಂದೊಂದು ಗುಣವಿದೆ. ಎಲ್ಲಾ ಹೂಗಳು ದೇವರ ಪೂಜೆಗೆ ಉಪಯುಕ್ತವಲ್ಲ. ದೈವಪೂಜೆಗೆ ನಿಷಿದ್ಧ. ಅಂದರೆ ಗುಲಾಬಿ ಮುಂತಾದ ಹೂಗಳು ದೇವರ ಪೂಜೆಗೆ ನಿಷಿದ್ಧವಾಗಿವೆ. ಕೆಲವರು ಪರಿಸರ, ಪ್ರಕೃತಿ ಪ್ರೇಮಿಗಳಿರುತ್ತಾರೆ ಅಂಥವರೂ ಹೂ ಮರದಿಂದ ಪುಷ್ಪಗಳನ್ನು ಬೇರ್ಪಡಿಸಲು ಅಂಗೀಕರಿಸುವುದಿಲ್ಲ. ಅಂಥ ಸಂದರ್ಭದಲ್ಲಿ ಗಂಧಾಕ್ಷತೆಗಳಿಂದ ಪೂಜಿಸಬಹುದು. ಲಕ್ಷ್ಮೀ ದೇವಿಯನ್ನು ಹಳದಿ ಪುಡಿ (ಅರಿಶಿನ

ಪುಡಿ) ಯಿಂದಲೂ, ಪಾರ್ವತಿ ಮಾತೆಯನ್ನು ಕುಂಕುಮದಿಂದಲೂ, ಗಣೇಶನನ್ನು ಎಲೆಗಳಿಂದಲೂ ಪೂಜಿಸಬಹುದು.

ಧರ್ಮ ಎಂದರೆ ಮಾನವ ದಾನ ಧರ್ಮಗಳಿಂದ ದೈವಪೂಜೆಯ ವಿಧಾನವನ್ನು ಅವಲಂಬಿಸಿ, ದೈಹಿಕ ಮುಕ್ತಿಯನ್ನು ಪಡೆಯಬೇಕು ಎನ್ನುತ್ತಿದೆ. ಹಿಂದೂ ಧರ್ಮ ದೇವರನ್ನು ಮಂತ್ರಗಳಿಂದ ಪೂಜಿಸಬೇಕೆನ್ನುತಿದೆ ಹಿಂದೂ ಧರ್ಮ. ಹಿಂದೂ ಧರ್ಮವನ್ನು ಪರಮಾತ್ಮನೇ ಸ್ಥಾಪನೆ ಮಾಡಿದ್ದನೆಂದು ನಂಬುತ್ತಾರೆ. ಅನೇಕ ಸಾವಿರಾರು ವರ್ಷಗಳ ಹಿಂದೆ ಈ ಧರ್ಮ ಸ್ಥಾಪನೆಯಾಗಿದೆ. ಹಿಂದೂ ಧರ್ಮವು ಅತಿ ಪ್ರಾಚೀನ ಧರ್ಮವಾದುದರಿಂದ ಇದನ್ನೇ ಪರಮತದವರ ಆಚಾರಗಳನ್ನು ಹೀಯಾಳಿಸಬಾರದು. ವಿಮರ್ಶೆ ಮಾಡಬಾರದು. ಅಪಹಾಸ್ಯ ಮಾಡಬಾರದು, ವಾದಕ್ಕಿಳಿಯಬಾರದು. ಜಗತ್ತಿನಲ್ಲಿ ಐದುನೂರಾ ಎರಡು ಮತಧರ್ಮಗಳಿವೆ. ಇವುಗಳಲ್ಲಿ ಹತ್ತು ಮತ ಧರ್ಮಗಳು ಬಹಳ ಪ್ರಚಾರದಲ್ಲಿವೆ. ಕೇವಲ ಭಾರತದಲ್ಲಿ ಮುಖ್ಯವಾಗಿ ಪ್ರಚಾರದಲ್ಲಿ ಆರು ಮತ ಧರ್ಮಗಳಿವೆ (ಹಿಂದೂ, ಮಹಮ್ಮದೀಯ, ಕ್ರೈಸ್ತ, ಜೈನ, ಬೌದ್ಧ, ಶಿಖ್) ಒಂದೊಂದು ಧರ್ಮಕ್ಕೆ ಒಂದೊಂದು ರಾಜ್ಯಕ್ಕೆ ಒಂದೊಂದು ವಿಧವಾದ ಪೂರ್ವಚಾರಗಳು ಇವೆ.

ಒಂದೇ ಧರ್ಮಕ್ಕೆ ಸಾವಿರಾರು ರೀತಿಯ ಆಚಾರಗಳಿವೆ. ಇವುಗಳಲ್ಲಿ ಅರ್ಧಭಾಗದಲ್ಲಿ ಕಾಲುಭಾಗ ದಂಬಾಚಾರಗಳಿವೆ. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳಾಗಿ ಬೇರ್ಪಟ್ಟರೂ ಹಿಂದೂ ಧರ್ಮವೆಂಬ ಕಾರಣದಿಂದ ನಾವು ಭಿನ್ನತ್ವದಲ್ಲಿ ಏಕತ್ವವನ್ನು ಸಾಧಿಸಿಕೊಂಡಿದ್ದೇವೆ. ಧರ್ಮ ಕಾರಣದಿಂದ ನಾವು ಒಗ್ಗಟ್ಟಿನಿಂದ ಬಾಳುತ್ತಿದ್ದೇವೆ. ಸಾಮಾಜಿಕ ಬಂಧುತ್ವವನ್ನು ಹೊಂದಿದ್ದೇವೆ.

"ಧರ್ಮೋರಕ್ಷತಿ ರಕ್ಷಿತಃ" ಪ್ರತಿಯೊಂದು ಧರ್ಮಾಚಾರದಲ್ಲಿಯೂ ಪ್ರಯೋಜನವಿದೆ.

# ಅಧ್ಯಾಯ – ೩

# ಕಬ್ಬಾಳಮ್ಮ ಕ್ಷೇತ್ರದ ಇತಿಹಾಸ

- **ಪೌರಣಿಕ ಹಿನ್ನೆಲೆ:**

ಭೂಲೋಕವನ್ನೇ ಅಳೆಯುವ ಮಾನದಂಡವೇನೋ ಎಂಬಂತಿರುವ ಹಿಮಾಲಯ ಪರ್ವತ, ಜಗತ್ತಿಗೇ ಅಲಂಕಾರಪ್ರಾಯ.ಈ ಗಿರಿಯು, ನಾನಾ ವಿದಧ ತರು–ಲತೆಗಳಿಂದ, ಗೈರಿಕಾದಿ ಧಾತುಗಳಿಂದ, ಹುಲಿ, ಕರಡಿ, ಸಿಂಹ, ಶಾರ್ದೂಲ, ಆನೆ, ಜಿಂಕೆ, ಕಸ್ತೂರಿ, ಮೊದಲಾದ ಮೃಗಗಳಿಂದ ಚಿತ್ರ ವಿಚಿತ್ರ ಪಕ್ಷಿ ಸಂಕುಲದಿಂದ, ಜಲಚರಗಳಿಂದ, ಅರಳಿ ಪರಮಳಿಸುವ ಸಾವಿರಾರು ವಿಧದ ಪುಪ್ಪರಾಶಿಯಿಂದ ಸುಕ್ ಪಿಕ್ ಮಯೂರಾದಿಗಳಿಂದ, ಶೋಭಾಯಮಾನವಾಗಿತ್ತು.

ಇಲ್ಲಿ ಪಾರ್ವತಿ ಪರಮೇಶ್ವರರು, ಭಕ್ತರ ಭವ ಬಂಧನ ಕಳೆಯುತ್ತಾ, ಕಷ್ಟ ಕಾರ್ಪಣ್ಯಗಳನ್ನು ಕಳೆಯುತ್ತಾ, ಶರಣ–ಸಂತರಿಗೇ, ಭಕ್ತರಿಗೇ, ಶಿವ ಪದವಿ ಕರುಣಿಸುತ್ತಾ ಇರುವಾಗ, ಆಗಾಗ, ಶಿವ–ಶಿವೆಯರಿಗೆ ಒಂದು ನೋವಿನ ದನಿ ಕೇಳುತ್ತಿತ್ತು. ನೋವಿನಲ್ಲಿ ಭಕ್ತಿ ಅಡಕವಾಗಿತ್ತು. ಅದೇಕೋ ಆ ಶುಭದಿನ ಶಿವನ ರಾತ್ರಿಯ ದಿನ. ಆ ಅರ್ಥನಾದವು ಅಲೆಯಾಗಿ, ಶಿವ–ಶಿವೆಯರ ಗಮನ ಸೆಳೆಯಿತು. ರಜತಾದ್ರಿಯಲ್ಲಿ ನಂದಿ, ಭೃಂಗಿ, ಭೃಕಟಿ, ಮೊದಲಾದ ಗಣಧೀಶ್ವರರಿಂದ ಪ್ರಟುಥ ಗಣಗಳಿಂದ ಗಣಪತಿ, ಷಣ್ಮುಖ, ವೀರಭದ್ರಾದಿಗಳಿಂದ ಸೇವೆ ಪಡೆಯುತ್ತಿದ ಶಿವ–ಶಿವೆಯರ ಚಿತ್ತ ಅತ್ತ ಹೋಯಿತು. ಆ ದನಿಯು ಕೊಂಗ ದೇಶದ ಶಿವಭಕ್ತರ ಮೊರೆಯಾಗಿತ್ತು.

ಕೊಂಗ ದೇಶದ ಶಿವ ಭಕ್ತರು ಭರಿಯಮ್ಮ ಮತ್ತು ಭರಿಯಪ್ಪ. ಕಡು ಬಡವರಾಗಿದ್ದರೂ ನೇಮ(ನಿಯಮ), ನಿಷ್ಠೆ, ಭಕ್ತಿ, ಶ್ರದ್ದೆ, ಸತ್ಯ, ಧರ್ಮ, ನ್ಯಾಯಗಳನ್ನೇ ತಮ್ಮ ಉಸಿರೆಂದು ನಂಬಿದವರು. ಲಗ್ನವಾಗಿ ಹನ್ನೆರಡು ವರುಷಗಳು ಕಳೆದಿದ್ದರೂ ಮಕ್ಕಳ ಭಾಗ್ಯವಿಲ್ಲದೇ ಸಂತಾನಕ್ಕಾಗಿ ಶಿವ ಪಾರ್ವತಿಯರಲ್ಲಿ ಮೊರೆ ಇಡುತ್ತಾ,

ನಂಬಿಕೆಟ್ಟವರಿಲ್ಲಾ ಎಂದು, ಇಂದಲ್ಲಾ ನಾಳೆ ನಮ್ಮ ಬದುಕಲ್ಲೂ ಬೆಳಕು ಹರಿವುದೆಂದು ಕಾತರಿಸಿ ಕುಳಿತವರು.

ಶಿವನು ಪಾರ್ವತಿ ದೇವಿಯನ್ನು ಇವರಿದಲ್ಲಿಗೆ ಕಳಿಸಿದನು.ಭಕ್ತರ ಭಾಗ್ಯೋಂಕಾರದ ಶುಭಗಳಿಗೆ ಕೂಡಿ ಬಂದಿತ್ತು. ಪತಿಯ ಮಾತಿಗೆ ಶಿರ ಬಾಗಿ ಪಾರ್ವತಿಯು ಕೊಂಗ ನಾಡಿನಲ್ಲಿ ಇಳಿದಳು.ಭಕ್ತರನ್ನು ಪರೀಕ್ಷಿಸಲು, ಹರಿದ ಸೀರೆ-ರವಿಕೆ ತೊಟ್ಟು, ಹುಚ್ಚಿಯ ರೂಪದಲ್ಲಿ ಬರಿಯಪ್ಪ ಬರಿಯಮ್ಮನ ಗುಡಿಸಲತ್ತ ಸಾಗಿದಳು.ಭಕ್ತರನ್ನು ಅರಸಿ ಅಂಬೆಯೇ ಬಂದಳೆಂದ ಮೇಲೆ ಈ ಬರಿಯಪ್ಪ, ಬರಿಯಮ್ಮ ಅದೆಷ್ಟು ಭಾಗ್ಯವಂತರಿಸಬೇಕು? ಅದೆಷ್ಟು ಪುಣ್ಯದ ಗಂಟು ಕಟ್ಟಿರಬೇಕು?ಒಂದು ದೇವಿ ಭಕ್ತರ ಮನೆಯತ್ತ! ಅಮ್ಮ, ಹಸಿವು! ಭಿಕ್ಷೆ ನೀಡಿ ತಾಯಿ ಎಂದು ಅರ್ಥತೆಯಿಂದ ಕೂಗುತ್ತಾ, ಭಕ್ತ ಶ್ರೇಷ್ಠರೂ, ಮಹಾ ದಾನ ಹೃದಯ ಉಳ್ಳವರೂ ಕಡೆಗೆ ದಟ್ಟ ದರಿದ್ರರೂ ಆದ ಬರಿಯಪ್ಪ ಬರಿಯಮ್ಮ ಭಿಕ್ಷೆ ಎಂದ ಪದ ಕೇಳುತ್ತಿದ್ದಂತೆಯೇ, ಓಡೋಡಿ ಬಂದು ನೋಡುತ್ತಾರೆ.... ಹರಿದ ಸೀರೆ-ರವಿಕೆ ತೊಟ್ಟು ತಲೆಯನ್ನು ಕೆರೆಯುತ್ತಾ ಮಹಾ ಮಾಯಿ ಭಕ್ತರ ಬಳಿ ಮತ್ತೊಮ್ಮೆ ಭಿಕ್ಷೆ ಬೇಡಿದಳು. "ಅಮ್ಮಾ ಹಸಿವು, ಭಿಕ್ಷೆ ಕೊಡ್ರಮ್ಮಾ" ಬರಿಯಪ್ಪ ಬರಿಯಮ್ಮರ ಕರುಳು ಹಿಂಡಿದಂತಾಯಿತು. ಬರಿಯಪ್ಪ ಮಡದಿಯನ್ನು ಕೇಳಿದ "ಒಳಗೇನಾದ್ರು ಇದೆಯೇನೇ? ಪಾಪ! ಎಷ್ಟು ದಿನಾ ಆಯ್ತೋ?ಈ ತಾಯಿ ಉಂಡು!" ಪತಿಯ ಮಾತು ಕೇಳಿ ಬರಿಯಮ್ಮ "ನೆನ್ನೆಯ(ತಂಗ್ಳು) ಸ್ವಲ್ಪ ಮಿಕ್ಕಿದೆ. ಅದ್ನೇ ಸಿವನ್ಗೇ ಅರ್ಪಣೆ ಮಾಡಿ ಮಧ್ಯಾನಕ್ಕೆ ಪ್ರಸಾದ ಅಂತ ಉಣ್ಣಾಕ್ಕಿಟ್ ಕಳುವಾ ಅಂತಿದ್ದೇ. ಎಲ್ಲಾ ಸಿವನಿಚ್ಛೆ! ಆಯವ್ವಾನ್ನಾ ಒಳೀಕ್ಕೆ ಕರೀರಿ ಎಂದು ಮಹಾ ದೇವಿಯನ್ನು ಇಬ್ಬರೂ ಕರೆದುಕೊಂಡು ಹೋಗಿ ತಮ್ಮ ಯೋಗ್ಯತೆಗೆ ಅನುಸಾರವಾಗಿ ಊಟ ಮಾಡಿಸಿ, ಉಪಚಾರ ಮಾಡುತ್ತಿರುವಾಗ ಜಗನ್ಮಾತೆ ಸಂತೃಪ್ತಳಾದಳಂತೆ. "ಆಹಾ! ನನ್ನ ಭಕ್ತರು ಅದೆಷ್ಟು ಒಳ್ಳೆಯವರು, ಇವರಿಗೆ ಮಕ್ಕಳ ಫಲ ಕೊಡಲಿಲ್ಲವಲ್ಲ! ಎಂದು ನೊಂದುಕೊಂಡು.ತಾಯಿ ಪಾರ್ವತಿಯು ತಾನು ತುರುಬಲ್ಲಿ ಮುಡಿದಿದ್ದ ಒಂದು ಮಲ್ಲಿಗೆ ಮೊಗ್ಗನ್ನು ಆ

ಗುಡಿಸಿಲಲ್ಲಿ ಹಾಕಿ ಅದೃಶ್ಯಳಾದಳಂತೆ. ಇದ್ದಕ್ಕಿದ್ದ ಹಾಗೆ ಹುಚ್ಚಿಯು ಮಾಯವಾದಾಗ, ಗಂಡ-ಹೆಂಡತಿ ಭಯ ಭೀತರಾದಂತೆ, ನಂತರ ಯೋಚಿಸಿ "ಓಹೋ ನಮ್ಮ ಮೊರೆ ಕೇಳಿ ಆ ನಮ್ಮವ್ವಾ ದೇವಿನೇ ನಂ ಮನೇಗ್ ಬಂದು ಭಾಗ್ಯ ಕರುಣಿಸಿ ಹೋಗಿದ್ದಾಳೆ" ಅಂತ ತಿಳಿದು, ತಾಯಿ ಬಿಟ್ಟು ಹೋಗಿದ್ದ ಮೊಗ್ಗನ್ನು ಬರಿಯಮ್ಮ ಶಿವನ ಪಾದದ ಬಳಿಯಿಟ್ಟು, ಕೈ ಮುಗಿದು ಗಂಡನಿಗೆ ನಮ್ಮಸ್ಕರಿಸಿ, ಗಂಡನ ಕೈಯಿಂದ ತನ್ನ ಮುಡಿಯಲ್ಲಿ ಮುಡಿಸಿಕೊಂಡಳಂತೆ. ಆಗ ಪಾರ್ವತಿಯ ದಯೆಯಿಂದ ಒಂದೆರಡು ತಿಂಗಳಲ್ಲಿ ಬರಿಯಮ್ಮ ಗರ್ಭವತಿ ಆದಳಂತೆ, ಒಂಭತ್ತು ತಿಂಗಳು ಕಳೆಯುತ್ತಿದ್ದ ಹಾಗೆ ಬರಿಯಮ್ಮ ಒಂದು ಮುದ್ದಾದ ಹೆಣ್ಣು ಮಗುವಿಗೆ ಜನ್ಮ ಕೊಟ್ಟಳು. ಭರಿಯಪ್ಪ ಭರಿಯಮ್ಮರ ಜೀವನ ಧನ್ಯವಾಯಿತು. ಮಕ್ಕಳಿಲ್ಲಾ ಎನ್ನುವ ನೋವು ದೂರವಾಗಿ ಭರಿಯಮ್ಮಳಿಗೆ ಅಂಟಿಕೊಂಡಿದ್ದ ಬಂಜೆಯ ಪಟ್ಟಾ ಅಳಿಸಿಹೋಯಿತು. ಪುರೋಹಿತರನ್ನು ಕರೆಸಿ ಒಂದು ಒಳ್ಳೆಯ ಮುಹೂರ್ತದಲ್ಲಿ ತನ್ನ ಮಗಳಿಗೆ ನಾಮಕರಣ ಶಾಸ್ತ್ರವನ್ನು ನೆರವೇರಿಸಲು ಕೇಳಿಕೊಂಡರು. ಪುರೋಹಿತರು ಪಂಚಾಂಗವನ್ನು ತೆಗೆದು ಗುಣಿಸಿ, ಕೂಡಿ, ಕಳೆದು ಈ ಶಿಶುವು ಸಾಕ್ಷಾತ್ ಶ್ರೀ ಆದಿಶಕ್ತಿಯ ಅಂಶಳಾಗಿರುವುದರಿಂದ, ಇವಳು ಪಾರ್ವತಿಯ ಸತ್ಯದಿಂದ ಜನಿಸಿರುವುದರಿಂದ "ಸತ್ಯದೇವತೆ" ಎಂಬ ಹೆಸರಿಡುವುದು ಸೂಕ್ತವೆಂದು ಹೇಳಿದರು.ಶುಭ ದಿನದಂದು, ಶುಭ ಮೂಹೂರ್ತದಲ್ಲಿ ಅದ್ದೂರಿಯ ಶಾಸ್ತ್ರವೂ ಮುಗಿಯಿತು.ಮಗು ಸತ್ಯವತಿ, ಆಡುತ್ತಾ-ಪಾಡುತ್ತಾ ಎಲ್ಲರ ಮೆಚ್ಚುಗೆ ಗಳಿಸುತ್ತಾ ಬೆಳೆಯುತ್ತಿರ ಬೇಕಾದರೆ ಶಿವ ಭರಿಯಪ್ಪ ಮತ್ತು ಭರಿಯಮ್ಮರಿಗೆ ಮತ್ತೊಂದು ಹೆಣ್ಣು ಮಗುವನ್ನು ಕರುಣಿಸಿದ ಆ ಮಗುವಿಗೆ "ಬಿಸಿಲಮ್ಮ" ಎಂದು ನಾಮಕರಣ ಮಾಡಿದರು. ಆ ಎರಡು ಮಕ್ಕಳ ಮುದ್ದು ಮಾತುಗಳಿಂದ ತುಂಟಾಟಗಳಿಂದ ಭರಿಯಪ್ಪನ ಮನೆ ಸ್ವರ್ಗವೇ ಆಗಿತ್ತು. ಕಾಲ ಕಳೆದಂತೆ ಮತ್ತೊಂದು ಮಗು ಜನಿಸಿತು. "ಭೈರವ" ಎಂದು ನಾಮಕರಣ ಮಾಡಿದರು. ಹಾಗೆ ಕಾಲ ಉರುಳಿದಂತೆ ಮಕ್ಕಳು ದೊಡ್ಡವರಾಗುತ್ತಾ ಹೋದರು. ಒಂದು ದಿನ ಸತ್ಯದೇವತೆ ತನ್ನ ಗೆಳತಿಯರನ್ನ ಕೂಡಿ ಆಡವಾಡುತ್ತಿರುವಾಗ ಅದೇ ಮಾರ್ಗವಾಗಿ ಬರುತ್ತಿದ್ದ ಕೊಂಗ ದೇಶದ ಅರಸ ಕಣ್ಣಿಗೆ

ಬಿದ್ದಳು. ಸತ್ಯದೇವತೆಯ ಚೆಲುವಿಗೆ ಮಾರಿಹೋದ ಅರಸ ಒಡನೆಯೇ ತನ್ನ ಮಹಾ ಮಂತ್ರಿಯನ್ನು ಕರೆಸಿ, ಈಕೆಯ ಪೂರ್ವಪರ ಪೂರ್ಣವಾಗಿ ವಿಚಾರಿಸಿ ತಿಳಿಸುವಂತೆ ಆಜ್ಞಾಪಿಸಿದನು. ಮಂತ್ರಿಯು ಭರಿಯಪ್ಪ, ಭರಿಯಮ್ಮರ ಮನೆಗೆ ಬಂದು ವಿಷಯ ತಿಳಿಸಿ ಇದು "ರಾಜಾಜ್ಞೆ" ಎಂದುಎಚ್ಚರಿಸಿ ಬಂದ. ಭರಿಯಪ್ಪ ಭರಿಯಮ್ಮ ಮಗಳು ಬರುವುದನ್ನೇ ಕಾಯುತ್ತಿದ್ದು, ಸತ್ಯವತಿ ಬರುತ್ತಿದ ಹಾಗೆ ಎಲ್ಲಾ ವಿಷಯ ತಿಳಿಸಿದರು. ಸತ್ಯವತಿಯು ಮದುವೆಗೆ ಒಪ್ಪದಿರಲು ಈ ವಿಷಯವನ್ನು ಭರಿಯಪ್ಪನು ಅರಸನಲ್ಲಿ ನಿವೇದನೆ ಮಾಡಿಕೊಂಡನು. ಕಾಮಾಂಧನಾಗಿದ್ದ ಅರಸನು, ಸಿಟ್ಟಾಗಿ, ಕೆರಳಿ, ಹಿಂದೂ-ಮುಂದೂ ಯೋಚಿಸದೇ ಭರಿಯಪ್ಪನ ಶಿರಭೇದನ ಮಾಡಿಸಿಬಿಟ್ಟ. ಈ ವಿಷಯ ದೇವಿಗೆ ತಿಳಿದಾಗ ಸತ್ಯ ದೇವತೆಯಲ್ಲಿ ಸುಪ್ತವಾಗಿ ಅಡಗಿದ್ದ ದುರ್ಗೆಯು ಜಾಗೃತಳಾದಳು! ಕೊಂಗ ನಾಡಲ್ಲಿ ಆರೋಗ್ಯದಿಂದಿದ್ದ ಜನರೆಲ್ಲ ರೋಗದಿಂದ ಒಳಲ ತೊಡಗಿದರು. ಕುರಿ, ಕೋಳಿ, ಮೇಕೆ, ಕರು, ಹಸು, ಎಲ್ಲ ಪ್ರಾಣಿಗಳೂ ಒದ್ದಾಡಿ ಪ್ರಾಣಬಿಡ ತೊಡಗಿದವು. ರಾಜ ಪುರೋಹಿತರನ್ನು/ಪಂಡಿತರನ್ನು ಕರೆಸಿ ನಮ್ಮ ನಾಡಿನಲ್ಲಿ ಹೀಗಾಗಲು ಕಾರಣವನ್ನು ತಿಳಿಸುವಂತೆ ಕೇಳಿದನು ಆಗ ಪುರೋಹಿತರೊಬ್ಬರು ಹೇಳಿದರು. ಮಹಾರಾಜಾ! ನಮ್ಮ ಕೊಂಗ ನಾಡಿನಲ್ಲಿ ಆದಿಶಕ್ತಿ ಸ್ವರೂಪಿಯಾದ ಸತ್ಯದೇವತೆ ಎಂಬ ಪವಿತ್ರ ಕನ್ಯೆ ಇದ್ದಾಳೆ ಅವಳನ್ನು ನೀವು ಕಾಮುಕ ದೃಷ್ಟಿಯಿಂದ ನೋಡಿ, ಅಪಚಾರ ವೆಸಗಿದ್ದೀರಿ ಸಾಕ್ಷಾತ್ ಅಂಬೆಯನ್ನೇ ಲಗ್ನವಾಗಲು ಬಯಸಿದಿರಿ. ಅದರ ಫಲವೇ ಈ ವೈಪರಿತ್ಯಗಳು! ರಾಜ ಬೆಚ್ಚಿ ಬಿದ್ದು ತನ್ನ ತಪ್ಪಿನ ಅರಿವಾಗಿ ತನ್ನ ಪರಿವಾರದೊಡನೆ ಮುತ್ತು, ರತ್ನಾ, ಚಿನ್ನ, ಒಡವೇ, ವಸ್ತ್ರಾದಿ, ಕಾಣಿಕೆಗಳನ್ನು ಹೊತ್ತು "ಕಲ್ಯಾಣೀ" ಎಂಬ ಒಂದು ಸುಂದರ ಕರಿ ಕುದುರೆಯನ್ನು ಕರೆದುಕೊಂಡು, ಸತ್ಯದೇವತೆ ಮನೆಗೆ ಒಂದು ಕರವೆತ್ತಿ ಕೈಮುಗಿದು ಶಿರ ಸಾಷ್ಟಾಂಗವೆರಸಿ ಅಮ್ಮ ನಿನ್ನ ಮಹಿಮೆ ಅರಿಯದೆ ತಪ್ಪು ಮಾಡಿದೆ ಮನ್ನಿಸು ತಾಯಿ ತನ್ನ ರಾಜ್ಯದ ಪೂರ್ಣ ದೋಷಕಳೆದು ಹೋಗುವಂತೆ ಮಾಡಲು ಅಂಬೆಯ ಕಾಲು ಒಡಿದು ಕೇಳಿಕೊಂಡನಂತೆ ಅಮ್ಮನ ಮನಸ್ಸು ಕರಗಿತು. ದೇವಿಯು ರಾಜನಿಗೆ ಅಭಯವಿತ್ತಳು. ಒಡನೆಯೇ ರಾಜನು ತಾಯಿ ಸತ್ಯದೇವತೆ "ಧರ್ಮದೇವತೆ" ಎಂದು

ನಾಮವನಿಟ್ಟು ಜಯಕಾರ ಹಾಕುತ್ತಾ, ಒಡವೆ ವಸ್ತ್ರಗಳೊಡನೆ "ಕಲ್ಯಾಣೀ" ಎಂಬ ಕರಿ ಕುದುರೆಯನ್ನು ಕಾಣಿಕೆಯಾಗಿ ಒಪ್ಪಿಸಿ ಹರುಷೋಲ್ಲಾಸದಿಂದ ತನ್ನ ಅರಮನೆಗೆ ಹಿಂದಿರುಗಿದನಂತೆ.

ತಾಯಿ ಭರಿಯಮ್ಮಳಿಗೆ ತನ್ನ ಮಗಳಿಗೆ ಲಗ್ನ ಮಾಡುವ ಸಹಜವಾದ ಬಯಕೆ ಉಂಟಾಗಿ ಜಗನ್ಮಾತಾ ಸ್ವರೂಪಿಣಿಯಾದ ಸತ್ಯದೇವತೆಗೆ ಗಂಡು ಹುಡುಕುವುದೆಂದರೆ, ಅಷ್ಟೊಂದು ಸುಲಭದ ಮಾತೇ! ಆ ಗಂಡೂ ಸಹಾ ಪರಶಿವನ ವರಪ್ರಸಾದವೇ ಆಗಿರಬೇಕಲ್ಲವೇ.ಸರಿ ತಾಯಿಯು ಮಗಳಿಗೆ ವಿಷಯ ತಿಳಿಸಿದಳು. ಅದೇನು ಶುಭಗಳಿಗೆಯೋ ಏನೋ! ಪರಮೇಶ್ವರಿ ಸತ್ಯದೇವತೆ ಆಗಲೀ ಎಂದು ಒಪ್ಪಿಗೆ ನೀಡಿಯೇ ಬಿಟ್ಟಳು! ಸುಮಾರು ಗಂಡುಗಳನ್ನು ನೋಡಿದರೂ ಊಂಹೂಂ ಎಲ್ಲರೂ ಕೂಡ ಸೂರ್ಯನ ಪ್ರಖರತೆಯ ಮುಂದೆ ದೀಪದ ಹುಳುವಿನಂತೆ ಕಾಣುತ್ತಿದ್ದರು.ಕಡೆಗೆ ಒಂದು ಬಡಕುಟುಂಬದ ಹುಡುಗನು ಸತ್ಯದೇವತೆಗೆ ಎಲ್ಲಾ ವಿಧದಲ್ಲೂ ಅನುರೂಪನಾದ ವರನಾಗಿ ಕಂಡುಬಂದ. ಅವನೇ ಕೆಂಡೇಗೌಡ. ಶಿವಭಕ್ತನಾದ ಕೆಂಡೇಗೌಡನೊಡನೆ ಅಂಬೆಯ ವಿವಾಹ ನಡೆಯಿತು. ಇದಾದ ಕೆಲವೇ ತಿಂಗಳಿಗೆ ಸತ್ಯವತಿಯ ಸಹೋದರಿಯಾದ ಬಿಸಿಲಮ್ಮನಿಗೂ-ದುಂಡೇಗೌಡನಿಗೂ ವಿವಾಹ ನಡೆಯಿತು. ಅದೇಕೋ ಏನೋ ಆದಿ ಪರಶಕ್ತಿಯ ಅವತಾತಳಾದ ಸತ್ಯವತಿಗೇ ಕೊಂಗ ದೇಶ ಬಿಟ್ಟು ಹೋಗುವ ಮನಸ್ಸಾಯಿತು. ದೇವಿಯು ಕೊಂಗ ದೇಶ ತೊರೆಯಲು ನಿರ್ಧರಿಸಿದಳು. ಆ ನಿರ್ಧಾರ, ಕನ್ನಡ ನಾಡಿಗೆ ಮಹಾ ಭಾಗ್ಯವಾಗಿ ಪರಿಣಮಿಸಿತು.ಸತ್ಯವತಿ ಧರ್ಮದೇವತೆ, ಒಡನೆಯೋ ತನ್ನ ಪತಿಯ ಸಮೇತಳಾಗಿ ತನ್ನ ಪ್ರೀತಿಯ ಕರಿ ಕುದುರೆ ಏರಿ, ಕೊಂಗ ದೇಶದಿಂದ ಕರುನಾಡಿನತ್ತ ಪಯಣ ಬೆಳೆಸಿಬಿಟ್ಟಳು.ದೇವಿ ಅಮತ್ತೂರು ಎಂಬ ಗ್ರಾಮದಿಂದ ಕ್ರಿ.ಶ ೧೦೬೩ನೇ ಇಸವಿಯಲ್ಲಿ ಕರುನಾಡಿನ 'ವಡಕೆರೆ' ಎಂಬಲ್ಲಿ ಬಂದು ವಾಸ್ತವ್ಯ ಹೂಡಿದಳು. ಆಗ ಎಪ್ಪತ್ತೇಳು ಮಲೆಯ ಮಹಾದೇಶ್ವರ ಮಾಯಕಾರ ಬಂದು "ಶಕ್ತಿ ದೇವತೆ" ನೀನು ಈ ವಡಕೆರೆಯಲ್ಲಿ ಬಂದು ವಾಸ್ತವ್ಯ ಹೂಡಿದ್ದೀಯಾ. ಇಂದಿನಿಂದ ನಿನಗೆ "ಕಾಳವ್ವ"

ಎಂಬ ಹೆಸರಾಗಲಿ ನೀನು ಮುಂದೆ ದುರ್ಗದಲ್ಲಿ ನೆಲೆಸಿದಾಗ ನಾನು ನಿನ್ನ ಕೊಂಡ ಬಂಡಿಗೆ ಶಿವರಾತ್ರಿಯಂದು, ಎಣ್ಣೆ ಮಜ್ಜನ ತೀರ್ಥವನ್ನು ಕಳಿಸಿಕೊಡುತ್ತೇನೆ. ಎಂದು ತಾಯಿಗೆ ಹೇಳಿ ಹೊರಟರು. ಇದಾದ ಮೇಲೆ ತನ್ನ ಪತಿಯ ಜೊತೆ ಅಲ್ಲಿಂದ ಸಾಗಿ ಕಾನಕಾನಹಳ್ಳಿ (ಕನಕಪುರು) ಎಲವಳ್ಳಿ ಬೆಟ್ಟಕ್ಕೆ ಬಂದು ಸ್ಥಳ ಪರಿಶೀಲಿಸಿ ಏಕೋ ಅಲ್ಲಿಯೂ ನೆಲೆಸದೇ ಅಲ್ಲಿಂದ ಹೊಸಳ್ಳಿ ಅಡಕೆ ತೋಟಕ್ಕೆ ಬಂದು ನೆಲೆಸಿದಳು.ಆಗ ಬಾನು ಬಿಂದು, ಅನೇಕಲ್ ಜೇನ್ಕಲ್ ಮಳೇ ಜೋ ಎಂದು ಸುರಿಯಿತು.ಮಳೆ ನಿಂತ ಮೇಲೆ ಅಮ್ಮ ಮಹಕಾಳಿ ಅಲ್ಲಿಂದ ದುರ್ಗದ ಕಡೆ ಬಂದಳು.

➢ **ಕಬ್ಬಾಳು ದುರ್ಗ**

ದುರ್ಗದ ಪ್ರಕೃತಿ ಸೌಂದರ್ಯಕ್ಕೆ ಅಮ್ಮನ ಮನಸ್ಸು ಆಹ್ಲಾದವಾಯಿತು. ಇಲ್ಲೇ ತಾನು ನೆಲೆಸಬೇಕೆಂದು ನಿರ್ಧರಿಸಿದಳು ಆದರೇ ಅದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಕಾರಣ, ದುರ್ಗಾ ಜಗದೇವರಾಜ ಎಂಬುವನ ಅಂಬೆಯಲ್ಲಿತ್ತು.ಅದನ್ನು ಹೇಗೆ ಪಡೆಯುವುದು ಎಂದು ಅಮ್ಮ ಯೋಚಿಸಿದಳು. ಎಲ್ಲವೂ ನಾಟಕವೇ ಜಗನ್ಮಾತೆಯ ಚೆಲ್ಲಾಟವೋ! ಅವಳಿಗೆ ಅರಿಯದ್ದೇನಿದೇ? ರಾಜಾ ಜಗದೇವರಾಜನಿಗೇ, ಇಬ್ಬರೂ ಮಡದಿಯರು ಈ ರಾಜಾ ಒಬ್ಬಳನ್ನು ಕೋಟೆಯಲ್ಲಿ, ಇನ್ನೊಬ್ಬಳನ್ನು ತೈಲೂರು ಗುಡ್ಡದಲ್ಲಿ ಇರಿಸಿಕೊಂಡಿದ್ದ ರಾಜನು ತನ್ನ ತೈಲೂರು ಗುಡ್ಡದ ಮಡದಿಯನ್ನು ನೋಡಲು ಆಗಾಗ ಆನೆಯ ಮೇಲೆ ಹೋಗಿ ಬರುತ್ತಿದ್ದ. ಅಲ್ಲಿ ಹೋದಾಗ ಆನೆಯನ್ನು ಒಂದು ಗುಂಡಿಗೆ ಕಟ್ಟುತ್ತಿದ್ದ.ಅದನ್ನೇ "ಆನೆ ಕಟ್ಟುವ ಗುಂಡು" ಎಂದು ಕರೆಯುತ್ತಾರೆ.ಹೀಗೆ ಒಮ್ಮೆ ರಾಜ ತನ್ನ ಪ್ರೀತಿಯ ಮಡದಿಯನ್ನು ನೋಡಲು ತೈಲೂರು ಗುಡ್ಡಕ್ಕೆ ಹೋಗಿ, ಹಿಂದಿರುಗಿ ಬರುವಾಗ ತಾಯಿ ಕಾಳಮ್ಮ ರಾಜನನ್ನು ನೋಡಿ ಇದೇ ರಾಜನಿಗೆ ತನ್ನ ಇಂಗಿತ ತಿಳಿಸಲು ಸರಿಯಾದ ಸಮಯವೆಂದು ಒಡನೇ ಕೊರವಂಜಿಯ ರೂಪಧರಿಸಿ, "ಕಣೀ ಹೇಳ್ತಿನವಾ ಕಣೀ" ಎಂದು ಕೂಗುತ್ತಾ ಹೊರಟಳು.ಹಿಂದಾದುದ್ದೂ ಇಂದಾಗುವುದೂ, ಮುಂದಾಗುವುದು ಎಲ್ಲವನ್ನು ನಿಖರವಾಗಿ ತಿಳಿಸುವುದಾಗಿ ಸಾರುತ್ತಾ ಹೊರಟಳು.ಅಮ್ಮನ ದನಿ ಕೇಳುತ್ತಿದ್ದಂತೇ

ಜಗದೇವರಾಜನ ಚಿತ್ತ ಅತ್ತ ಸರಿಯಿತು. ತನ್ನ ಭಟರನ್ನು ಕಳಿಸಿ, ಕೊರವಂಜಿ ರೂಪದ ಆದಿಶಕ್ತಿಯನ್ನು ರಾಜನು ಬರ ಮಾಡಿಕೊಂಡ. "ಏ ಕೊರವಂಜೀ ನೀನೇನು ದೇವರಾ? ಮುಂದಾಗೋದೆಲ್ಲಾ ಹೇಳ್ತೀನಿ ಅಂತಿದ್ದೀಯಲ್ಲಾ! ಅಷ್ಟೊಂದು ಶಕ್ತಿ ಇದೆಯೇ ನಿನಗೆ?ಅಂತ ಕೇಳಿದ ರಾಜ. ಆಗ ಮನಸ್ಸಿನಲ್ಲೇ ನಕ್ಕ ಮಹಾಕಾಳಿ, ದಿಟವಾಗ್ಲೂ ಹೇಳ್ತೀನಿ, ದೊರೆ.ನನ್ನವ್ವಾ ಆದಿಶಕ್ತಿ ಆಣೇ ಅಂದಳು.ರಾಜನೂ ಸರೀ ಪರೀಕ್ಷೆ ಮಾಡೇ ಬಿಡೋಣಾ ಅಂತಾ ಅದೇನ್ ಹೇಳ್ತೀಯೋ ಹೇಳು ಅಂದ. ಆಗ ಅಮ್ಮ ಸತ್ಯದೇವತೆ ಮಂತ್ರದಂಡವನ್ನು ಹಣೆಗೆ ಸೋಂಕಿಸಿ, ಕಣ್ಣು ಮುಚ್ಚಿ, ಮಂತ್ರ ಪಠಿಸಿ ಹೇಳಿದಳು.ಮಹಾರಾಜ ಏನ್ ಹೇಳ್ಳಿ ನಿನ್ ದೌರ್ಭಾಗ್ಯವನ್ನ ಈ ದಿನಾ ಮುಸ್ಸಂಜೇ ಆಗ್ತಿದ್ದಂಗೇ ಒಂದ್ ಹೆಣ್ ನಿನ್ಹತ್ರಾ ಜೂಜಾಡಿ ಈ ದುರ್ಗವನ್ನು ವಶಾ ಪಡಿಸ್ಕೋತಾಳೇ. ಬೆಚ್ಚಿ ಬಿದ್ದ ರಾಜಾ! ಒಮ್ಮೆಲೇ ಆರ್ಭಟಿಸಿದ! ಎಲಾ ಸೊಕ್ಕಿನ ಹೆಣ್ಣೇ! ಎಷ್ಟು ಸೊಕ್ಕು ನಿನಗೆ ನನ್ನೆದುಏ ಈ ಮಾತಾಡಲು ಸೀಳಬಿಟ್ಟೇನು. ನಿನ್ನ ಅಂಬೆತಪ್ಪಿದ ನಾಲಿಗೆಯನ್ನು ಎಚ್ಚರ! ಎಂದು ಆರ್ಭಟಿಸಿದ. ಎಂತಂತಹ ಮಹಾ ರಾಕ್ಷಸರ ಆರ್ಭಟಕ್ಕೆ ಹೆದರದ ಮಹಕಾಳಿ ಈ ನರ ಕುನ್ನಿಯ ಅರಚಾಟಕ್ಕೆ ಅಂಜುವಳೇ, ಅಳುಕುವಳೇ?ಕೋರಾಗಿ ಕೇಕೆ ಹಾಕಿ ನಕ್ಕು ಬಿಟ್ಟಳು.ಮಹಾಮಾರಿ ಮಹಾರಾಜ ನಿನ್ನ ಹಣಾ, ಆಸ್ತಿ, ಅಂತಸ್ತು, ಬಯಿಸ್ಸಿ ನಾನು ಈ ಮಾತು ಹೇಲಿಲ್ಲ. ನಾನು ಕಣಿ ಹೇಳಲು ಒಂದು ಕವಡೆ ಕಾಸನ್ನು ಬಯಸೋದಿಲ್ಲ. ನಂಬಿಕೆ ಇದ್ದರೇ ನಂಬು, ಇಲ್ಲಾ ಅಂದ್ರೇ ನಿನ್ನಿಷ್ಟ ಎಂದು ಬುಟ್ಟಿಯನ್ನು ಕಂಕಳಲ್ಲಿ ಇರುಕಿಸಿಕೊಂಡು ಹೊರಟೇಬಿಟ್ಟಳು.ಇತ್ತ ರಾಜನು ತನ್ನ ಮನೋ ಸ್ಥಿಮಿತವನ್ನೇ ಕಳೆದುಕೊಂಡು ಬಿಟ್ಟಾ, ಜೂಜಿನಲ್ಲಿ ನಾನೆಂತಹಾ ನೀಪುಣಾ ಅದರಲ್ಲೂ ಪಗಡೆ ಆಟದಲ್ಲಿ ನನ್ನನ್ನು ಮೀರಿಸುವವರು ಯಾರು ಇಲ್ಲಾ ಹಾಗಿದ್ದ ಮೇಲೆ, ನ್ನ ಯಕಶ್ಚಿತ್ ಒಂದು ಹೆಣ್ಣು ಸೋಲಿಸುವುದೇ ಬರಲಿ ಅವಳೇನು ರಂಬೆಯೋ, ಮೇನಕೆಯೋ, ತಿಲೋತ್ತಮಯೋ, ಯಕ್ಷಿಣಿಯೋ, ಮೋಹಿನಿಯೋ ಅವಳ ಅಂದಕ್ಕೆ ಬೆರಗಾಗಿ ನಾನು ಸ್ಥಿಮಿತವನ್ನೇ ಕಳೆದುಕೊಂಡು ಪಗಡೆಯಲ್ಲಿ ಸೋಲಲು ಎಂದು ತನಗೆ ತಾನೇ ಸಮಾಧಾನ ಮಾಡಿಕೊಂಡ. ಕಾಲಾ ಯಾರಿಗಾಗಿಯೂ ನಿಲ್ಲವುದಿಲ್ಲವಲ್ಲಾ ಎಂದಿನ ಹಾಗೆ ಮುಸ್ಸಂಜೆ ಮೂಡಿತು. ಹಕ್ಕಿ

ಪಕ್ಷಿಗಳು ತಮ್ಮ ಗೂಡನ್ನು ಹುಡುಕಿ ಹೊರಟವು. ಗೋವುಗಳನ್ನು ಗೋಪಾಲಕರು ಮೇಯಿಸಿ ಹಟ್ಟಿಯ ಕಡೆ ಹೊಡೆದುಕೊಂಡು ಹೊರಟರು. ಗೋಧೂಳಿ ಎದ್ದು ಇಡೀ ಪರಿಸರವೇ ಕೆಂಪೇರಿತ್ತು.ಆಗ ಆದಿಶಕ್ತಿ, ಸತ್ಯದೇವತೆ ತನ್ನ ಕರಿಕುದುರೆಯನ್ನೇರಿ ತನ್ನ ನಿಜ ಸ್ವರೂಪದಲ್ಲಿ ದುರ್ಗದ ಕಡೆ ಹೊರಟಳು. ಪ್ರಕೃತಿ ಉಘೇ ಉಘೇ ಕಾಳವ್ವಾ ಎಂದು ಜಯಕಾರ ಹಾಕುತ್ತಿತ್ತು.ದುರ್ಗದ ಬಳಿ ಬಂದು ಕುದುರೆಯಿಂದಿಳಿದ ಮಹಾಕಾಳೀ ಜಗದೇವರಾಜನ ಅರಮನೆಯತ್ತ ನಡೆಸಳು. ಮಾಯಕಾತಿ ಮಹಾರಾಜನ ಮುಂದೆ ನಿಂತಳು. ರಾಜಾ ಕೇಳಿದ ಯಾರು ನೀನು? ಏಕೆ ಬಂದೆ? ಏನು ಬೇಕು ನಿನಗೆ? ನಿನ್ನನ್ನು ಒಳಗೆ ಬಿಟ್ಟವರಾರು? ಬೆದರಿದ ರಾಜನ ಬಾಯಿಂದ ಒಂದೇ ಬಾರಿಗೆ ನಾಲ್ಕಾರು ಪ್ರಶ್ನೆಗಳು ಬರಲು, ಅಮ್ಮ ನಕ್ಕಳು ನಿನ್ನ ನಾಲ್ಕು ಪ್ರಶ್ನೆಗಳಲ್ಲಿ ನಾನು ಒಂದನ್ನು ಆರಿಸಿಕೊಳ್ಳುತ್ತೇನೆ ರಾಜಾ ಏನು ಬೇಕು ಎಂದೆಯಲ್ಲ, ನನಗೆ ನಿನ್ನ ದುರ್ಗ ಬೇಕು. ಎಂದಳು. ರಾಜ ನಕ್ಕು ಇದೇನು ಮಕ್ಕಳಾಟವೇ ಅಬಲೇ ನೀನು ದುರ್ಗ ಕೇಳಿದೊಡನೇ ನಾನು ಬಿಟ್ಟುಕೊಡಲೂ ಎಂದಬ್ಬರಿಸಿದ. ಅದಕ್ಕೆ ಕಾಲಿ ನಿನಗಿಷ್ಟವಾದ ಯಾವ ಆಟಬೇಕಾದರೂ ಆರಿಸಿಕೋ ಅದನ್ನೇ ಆಡೋಣಾ ಎಂದಳು. ರಾಜ ಪಗಡೇ ಆಟವನ್ನು ಆಡೋಣಾ ಎಂದ ಹಾಗಾದರೆ ಯಾರು ಗೆಲ್ಲುತ್ತಾರೋ ಅವರಿಗೆ ಈ ದುರ್ಗ ಒಪ್ಪೀಯಾ ಎಂದಳು. ಅದೇನು ಮಂಕು ಬಡಿಯಿತೋ ಜಗದೇವರಾಜನು ಹಿಂದೆ ಮುಂದೆ ಏನೂ ಯೋಚಿಸದೇ ಓಪ್ಪಿಗೆ ಕೊಟ್ಟೇ ಬಿಟ್ಟಾ ಈ ಕ್ಷಣದ ಅವಕಾಶಕ್ಕಾಗಿ ಕಾದಿದ್ದ ಸತ್ಯದೇವತೆ ಜೂಜಿಗೆ ರಂಗ ಸಿದ್ದಪಡಿಸಿದಳು. ಜಗದೇವರಾಜ ಜೂಜಿನಲ್ಲಿ ಮಹಾ ಚತುರ, ಬಡ ಪೆಟ್ಟಿಗೆ ಸಿಲುಕುವವನಲ್ಲಾ. ಸುಮಾರು ಘಂಟೆಗಳು ಚದುರಂಗದಾಟಾ ಸಾಗಿತು.ಕಡೆಗೇ ಅಂಬೆಯ ಕೈ ಮೇಲಾಯಿತು. ಜಯಮಾಲೇ ಅಂಬೆಯ ಕೊರಳನ್ನ ಅಲಂಕರಿಸಿತು. ಜಗದೇವರಾಜ ಸೋಲಿನ ಕಹಿ ತಡೆಯದೆ ಹುಚ್ಚನಂತಾಡತೊಡಗಿದ. ಆಗ ರಾಜನಿಗೆ ಸಾಂತ್ವಾನ ಹೇಳಿದ ಜಗದಾಂಬೇ, ನಾನು ಪಂಥದಲ್ಲಿ ಗೆದ್ದ ಕಾರಣ, ಈ ದುರ್ಗವನ್ನು ನೀನು ನನಗೆ ಬಿಟ್ಟುಕೊಡು ಎಂದಳು.ಆಗ ರಾಜನು ನನ್ನಂಥಾ ನಿಪುಣ ಆಟಗಾರನನ್ನು ಗೆಲ್ಲಬೇಕಾದರೇ ನೀನು ಸಾಮಾನ್ಯ ನಾರಿಯಲ್ಲ ಆಯಿತು. ತೆಗೆದುಕೋ ಈ ದುರ್ಗವನ್ನು ಈ ದುರ್ಗವನ್ನು ನೀನು ಗೆದ್ದ

ಕಾರಣ ಇಂದಿನಿಂದ ನಿನಗೆ "ದುರ್ಗಾದೇವತೆ" ಅಂತ ಹೆಸರಾಗಲಿ ಎಂದು ಕರಮುಗಿದು, ಶಿರಬಾಗಿ, ಹೊರಟುಬಿಟ್ಟ ದುರ್ಗದ ಬೆಟ್ಟ, ಗುಡ್ಡ, ಕಣಿವೆ, ಮರ, ಕಲ್ಲು, ಪ್ರಾಣಿ, ಪಕ್ಷಿ ಎಲ್ಲವೂ ದುರ್ಗ ಗೆದ್ದ ದುರ್ಗದಮ್ಮನನ್ನು ಭಜಿಸಿ ಪ್ರಾರ್ಥಿಸಿದವು. ಅಂದಿನಿಂದ ಅಮ್ಮನ ಕೈಲಾಸವಾಯಿತು. ಇದು ಭಕ್ತರಿಗೆ ಮಹಾಭಾಗ್ಯವಾಯಿತು.

ಕಬ್ಬಾಳಮ್ಮ ದುರ್ಗದ ಮೇಲ್ಭಾಗದಲ್ಲಿ ಈಶ್ವರ ಲಿಂಗವಿದ್ದು, ಭಕ್ತಾದಿಗಳು ಜಾತ್ರೆಯ ಸಂದರ್ಭದಲ್ಲಿ ಬೆಟ್ಟವನ್ನು ಹತ್ತಿ ಪೂಜೆ ಸಲ್ಲಿಸುತ್ತಾರೆ.ಬೆಟ್ಟದ ತುದಿಯಲ್ಲಿ ಹೈದರಾಲಿ ಕಾಲದ ಮದ್ದು ಗುಂಡುಗಳನ್ನು ಶೇಖರಿಸುವ ಮನೆ, ಧವಸ-ಧಾನ್ಯ ತುಂಬುವ ಕಣಜಗಳಿವೆ. ಹೈದರಾಲಿ ದೇಶದ್ರೋಹಿಗಳನ್ನು, ಅಪರಾಧಿಗಳನ್ನು, ಕಳ್ಳರನ್ನು ಹಿಡಿದು ತಂದು ಇಲ್ಲಿ ಶಿಕ್ಷೆಗೆ ಗುರಿಪಡಿಸುತ್ತಿದ್ದನಂತೆ.

## ➢ ದುರ್ಗದ ಮಾರಮ್ಮರೊಡನೆ ಕಬ್ಬಾಳಮ್ಮನ ವಾಗ್ವಾದ/ಮಾತುಕತೆ

ದುರ್ಗವನ್ನು ಗೆದ್ದು ದುರ್ಗದ ಬೆಟ್ಟವಿಳಿದು ಅಮ್ಮ ನಡೆದಳು.ಎಲ್ಲೆಲ್ಲೂ ದುರ್ಗೇ ಅಮವಾಸೆಯ ಕಾರ್ಗತ್ತಲು ದುರ್ಗ ಇಳಿದ ದುರ್ಗೇ ಅತ್ತಾ ಇತ್ತಾ ತಿರುಗಿ ನೋಡಿದಳು.ಅಲ್ಲೇ ಸ್ವಲ್ಪ ದೂರದಲ್ಲಿ ಮಂತಿನ ಮಾರಮ್ಮ ಹಾಗೂ ಕೋಣನ ಮಾರಮ್ಮ ಎಂಬುವರು ದುರ್ಗದ ಕಲ್ಲಿನ ಮಂಟಪದಲ್ಲಿ ಕುಳಿತ್ತಿದ್ದರು. ಈ ಮಾಯಕಾತಿ ದುರ್ಗಮ್ಮ ತಾನು ರಾತ್ರಿ ತಂಗಲು ಅವರತ್ತ ಹೆಜ್ಜೆ ಇರಿಸಿದಳು. ಅವರ ಬಳಿ ಬಂದ ಮಹಾದೇವಿ. ರಾತ್ರಿ ತಾನು ತಂಗಲು ಇಲ್ಲಿ ಸ್ವಲ್ಪ ಸ್ಥಳ ಕೊಡಿ ಎಂದು ಕೇಳಲು ಒಡನೇ ಕೋಣನ ಮಾರಮ್ಮ ಸಾಧ್ಯವಿಲ್ಲ ಎಂದು ಚೀರಿಬಿಟ್ಟಳು. ಆದರೇ ಮಂತಿನ ಮಾರಮ್ಮ ಶಾಂತತೆಯಿಂದ ಪಾಪ ಅರ್ಧ ರಾತ್ರಿ ಎಲ್ಲೆಲ್ಲೂ ಕಾರ್ಗತ್ತಲು ಬಂದಿರುಳು ತಾನೆ ಹೆಣ್ಣು ಮಗಳು ಇದ್ದು ಹೋಗಲಿ ಬಿಡು ಎಂದು ಒಂದು ನಿಬಂಧನೆಯನ್ನು ಹೇಳಿದಳು. ಅದೇನೆಂದರೇ ನಾವಿಬ್ಬರೂ ಬೆಳಿಗ್ಗೆ ನಾಲ್ಕು-ಐದು ಗಂಟೆಗೆಲ್ಲಾ ಎದ್ದು ಲೋಕ ಸಂಚಾರಕ್ಕೆ ಹೊರಡುತ್ತೇವೆ. ಅಷ್ಟರಲ್ಲಿ ನೀನು ಎದ್ದು ಹೊರಟು ಬಿಡಬೇಕು ಎಂದಳು. ಸತ್ಯದೇವತೆ ಒಪ್ಪಿಕೊಂಡಾಗ, ಇಬ್ಬರೂ ಮಾರಿಯರೂ ಅತ್ತಾ ಇತ್ತಾ

ಒತ್ತರಿಸಿಕೊಂಡು, ಮಧ್ಯದಲ್ಲಿ ಸತ್ಯದೇವತೆಗೆ ಸ್ಥಳ ಮಾಡಿ ಕೊಟ್ಟರು. ಬೆಳಗಾಯಿತು ಮಾರಿಯರು ಎದ್ದು ನಾವಿನ್ನು ಪ್ರಸಾದಕ್ಕೆ ಹೊರಡಬೇಕು. ನೀನು ಹೊರಡವ್ವಾ ಎಂದರು ಆದರೇ ಈ ದುರ್ಗದಮ್ಮ ಹೊಸ ವರಸೇ ತೆಗೆದೇ ಬಿಟ್ಟಳು. ಇಲ್ಲಾ ನನಗೆ ಈ ಸ್ಥಳ ಇಷ್ಟವಾಗಿದೆ. ನಾನು ಹೊರಡಲಾರೇ ಎಂದು ಹಠ ಮಾಡಿ ಕುಳಿತುಬಿಟ್ಟಳು. ಆಗ ಮಾರಿಯರು ರೋಷದಿಂದ ನಮಗೇ ಎದುರು ವಾದಿಸುವೆಯಾ ಯಾರೇ ನೀನು ಎಂದು ಅಬ್ಬರಿಸಿದಾಗ ಕಬ್ಬಾಳು ದುರ್ಗದ ದುರ್ಗಮ್ಮಾ ನನ್ನ ಹೆಸರು ಸತ್ಯದೇವತೆ, ಧರ್ಮದೇವತೆ, ಕಾಳಮ್ಮ, ದುರ್ಗದ ದುರ್ಗಮ್ಮ ನಿಮಗೆ ಯಾವ ಹೆಸರು ಇಷ್ಟವೋ ಅದರಲ್ಲೇ ನನ್ನನ್ನು ಕರೆಯಿರಿ ಅಂತಾ ಅಲ್ಲೇ ಕುಳಿತಳು.ಆಗ ಮಾರಿಯರು ಕೇಳಿದರು. ಸರಿ ಕಾಳವ್ವಾ ನೀನು ದೊಡ್ಡ ದೇವತೇನೆ ಇರಬಹುದು ಆದರೇ ನಿನಗೆ ನಾವು ಇಲ್ಲಿ ಸ್ಥಳ ಕೊಟ್ಟರೇ ನಮಗೇನು ಲಾಭಾ? ಆಗ ಕಾಳವ್ವ ಅಂದಳು ಮುಂದಲ ಪೂಜೆ ನೀವು ಪಡೆಯಿರಿ, ಹಿಂದಲ ಪೂಜೆ ನನಗಿರಲಿ ಈ ಮಾತು ಕೇಳ್ತಿದಂತೆ ಕೋಣನ ಮಾರಮ್ಮ ಯೋಚನೆ ಮಾಡಿದಳು.ಇದೂ ಒಂದು ರೀತಿ ಚೆನ್ನಾಗಿ ಇದೆ.ಮುಂದಲ ಪೂಜೆ ನಮಗಿಬ್ಬರಿಗೂ ಎಂದರೆ ಎರಡು ಪೂಜೆ ಸಿಕ್ಕಿದ ಹಂಗಾಯಿತು. ಹಿಂದಲ ಪೂಜೆ ಈ ದುರ್ಗೆಗೇ ಎಂದರೇ ಮೂರು ಪೂಜೆ ಪ್ರಸಾದ ಇದ್ದಲೇ ಸಿಗುತ್ತೇ ಇನ್ಯಾಕೆ ಬೇಡಾ ಅನ್ನೋದು? ಅಂತ ಒಪ್ಪಿಕೊಂಡರು.

➢ **ಪೂಜೆಗಾಗಿ ಶಿಶುಮಗನ ಪಡೆದಿದ್ದು.**

ತಾಯಿ ಕಬ್ಬಾಳಮ್ಮನಿಗೆ ಪೂಜೆ ಮಾಡಲು ಒಬ್ಬ ಶಿಶುಮಗ ಬೇಕಾಗಿತ್ತು. ಅದಕ್ಕಾಗಿ ತಾಯಿ ಚಪನ್ನಾರು ದೇಶದ ಮೇಲೂ ತನ್ನ ಕಿರಗಣ್ಣನ್ನು ಹಾಯಿಸಿ ಹುಡಿಕಿದಳು. ಆಗ ಅಮ್ಮನಿಗೆ ಹೂನೀರು ಹಾಕುವ ಯೋಗ್ಯತೆ ಇರುವ ಶಿಶುವು ಕೊಳ್ಳೇಗಾಲ ತಾಲ್ಲೂಕಿನ ಮಾಂಬಳ್ಳಿಯಲ್ಲಿ ಕಾಣಿಸಿಕೊಂಡ ಒಡನೇ ದೇವಿ ಆ ೭ ವರ್ಷದ ಹುಡುಗನ ತಂದೆಯಾದ ದೊಡ್ಡ ಮಾರೇಗೌಡರ ಕನಸಲ್ಲಿ ಹೋಗಿ 'ನಿನ್ನ ಮಗನಾದ ಚಿಕ್ಕ ಮಾರೇಗೌಡನನ್ನು ನನ್ನ ಸೇವೆಗೆ ದುರ್ಗಕ್ಕೆ ತಂದು ಬಿಡು. ನೀನೇನಾದರೂ ಇದಕ್ಕೆ ತಪ್ಪಿದರೇ ನಿನ್ನ ಕಂದನಿಗೆ ಹುಚ್ಚೂ, ಬೆಪ್ಪೂ ಕೊಟ್ಟು

ಬಲವಂತವಾಗಿಯಾದರೂ ಕರೆಸಿಕೊಳ್ಳುತ್ತೇನೆ' ಎಂದು ಹೇಳಿದಾಗ ತಾಯಿ ಮಹಿಮೆಯನ್ನು ಹರಿಯದ ದೊಡ್ಡಮಾರೇಗೌಡ ಇದ್ಯಾವುದೋ ಮಾಡವೋ ದೆವ್ವದ ಕಾಟವೋ ಇರಬೇಕು ಎಂದು ತನ್ನ ಊರಲ್ಲೇ ಇದ್ದ ರಾಮ ಭದ್ರಪ್ಪಾ ಎಂಬ ಮಂತ್ರವಾದಿಯನ್ನು ಮನೆಗೆ ಕರೆತಂದು ನೋಡಿ ಸ್ವಾಮಿ ನನ್ನ ಮಗನಿಗೆ ಒಂದು ತಾಯಿತ ಕಟ್ಟಿ (ಯಂತ್ರ) ಮಂತ್ರಾ ಹಾಕಿ ಓಡಿಸಿ ಬಿಡಿ ಎಂದು ತನಗಾದಿದೆಲ್ಲ ಹೇಳಿದನು. ಮಂತ್ರವಾದಿಯು ಯಂತ್ರವನ್ನು ಕಟ್ಟಿ ಓದನು. ಅಂದು ರಾತ್ರಿ ಮಂತ್ರವಾದಿಯ ಕನಸಿನಲ್ಲಿ ಬಂದು ನಿನ್ನ ಬಳಿ ಬಂದಿರುವ ದೊಡ್ಡಮಾರೇಗೌಡನಿಗೆ ಬುದ್ದಿ ಹೇಳಿ ಅವನ ಮಗನನ್ನು ನನ್ನ ಶಿಶುಮಗನಾಗಿ ತಂದೊಪ್ಪಿಸುವಂತೆ ಹೇಳು ಇಲ್ಲವಾದರೇ ನಿನಗೂ ಕೂಡ ಹುಚ್ಚು, ಬೆಪ್ಪು ಕೊಡುತ್ತೇನೆ ಎಂದು ಹೇಳಿದಾಗ ಅಂಬೆಗೆ ಬೆಚ್ಚಿದ ಮಂತ್ರವಾದಿ ಅರ್ಧರಾತ್ರಿ ಎಂದು ಕಾಣದೇ ದೊಡ್ಡಮಾರೇಗೌಡನ ಮನೆಗೆ ಬಂದು ತನ್ನ ಕನಸಿನಲ್ಲಿ ನಡೆದ ವಿಚಾರವನ್ನು ತಿಳಿಸಿದಾಗ ಹೆಚ್ಚೆತ್ತ ದೊಡ್ಡಮಾರೇಗೌಡ ತನ್ನ ಮಗ ಚಿಕ್ಕಮಾರೇಗೌಡನನ್ನು ಅಂಬೆಯ ಸೇವೆಗೆ ತಂದು ಇನ್ನೂ ಈ ನನ್ನ ಕಂದನ ಹೊಣೇ ನಿನ್ನದು ತಾಯಿ ಎಂದು ತನ್ನ ಊರಿಗೆ ಹೊರಟು ಬಿಟ್ಟ. ಆ ಪುಟ್ಟ ಬಾಲಕನಿಗೆ ಅಂಬೆಯ ಪೂಜೆ ಹೇಗೆ ಮಾಡಬೇಕೆಂದರಿಯದೆ ಕಂಗಾಲಾಗಿ ಅಂಬೆಗೆ ಕೈ ಮುಗಿದು ಅಮ್ಮಾ ನಾನು ಯಾವ ರೀತಿಯಲ್ಲಿ ನಿನ್ನ ಸೇವೆ ಮಾಡಬೇಕು ಅಂತ ತಿಳಿಸಿಕೊಡು ತಾಯಿ ಅಂತ ಕೇಳಿಕೊಂಡ. ಒಡನೇ ಒಂದು ಅಶರೀರ ವಾಣಿ ಹೀಗೆ ನುಡಿಯಿತು.ಕಂದ ಚಿಕ್ಕಮಾರೇಗೌಡ ನೀನು ನನ್ನ ಪೂಜೆ ಮಾಡಬೇಕಾದರೆ ನನಗೆ ಮೊದ್ಲಾಗೇ ಮಜ್ಜನದ ಕೊಳ ಆಗಬೇಕು. ಆ ಕೊಳದಿಂದ ತಂದ ಮಜ್ಜನ ಜಲದಿಂದ ನನ್ನ ಪೂಜೆ ಆಗಬೇಕು. ಅದರಂತೆಯೇ ಚಿಕ್ಕ ಮಾರೇಗೌಡ ಊರಿನ ಹಿರಿಯರಿಗೆಲ್ಲಾ ಈ ಸುದ್ದಿ ತಿಳಿಸಿ ಮಜ್ಜನದ ಕೊಳವನ್ನು ತೆಗೆಸಿ ಅದರ ದಿವ್ಯ ಜಲವನ್ನು ತಂದು ಅಮ್ಮನಿಗೆ ಅಭಿಷೇಕ ಮಾಡಿ, ಗಂಧ, ಚಂದನಾದಿ, ಹರಿದ್ರಾ, ಕುಂಕುಮದಿಂದ ಸಿಂಗಾರ ಮಾಡಿ, ಕಣಗಲೆ, ಮಲ್ಲೆ, ಜಾಜಿ, ಸಂಪಿಗೆ, ಸೇವಂತಿಗೆ, ದವನ, ಮರುಗ, ಜವನಾದಿಗಳನ್ನು ತಂದು ಅಲಂಕಾರ ಮಾಡಿ. ಭಯ ಭಕ್ತಿಯಿಂದ ತಾಯಿಗೆ ನೈವೇದ್ಯ ಇರಿಸಿ ಕರಮುಗಿದು. ಶಿರಬಾಗಿ. ದೂಪದೀಪಾದಿಗಳನ್ನು ಬೆಳಗಿ ಅಂಬೆ ಕಬ್ಬಾಳ

ದುರ್ಗೆಗೆ ಸಂತೋಷಪಡಿಸಿದನು. ಅಂಜಿ ಆನಂದ ಹೊಂದಿದಳು. ಹರುಷದಿಂದ ಸೇರಿದ ಭಕ್ತಾದಿಗಳನ್ನು ಹರಸಿದಳು.

## ➢ ಗ್ರಾಮದ ಮುಖಂಡರಿಂದ ತಾಯಿಗೊಂದು ದೇವಾಲಯ

ಒಂದಷ್ಟು ದಿನ ಕಳೆದ ನಂತರ ತಾಯಿ ಕಬ್ಬಾಳಮ್ಮ ಹೀಗೆ ಎಷ್ಟು ದಿನ ಈ ಕಲ್ಲ ಕೆಳಗಡೆ ವಾಸಿಸುವುದು ಒಂದು ಗುಡಿ ಕಟ್ಟಿಸಿಕೊಳ್ಳಬೇಕೆಂದು ಯೋಚಿಸಿ ಗ್ರಾಮದ ಮುಖಂಡನ ಕನಸಿನಲ್ಲಿ ಬಂದು ನನಗೊಂದು ಗುಡಿ ಕಟ್ಟಿಸಿಕೊಡುವಂತೆ ಕೇಳಿದಳು. ಇದನ್ನು ಊರ ಯಜಮಾನ ಮನೆಗೊಬ್ಬಬ್ಬರನ್ನು ಕರೆದು ತಾಯಿಗೆ ಒಂದು ಗುಡಿ ಕಟ್ಟಿಸಬೇಕು. ತಾಯಿ ಇಲ್ಲೇ ನೆಲೆಸುತ್ತಾಳೆ ಎಂದು ಹೇಳಿದ ಊರ ಜನರೆಲ್ಲ ಒಪ್ಪಿ ೧೨ ಅಂಕಣದ ದೇವಾಲಯವನ್ನು ನಿರ್ಮಾಣ ಮಾಡಿದರು. ಅಂದಿನಿಂದ ಅಮ್ಮನಿಗೆ ಆನಂದದಿಂದ ಪೂಜೆ ನೇರವೇರುತ್ತಿದೆ.

ಹೀಗೆ ಸಕಲ ವಿಧದ ಪೂಜೆಗಳನ್ನು ಪಡೆದು ಜಗದೇಶ್ವರಿ ವೈಭವದಿಂದ ಮರೆಯುತ್ತಿರುವಾಗ ಅತ್ತ ಕೊಂಗ ದೇಶದಲ್ಲಿ ಕಬ್ಬಾಳಮ್ಮನ ತಂಗಿಯಾದ ಬಿಸಿಲಮ್ಮ ದೇವಿ ತಮ್ಮನಾದ ಭೈರವ ಪತಿಯಾದ ದುಂಡೇಗೌಡ ಹಾಗೂ ತಾಯಿ ಭರಿಯಮ್ಮ ಎಲ್ಲರೂ ಕಬ್ಬಾಳಮ್ಮನನ್ನು ಹುಡುಕುತ್ತ ಕಬ್ಬಾಳು ದುರ್ಗದ ಗ್ರಾಮಕ್ಕೆ ಬಂದರು. ತಂಗಿ ಬಿಸಿಲಮ್ಮ ಅಕ್ಕನಾದ ಕಬ್ಬಾಳಮ್ಮ ನನ್ನು ಬಾಚಿತಬ್ಬಿ ಕಣ್ಣೀರು ಹಾಕುತ್ತಾ ಏನೇ ಅಕ್ಕಾ ಹಿಂಗ್ ಮಾಡ್ಬುಟ್ಟೇ? ಮನೆಗೆ ಹಿರಿಯಳಾದ ನೀನೇ ನಮ್ಮನ್ನ ಮರ್ತ್ ಬುಟ್ರೇ, ನಮ್ಮನ್ನು ಯಾರ್ ನೋಡೊರು ಅಂತ ಗೊಳಾಡುತ್ತಾ ಕೇಳಿದಳು. ಆಗ ಕರುಳು ಕರಗಿ ಕರುಣೆಯಿಂದ ಕಬ್ಬಾಳಮ್ಮ ಕಬ್ಬಾಳಮ್ಮ ತಂಗಿಯನ್ನು ಸಂತೈಸುತ್ತಾ ನೋಡೇ ತಂಗ್ಯವ್ವಾ ನೀನು ಚೆನ್ನಪಟ್ನ ತಾಲ್ಲೂಕಿನ ಹುಣಸನಹಳ್ಳಿ ಗ್ರಾಮದಾಗೆ ನೆಲೆಯಾಗು.ಬಲಗಡೆ ಕರ್ಲಳ್ಳಿ, ಎಡಗಡೆ ಮಂಗಾಡಳ್ಳಿ, ಮುಂದಕ್ಕೆ ಕೋಡಂಬಳ್ಳಿ, ಹಿಂದಕ್ಕೆ ಬಾನಗಳ್ಳಿ ಮಧ್ಯ ಒಪ್ಪೇ ತೋಪಲ್ಲಿ ನೆಲೆಯಾಗಿ ಸುತ್ತಾ ಮುತ್ತಾ ಊರ್ ಜನರನ್ನ ಭಕ್ತರ್ ಮಾಡ್‌ಕೊಂಡು ಪೂಜೆ ಪಡ್‌ಕೋ ಎಂದಳು.ಇಬ್ಬರು ಹೆಣ್ಣುಮಕ್ಕಳಿಗೂ ನೆಲೆಯಾದ ಮೇಲೆ ತಾಯಿ

ಬರಿಯಮ್ಮ ಹೊಸಳ್ಳಿ ಅಡಕೆ ತೋಟದಲ್ಲಿ ಇನ್ನೂ ನನ್ನ ಕರ್ತವ್ಯ ತೀರಿತು ಎಂದು ಪ್ರಾಣ ತ್ಯಾಗ ಮಾಡಿದಳು.ಶಿವನ ಪಾದದಲ್ಲಿ ಐಕ್ಯವಾದಳು. ವಿಷಯ ತಿಳಿದ ಕಬ್ಬಾಳಮ್ಮ, ಬಿಸಿಲಮ್ಮ ಹಾಗೂ ಭೈರವ ಬಂದು ತಾಯಿಯ ಅಂತ್ಯ ಸಂಸ್ಕಾರ ಮಾಡಿ ಪೂಜೆ ಕೊಟ್ಟರು. ಆಗ ಕಬ್ಬಾಳಮ್ಮ ಮುಂದೆ ಶಿವರಾತ್ರೀಲಿ ನನ್ ಕೆಂಡದ್ ಕೊಂಡಕ್ ಬರೋ ಭಕ್ತರು ಇಲ್ಲಿಗೂ ಬಂದು ಹಾಲೂ ತುಪ್ಪಾ ಬುಟ್ಟೂ, ಧೂಪ ದೀಪ ಹಚ್ಚಿ ಎಂದಳು ಅಮ್ಮ ಭರಿಯಮ್ಮನ ಆತ್ಮಕ್ಕೆ ಶಾಂತಿ ಕೋರಿ ಬಂದಳು.

- **ಕಬ್ಬಾಳಮ್ಮ ತನ್ನ ಗಂಡನೊಡನೆ ಪಂಥ ಹೂಡಿದ್ದು**

ಕಬ್ಬಾಳಮ್ಮ ತನ್ನ ಗಂಡನನ್ನು ಕರೆದು ನೋಡ್ರೀ ಮನೇಲಿ ಕಿರಾಣಿ ಸಾಮಾಗ್ರಿಗಳೆಲ್ಲಾ ಮುಗಿದುಹೋಗಿದೆ ತಗಳಿ ಈ ಒಂದು ಕಾಸನ್ನು ಸಂತೇಗೆ ಹೋಗಿ ಮನೆಗೆ ಬೇಕಾದ ಎಲ್ಲಾ ಸಾಮಾರ್ಗಿಗಳನ್ನು ತೆಗೆದುಕೊಂಡು ಬನ್ನಿ ಎಂದಳು.ಸರಸರನೆ ಒಂದು ಕಾಸು ತೆಗೆದು ಕೊಂಡ ಗಂಡ, ಸಂತೇ ಬೀದಿಗೆ ಬಂದು ಯೋಚಿಸಿದ. "ಎಲಾ ಇವ್ಳಾ? ಈ ಕಬ್ಬಾಳಿಗೆ ತಲೆಗಿಲೇ ಕೆಟ್ಟಿದ್ಯಾ ಎಂಗೇ ಅಂತಾ ಒಂದ್ ಕಾಸಿಗೆ ಬಂಡಿ ತುಂಬಾ ಸಾಮಾಗ್ರಿ ತರಾಕ್ಕೇಳ್ತಾಳಲ್ಲಾ ಎಂದು ಮನೆಗೆ ವಾಪಸ್ಸು ಬಂದಿರುತ್ತಾನೆ. ಮನೆಗೆ ಬಂದು ನೋಡೆ ಕಬ್ಬಾಳಿ ಒಂದ್ ಕಾಸಿಗೆ ಇಷ್ಟೆಲ್ಲಾ ನನಿಂದ ತರಾಕ್ಕಾಗಲ್ಲಾ ನಿನ್ ಕೈಲಾದ್ರೆ ನೀನೇ ತಕೊಂಡ್ ಬಾ ಎಂದು ಹೇಳುತ್ತಾನೆ. ಆಗ ಕಬ್ಬಾಳಿ ಅದೇ ಒಂದ್ ಕಾಸನ್ನು ತಕ್ಕೊಂಡ್ ಹೋಗಿ ತಾನು ಕರ್ಚ್ ಮಾಡದೆ ಬಂಡಿ ತುಂಬಾ ಸಾಮಾನ್ ತಂದ್ರೇ ಏನ್ ಮಾಡ್ತಿರಾ? ಅಂದಳು. ಕೋಪ ನೆತ್ತಿಗೇರಿದ ಕೆಂಡೇಗೌಡ ಕೆಂಡ ಮಂಡಲವಾಗಿ ಅಂಗೇನಾರಾ ನೀನ್ ತಂದ್ ಬುಡೊದೆ ಆದ್ರೆ ನಿನ್ ಕೊಂಡದ ಬಾಕ್ಲಾಗೆ ಗರುಡ್ ಗಂಬ್ವಾಗಿ ನನ್ ತಲೇ ಮೇಲ್ ಮೂರ್ ಬೊಗ್ಸೆ ಕೆಂಡಾ ಸುರ್ಕೋತೀನಿ ಅಂದ. ಅದಕೊಪ್ಪಿದ ಕಬ್ಬಾಳಿ ರಂಗಸ್ವಾಮಿಯಿಂದ ಅದೇ ಕಾಸನ್ನು ತೆಗೆದುಕೊಂಡು ಸಂತೆಗೆ ಹೋಗಿ ಅಖಂಡವಾದ ಸುಂಟರಗಾಳಿಯನ್ನು ಎಬ್ಬಿಸಿ ಸಂತೆಯಲ್ಲಿರುವವವರ ಎಲ್ಲರ ಕಣ್ಣುಗಳಿಗೆ ಧೂಳು ಕಾರದ ಪುಡಿ ತುಂಬುವ ಹಾಗೆ ಮಾಡಿ ಅವರೆಲ್ಲರೂ ಕಣ್ಣನು ಮುಚ್ಚಿರುವಾಗ ಅಂಗಡಿಯಲ್ಲಿಂದ ಒಂದೊಂದು ಪದಾರ್ಥಗಳನ್ನು ತನ್ನ

ಬುಟ್ಟಿಗೆ ತುಂಬಿಕೊಂಡು ಬಂದು ಕಾಸನ್ನು ಮನೆಗೆ ತರುತ್ತಾಳೆ. ಮಾತಿನಂತೆ ಗಂಡ ತನ್ನ ತಲೆಯ ಮೇಲೆ ಕೆಂಡ ಸುರಿಸಿಕೊಳ್ಳುತ್ತಾನೆ. ಆ ಪದ್ದತಿಯ ಅನುಸಾರವಾಗಿ ಜಾತ್ರೆಯ ಮೊದಲನೆಯ ದಿನದಿಂದ ಹಿಡಿದು ಮೂರನೆಯ ದಿನದವರೆಗೆ ಗರಡುಗಂಬವಾದ ರಂಗಸ್ವಾಮಿಯ ಮೇಲೆ ಶ್ರೀ ಗಂಧದ ಸೌದೆಗಳನ್ನು ಹಾಕಿ ಬೆಂಕಿ ಹಚ್ಚುತ್ತಾರೆ.

## ೨. ಭೌಗೋಳಿಕ ಅಂಶಗಳು

ಯಾವುದೇ ಒಂದು ಪ್ರದೇಶದ ಭೌಗೋಳಿಕ ಇರುವಂತೆ ಮತ್ತೊಂದು ಊರಾಗಲೀ ಪ್ರದೇಶವಾಗಲೀ ಅದೇ ರೀತಿ ಇರಲು ಸಾಧ್ಯವಿಲ್ಲ. ಇರುವ ಪ್ರದೇಶದ ಸುತ್ತಮುತ್ತಲ ಪ್ರಾಕೃತಿಕ ವಾತಾವರಣದಿಂದಲಾದರೂ ಭಿನ್ನವಾಗಿರುತ್ತದೆ. ಈ ಭಿನ್ನತೆಯಿರುವುದರಿಂದಲೇ ಒಂದೊಂದು ಪ್ರದೇಶವೂ ಕೂಡ ವಿಶೇಷವಾಗಿ ಕಾಣಿಸುತ್ತದೆ. ಹಾಗಾದರೆ ಕೇವಲ ಪ್ರಾಕೃತಿಕ ಸಂಪತ್ತಿನಲೇ ಅಲ್ಲದೇ ಜನರ ಬದುಕು, ಉಡುವ ತೊಡುಗೆ, ಆಹಾರ ಪದ್ಧತಿ, ಪೂಜಿಸುವ ದೈವ, ಭಾಷೆ, ಜೀವನಕ್ರಮ ಇದೆಲ್ಲದರಿಂದ ಅನ್ಯ ಪ್ರದೇಶಗಳಿಗಿಂತ ವ್ಯತ್ಯಾಸ ಹೊಂದಿ ತನ್ನದೇ ಆದ ಮಾನ್ಯತೆಯನ್ನು ಪಡೆದುಕೊಂಡಿರುತ್ತದೆ. ಒಂದು ದೇವತೆಯ ಸುತ್ತ ಮುತ್ತಲಿರುವ ಆರಾಧಾನಾ ಪದ್ದತಿಯಿಂದಲೇ ಸಾಕಷ್ಟು ಭಿನ್ನತೆಯನ್ನು ಕಂಡು ಆ ಆರಾಧನೆಯಿಂದಲೇ ಹೊರಜಗತ್ತಿಗೆ ಹೊಸ ಸಂದೇಶವನ್ನು ಹೇಳುವಂತಹುದು ಕಾಣಿಸಿಗುತ್ತದೆ.

ಯಾವುದೇ ಗ್ರಾಮದ ಜನರ ಬದುಕನ್ನು ಕೆಲಮಟ್ಟಿಗೆ ನಿಯಂತ್ರಿಸುವುದು ಆ ಊರಿನ ಗ್ರಾಮ ದೇವತೆಯೇ ಆಗಿರುತ್ತದೆ.ಹೀಗಾಗಿ ಒಂದು ಗ್ರಾಮದೇವತೆಗೆ ಒಂದು ಊರಿಗೆ ಬರುವ ರೀತಿಯೇ ಮನುಷ್ಯನ ಚರಿತ್ರೆಯನ್ನು ಪುನರ್ ಅವಲೋಕಿಸಿದಂತೆ ಆಗುತ್ತದೆ.ಈ ದೈವಗಳು ಆಯಾಯ ಕಾಲಮಾನದ ಸಾಂಸ್ಕೃತಿಕ ಸಂಘರ್ಷದ ಕತೆ ಹೇಳುತ್ತಾ ನೆಲೆನಿಂತ ಭೌಗೋಳಿಕತೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡುತ್ತದೆ.

ಪ್ರತಿ ಗ್ರಾಮದ ಗ್ರಾಮದೇವತೆಗೆ ವಿಶೇಷತೆ ಬರುವುದು ಆ ದೇವತೆಗೆ ಇರುವ ಆಚರಣೆ, ನಂಬಿಕೆ ಮತ್ತು ಇವುಗಳ ಆಧಾರದ ಮೇಲೆ ನಂಬಿರುವ ಭಕ್ತ ಸಮೂಹ ಕ್ರಿಯಾರೂಪದಲ್ಲಿ ಅವುಗಳನ್ನು ಅನುಸರಿಸಿದಾಗ ದೇವತೆಗೆ ವಿಶೇಷ ಮೆರಗು ಬರುತ್ತದೆ.

ಈ ಹಿನ್ನಲೆಯಲ್ಲಿ ಒಂದು ಗ್ರಾಮದ ಮುಖ್ಯಸತ್ವ ಅಡಕವಾಗಿರುವುದು. ಆ ಜನರ ನಲಿವು, ನೋವು, ಸುಖ, ಸಂತೋಷ, ಆಚರಣೆ, ಸಂಪ್ರದಾಯದ ಬದುಕನ್ನು ಅವಲಂಬಿಸಿಯೇ ಆಗಿರುತ್ತದೆ. ಒಂದು ದೈವವನ್ನು ನಂಬಿಕೊಂಡು ನೆರವೇರುವ ಆಚರಣೆ ಸಂಪ್ರದಾಯಗಳನ್ನು ನೋಡಿದರೆ ಜನರ ಸಂಕಷ್ಟ, ನೋವುಗಳೆಲ್ಲವೂ ಇಂತಹ ಕ್ರಿಯಾತ್ಮಕ ರೂಪಗಳೆಂತೆ ಬಿಂಬಿತವಾಗುತ್ತವೆ. ಒಂದು ಪುಟ್ಟ ಗ್ರಾಮ ದೇವತೆಯೂ ಸಹ ತನ್ನಲ್ಲಿರುವ ಶಕ್ತಿ ಮತ್ತು ಸಾಮರ್ಥ್ಯದಿಂದ ಗುರುತಿಸುವಿಕೆಯನ್ನು ಪಡೆದುಕೊಂಡಿರುತ್ತಾಳೆ. ಕೆಟ್ಟವರನ್ನು ಸಂಹರಿಸುವ, ಶಕ್ತಿಶಾಲಿಯಾಗಿ ಆ ಊರಿಗೆ ಮುಖ್ಯವಾಗಿ ಸಹಕಾರ ಕೊಡುತ್ತಾ ಘಟನೆಗಳಿಗೆ ಬಂಧುತ್ವವನ್ನು ಕೊಡುವಂತೆ ಪ್ರತಿ ಕುಟುಂಬದ ಭಾವನೆಗಳನ್ನು ತಿಳಿಯುವಲ್ಲಿ ಗ್ರಾಮದೇವತೆ ಸಹಕರಿಸುತ್ತಾಳೆ.

ದೇವರು ನೆಲೆನಿಂತ ಸ್ಥಳದಲ್ಲಿ ಕಷ್ಟಕರವಾದ ಅದೆಷ್ಟೋ ವಿಚಾರಗಳು ಇದೇ ಸ್ಥಳದಲ್ಲಿ ನಡೆಯುತ್ತವೆ ಎಂದರೆ ದೇವತೆಯ ಅಸ್ತಿತ್ವ ನೆಲೆನಿಲ್ಲುವ ಸ್ಥಳಕ್ಕೆ ಸಾಮಾಜಿಕ ಜವಾಬ್ದಾರಿ ದೇವತೆಯ ಸನ್ನಿಧಿಯಲ್ಲಿ ನಡೆಯುವ ಭಾಷೆ, ಪ್ರಮಾಣಗಳು, ಆನಂದ, ಮಣ್ಣಿಗಿರುವ ಶಕ್ತಿ ಮತ್ತು ದೇವತೆಗಿರುವ ಶಕ್ತಿಯನ್ನು ಸೂಚಿಸುತ್ತದೆ.

ಹೀಗಾಗಿ ಗ್ರಾಮದೇವತೆಗಳು ತಾವು ನೆಲೆಸಿರುವ ತಮ್ಮ ಸೀಮಿತ ವಲಯವನ್ನು ವಿಸ್ತರಿಸುತ್ತಾ ಸುತ್ತಮುತ್ತಲ ಊರು ಅಕ್ಕ ಪಕ್ಕ ಇರುವ ಪಟ್ಟಣ ನಗರಗಳಿಗೂ ವಿಸ್ತರಿಸುತ್ತಾ ಹೋಗುತ್ತದೆ.ಗ್ರಾಮದೇವತೆ ಮೇಲೆ ಇರುವ ಎಲ್ಲಾ ಆಚಾರಣಾ ವಿಧಾನಗಳು ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಂಡಿರುವುದಲ್ಲದೇ ಭೌಗೋಳಿಕತೆಯ ಭಾಂದವ್ಯ ಮುಖ್ಯವಾಗುತ್ತದೆ. ಕಬ್ಬಾಳು ಗ್ರಾಮದ ಭೌಗೋಳಿಕ

ಪರಿಸರದಲ್ಲಿ ಕಬ್ಬಾಳಮ್ಮ ಅಸ್ತಿತ್ವವನ್ನು ಪಡೆಯುವ ರೀತಿ ಹಾಗೂ ಭೂಮಿಯ ಮೇಲಿನ ವಿಶೇಷಣವನ್ನು ಪರಿಚಯಿಸುವ ಉದ್ದೇಶ ಈ ಅಧ್ಯಾಯದಲ್ಲಿದೆ.

ಪ್ರತಿಯೊಂದು ಊರಿನ ಮೂಲ ಹೆಸರು ಮತ್ತು ಹುಟ್ಟಿನ ಬಗೆಗೆ ಒಂದಲ್ಲಾ ಒಂದು ಕತೆ ಪುರಾಣವಾಗಲೀ ಸೃಷ್ಟಿಯಾಗಿರುತ್ತದೆ.ಆ ಊರಿನ ಹಿಂದಿನ ಕಾಲದ ರಾಜ ಆಳ್ವಿಕೆಯಿಂದಾಗಿ ಅಥವಾ ಪುರಾಣದ ವಿಷಯಕ್ಕೆ ತಾಳೆಯಾಗುವ ಕೆಲವು ಕಲ್ಪನೆಗಳು ಕಂಡುಬರುತ್ತವೆ. ಊರಿಗೆ ಹುಟ್ಟುಗಾರನ ಹಾಗೆ ಆಡಬೇಡ ಎಂಬ ಮಾತನ್ನು ಗಮನಿಸಿದರೆ ಇಲ್ಲಿ ಹುಟ್ಟುಗಾರ ಎಂಬ ಪದಕ್ಕೆ ಆ ಊರಿನ ಪ್ರಾಚೀನತೆಯನ್ನು ಹೇಳುವಲ್ಲಿ ವಿಶೇಷವಾದ ಅರ್ಥದೊರೆಯುತ್ತದೆ. ಅಂದರೆ ಮೂಲತಃ ಕಾಡುನೆಲದಲ್ಲಿ ತರಗೆಲೆಗಳನ್ನು ಅದಕ್ಕೊಂದು ಹೆಸರು ನೀಡಿದ ಅದರ ಬಗೆಗೆ ಊರಿಗೆ ಹುಟ್ಟುಗಾರ ಎಂಬ ನುಡಿಯು ಬೆಳೆದು ಬಂದಿದೆ.

ಕೊಂಗನಾಡಿನಿಂದ (ತಮಿಳುನಾಡು) ಕರಿಯ ಕುದುರೆಯನ್ನೇರಿ ಸತ್ಯದೇವತೆ ಬಂಪಣಾಪುರಕ್ಕೆ ಬಂದು ದುರ್ಗವನ್ನು ಗೆದ್ದು ದುರ್ಗದೇವತೆ ಎನಿಸಿಕೊಂಡು ಲಕ್ಷಾಂತರ ಜನರನ್ನು ಭಕ್ತರನ್ನಾಗಿ ಪಡೆದುಕೊಂಡು ಕಬ್ಬಾಳಮ್ಮನಾಗಿ ನೆಲೆಸಿದ ದಿನದಿಂದ ಕಬ್ಬಾಳು ಗ್ರಾಮವಾಗಿ ಮಾರ್ಪಟ್ಟಿತ್ತು. ಊರಿನ ಬಗ್ಗೆ ಇಷ್ಟನ್ನು ಬಿಟ್ಟರೇ ಇನ್ಯಾವುದೇ ಮಾಹಿತಿಗಳು ಅಷ್ಟು ಪ್ರಮಾಣದಲ್ಲಿ ಸಿಗುವುದಿಲ್ಲ.

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಬಹುಮಹತ್ತರವಾದ ಊರಾದ ಕಬ್ಬಾಳು, ಕಬ್ಬಾಳಮ್ಮ ಹೆಸರಿನಿಂದಲೇ ಬಹಳ ಪ್ರಸಿದ್ಧವಾಗಿದೆ. ಮೂರು ತಾಲ್ಲೂಕುಗಳ ಮಧ್ಯಭಾಗದಲ್ಲಿದೆ. ಕನಕಪುರದಿಂದ ಸುಮಾರು ೧೮ ಕಿ.ಮೀ, ರಾಮನಗರದಿಂದ ೩೨ ಕಿ.ಮೀ, ಚನ್ನಪಟ್ಟಣದಿಂದ ೧೬ ಕಿ.ಮೀ ಹಾಗೂ ಬೆಂಗಳೂರಿನಿಂದ ೫೫ ಕಿ.ಮೀ ಇದೆ.

ಒಟ್ಟಾರೆಯಾಗಿ ಕಬ್ಬಾಳಮ್ಮನ ಮಹಿಮೆ, ಶಕ್ತಿ ಅಪಾರವಾಗಿದ್ದು, ಸುತ್ತ ಮುತ್ತ ಹಳ್ಳಿಗಳಿಗಷ್ಟೆ ಸೀಮಿತವಾಗದೇ ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಂದ ತಾಯಿಯ ಶಕ್ತಿಯನ್ನು ತಿಳಿದು ಭಕ್ತರು

ಬರುತ್ತಿರುವುದನ್ನು ಕಾಣಬಹುದು. ಬಂದಂತಹ ಭಕ್ತರು ತಾಯಿಯಲ್ಲಿ ಹರಕೆ ಕಟ್ಟಿ ತಮ್ಮ ಇಷ್ಟಾರ್ಥಗಳನ್ನು ಒಡೇರಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

## ೩. ನಂಬಿಕೆಗಳು

ಮಾನವನು ನಿತ್ಯ ಜೀವನಕ್ಕೆ ಪ್ರಕೃತಿ ನೀಡುವ ಬೆಳಕು, ಗಾಳಿ, ನೀರು, ಆಹಾರ, ಬಟ್ಟೆಬರೆಗಳು ಎಷ್ಟು ಅವಶ್ಯಕವೋ, ನಂಬಿಕೆಗಳು ಕೂಡ ಅಷ್ಟೇ ಪ್ರಮುಖ ಪಾತ್ರವಹಿಸುತ್ತವೆ. ಜನಪದರಲ್ಲಿ ನಂಬಿಕೆಗಳು ಬಹಳ ಪ್ರಾಚೀನ ಕಾಲದಿಂದ ಇರುವುದನ್ನೇ ಕಾಣುತ್ತೇವೆ. ಮಾನವನು ವಿಕಾಸಗೊಂಡಂತೆ ಆತನ ಜೀವನದಲ್ಲಿ ಭಾಷೆ ಭಾವನೆಗಳ ಉಗಮದೊಂದಿಗೆ ನಂಬಿಕೆಗಳೂ ಕೂಡಾ ಅದರೊಂದಿಗೆ ಪರ್ಯಾಯವಾಗಿ ಬೆಳೆದು ನಿತ್ಯಕ್ರಮಗಳೆಲ್ಲ ಬಳಸುವಷ್ಟರ ಮಟ್ಟಿಗೆ ಪ್ರಾಮುಖ್ಯ ಪಡೆದುಕೊಂಡಿವೆ. ನಂಬಿಕೆ ಅಥವಾ ನೆಚ್ಚಿಕೆಯು ಒಂದು ಮಾನಸಿಕ ಸ್ಥಿತಿ ಪರಂಪರಾಗತವಾಗಿ ಸ್ವೀಕೃತವಾದ ಒಂದು ಭಾವ ರೂಪ ಪುನರಾವೃತ್ತಿತ ಹಾಗೂ ಸಾಂಪ್ರದಾಯಿಕ ಅಭಿಪ್ರಾಯೋಕ್ತಿ ವಸ್ತು ಸ್ಥಿತಿಯೊಡನೆ ಅಸಂಬದ್ಧವೂ, ಅವೈಜ್ಞಾನಿಕವಾದ ಸಂಬಂಧವಾದ ಹೇಳಿಕೆ ಇದನ್ನು ಗಮನಿಸಿದಾಗ ಶುಭ-ಅಶುಭ, ಫಲ-ವಿಫಲ, ಭಯ-ಅಭಯಗಳ ಕುರಿತ ಪ್ರಕಟಪಡಿಸುವ ಕ್ರಿಯೆಯೇ ನಂಬಿಕೆ.

ತಾಯಿ ಕಬ್ಬಾಳಮ್ಮನ ಮೇಲೆ ಸಹಸ್ರಾರು ಜನರು ನಂಬಿಕೆಯನಿಟ್ಟು ಕೊಂಡಿದ್ದು, ಕೇಳಿದನ್ನು ಕೊಡುವ ಆದಿಶಕ್ತಿ ಸ್ವರೂಪಿಣಿಯಂತೆ ಜನರ ಮನದಲ್ಲಿ ಮನೆಮಾಡಿದ್ದಾಳೆ. ಇಲ್ಲಿನ ಜನರು ತಮ್ಮ ತಮ್ಮ ಮನೆಗಳಲ್ಲಿ ತಾಯಿಯ ಫೋಟೊ ಇಟ್ಟು ಪೂಜಿಸುತ್ತಿರುವುದಷ್ಟೇ ಅಲ್ಲದೇ ಅಂಗಡಿ ಮುಂಗಟ್ಟುಗಳಲ್ಲಿ ತಾಯಿ ಫೋಟೊ ಇಟ್ಟು ಪೂಜಿಸುತ್ತಿದ್ದಾರೆ. ಅಲ್ಲದೇ ಅಂಗಡಿ ಮಳಿಗೆಗಳಿಗೆ ತಾಯಿಯ ಹೆಸರಿಟ್ಟಿರುವುದು ಕಂಡುಬರುತ್ತದೆ.

ಕಬ್ಬಾಳಮ್ಮ ಆರಾಧನೆ ಕೇವಲ ಸುತ್ತಮುತ್ತಲ ಪ್ರದೇಶಕ್ಕೆ ಮಾತ್ರ ಸೀಮಿತವಾಗದೇ ವಿವಿಧ ಕಡೆಗಳಿಂದ ಹಲವಾರು ಭಕ್ತಾದಿಗಳನ್ನು ಸಂಪಾದಿಸಿದ್ದಾಳೆ. ಭಕ್ತರು ತಾವು

ವಾಸಿಸುವ ಊರಿನಿಂದ ಜಾತ್ರೆಯ ಸಂದರ್ಭದಲ್ಲಿ ಬರಲಿಕ್ಕೆ ಆಗದಿದ್ದರೂ ಮಂಗಳವಾರ ಮತ್ತು ಶುಕ್ರವಾರ ದಿವಸ ಬಂದು ಪೂಜೆ ನೆರವೇರಿಸಿ ಹೋಗುತ್ತಾರೆ. ಮೂಲಸ್ಥಳದಿಂದ ಬೇರೆ ಊರಿಗೆ ಉದ್ಯೋಗವನ್ನರಸಿ ಹೋಗುವಂತವರು ಕಾರಣಾಂತರಗಳಿಂದ ನಿಗದಿತ ಸಮಯಕ್ಕೆ ಬಾರದಿದ್ದರೂ ಪ್ರತಿ ವರ್ಷಕ್ಕೆ ಒಂದೆರಡು ಭಾರಿಯಾದರೂ ಬಂದು ಹೋಗುತ್ತಾರೆ. ಬರುವ ಭಕ್ತ ಸಮೂಹ ಮತ್ತು ವೈಯಕ್ತಿಕ ಬದುಕಿನ ಎಲ್ಲಾ ಒತ್ತಡಗಳನ್ನು ಬದಿಗೊತ್ತಿ ಶ್ರದ್ಧಾಭಕ್ತಿಯಿಂದ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಅವರವರ ಅನುಭವದಿಂದ ತಮ್ಮ ಇಷ್ಟಾರ್ಥಗಳನ್ನು ಬಹುಬೇಗ ಈಡೇರಿಸುತ್ತಾಳೆಂಬ ಅಧಿಕ ನಂಬಿಕೆ ಪ್ರಚಾರದಿಂದ ಭಕ್ತರ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಾ ಹೋಗುತ್ತಿರುವುದು ಭಕ್ತರ ಸಂಖ್ಯೆಯಲ್ಲಾದ ಬದಲಾವಣೆಯನ್ನು ಸೂಚಿಸುತ್ತದೆ. ಕೇವಲ ಒಂದು ಜನಾಂಗದ ಒಂದು ಸಮುದಾಯದ ದೇವತೆಯಾಗದೇ ಎಲ್ಲರ ಭಕ್ತಿಗೆ ಪಾತ್ರಳಾಗುತ್ತಾ ತನ್ನ ಹಿರಿಮೆಯನ್ನು ಮೆರೆಯುತ್ತಿದ್ದಾಳೆ.

ಹಿಂದಿನ ಕಾಲದಲ್ಲಿ ಆಯಾಮ ಊರುಗಳಲ್ಲಿ ನೆಲೆಸಿರುವ ಗ್ರಾಮದೇವತೆಯ ಹೆಸರನ್ನೇ ತಮ್ಮ ಮಕ್ಕಳಿಗೆ ಮೊಮ್ಮಕ್ಕಳಿಗೆ ಇಡುತ್ತಿದ್ದದನ್ನು ಕಾಣುತ್ತಿದ್ದವು. ಸಂಪ್ರದಾಯಸ್ಥ ಕುಟುಂಬಗಳು ಈ ನಿಯಮವನ್ನು ಪಾಲಿಸುತ್ತಾ ಇದ್ದವು. ಮಾರಕ್ಕ, ಮಾರಪ್ಪ, ಚಾಡಿ, ಚೌಡಮ್ಮ, ಕಾಳಿ, ಮಾದ, ಮಾದಿ, ಕಬ್ಬಾಳಮ್ಮ ಎನ್ನುವ ಹೆಸರುಗಳು ಮಕ್ಕಳಿಗೇ ಅಲ್ಲದೇ ತಮ್ಮ ತಮ್ಮ ಅಂಗಡಿ ಮುಂಗಟ್ಟುಗಳಿಗೂ ಇಡುತ್ತಿದ್ದರು. ಉದಾ: ಕಬ್ಬಾಳಮ್ಮ ಟೆಕ್ಸ್‌ಟೈಲ್ಸ್, ಕಬ್ಬಾಳಮ್ಮ ಹೋಟೆಲ್, ಕಬ್ಬಾಳಮ್ಮ ಟೂರ್ ಅಂಡ್ ಟ್ರಾವೆಲ್ಸ್, ಕಬ್ಬಾಳಮ್ಮ ಸೈಬರ್ ಸೆಂಟರ್, ಕಬ್ಬಾಳಮ್ಮ ಗಿರವಿ ಅಂಗಡಿ ಇತ್ಯಾದಿ. ಆದರೆ ವಿದ್ಯಾವಂತ ಯುವಕರಿಂದ ಇಡಿದು ವ್ಯಾಪಾರೋದ್ಯಮದಲ್ಲಿರುವ ಬಹುತೇಕ ವ್ಯಕ್ತಿಗಳು ತಮ್ಮ ಇಷ್ಟಾನುದೇವತೆಯ ಹೆಸರನ್ನಿಟ್ಟು ನಾಮಫಲಕವನ್ನು ತೂಗು ಹಾಕಿ ದೇವಿಯ ಛಾಯಾಚಿತ್ರವನ್ನು ಹೂವಿನಿಂದ ಅಲಂಕರಿಸಿ ಸಿಂಗರಿಸಿರುತ್ತಾರೆ. ತಾವು ಬಳಸುವ ಬೈಕ್, ಆಟೋರಿಕ್ಷಾ, ಕಾರು, ಬಸ್ಸು, ವ್ಯಾನ್, ಟೆಂಪೊ ಮುಂತಾದ ವಾಹನಗಳ ಮೇಲೆ ಕಬ್ಬಾಳಮ್ಮ ಕೃಪೆ ಎಂದು ಸಾಮಾನ್ಯವಾಗಿ ಕಂಡು ಬರುತ್ತದೆ. ಆದರೆ ಇತ್ತೀಚಿನ

ದಿನಗಳಲ್ಲಿ ಕಬ್ಬಾಳಮ್ಮನ ಪ್ರಭಾವ ಜಾಸ್ತಿಯಾಗಿ ನಗರದ ಒಳಭಾಗದಲ್ಲಿರುವ ಕೆಲವು ಅಂಗಡಿಗಳಿಂದ ಅಷ್ಟೇ ಅಲ್ಲದೆ ಬಾರ್ ಅಂಡ್ ರೆಸ್ಟೋರೆಂಟ್‌ಗಳ ಹೆಸರು ಇದೇ ಆಗಿದ್ದು, ಮಾಂಸದಂಗಡಿಗಳು, ಮಾತ್ರೆ ಅಂಗಡಿಗಳು, ವಿದ್ಯುತ್, ಎಲೆಕ್ಟ್ರಿಕಲ್ ಅಂಗಡಿಗಳು, ಮನೆಯ ಹೆಸರುಗಳು ಇದರಿಂದ ಪ್ರಭಾವಿತವಾಗಿವೆ. ಹೆಸರಿನ ಬಳಕೆಯಿಂದ ವ್ಯಾಪಾರದಲ್ಲಿ ಒಳ್ಳೆಯ ಲಾಭಸಂಪಾದನೆ ಆಗುವುದೆನ್ನುವ ನಂಬಿಕೆಯಿಂದ ಈ ತರಹದ ಪ್ರಚಾರ ದಿನೇ ದಿನೇ ನಡೆಯುತ್ತಿದೆ.

ಇಡೀ ದಿನ ದುಡಿದ ಜನಕ್ಕೆ ರಾತ್ರಿಯ ಕಾಲ ಬಿಡುವು ಸಿಕ್ಕುವುದರಿಂದ ತಮ್ಮ ಬೇಡಿಕೆಗಳ ಕೇಳಿಕೆ ಮತ್ತು ಪೂರೈಕೆಗಾಗಿ ದೇವತೆಯಲ್ಲಿ ಭಿನ್ನೈಸಿಕೊಳ್ಳಲು ಜಾತ್ರೆಯ ಸಂದರ್ಭವನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳುವುದುಂಟು. ಏಕಕಾಲದಲ್ಲಿ ಲಕ್ಷಾಂತರ ಜನತೆಗೆ ತಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತಿಳಿಸಲು ರಾಜಕಾರಣಿಗಳೂ ಇದು ಸುಸಂದರ್ಭವಾಗಿರುತ್ತದೆ.ಇಂದು ರಾಜಕೀಯ ಮುಖಂಡರಿಲ್ಲದೇ ಜಾತ್ರೆಗಳು ನಡೆಯುವುದು ಬಲು ಅಪರೂಪ. ಕೆಲವು ಊರಿನ ಜಾತ್ರೆಗಳಲ್ಲಿ ದೇವಸ್ಥಾನಕ್ಕೆ ಏನಾದರೂ ಆಮಿಷವೊಡ್ಡಿ ಜಾತ್ರೆಯಲ್ಲಿ ಜಾಗ ಪಡೆಯುವುದುಂಟು. ರಾಜಕಾರಣಿಗಳು ಚುನಾವಣೆಗೆ ನಿಲ್ಲುವುದಕ್ಕೂ ದೇವಿಯ ಆಶೀರ್ವಾದ ಪಡೆಯುವುದುಂಟು.

➢ **ಆಚರಣೆಗಳು**

ಪ್ರಕೃತಿಯ ವಿಕೋಪಗಳನ್ನು ತನ್ನ ತಹಬದಿಗೆ ತರಲಾಗದ ಸಮಸ್ಯೆಗಳ ವಿಸ್ಮಯ ಘಟನೆಗಳ ನಿವಾರಣೆಗೆ ಅಂದಿನ ಆದಿಮಾನವರಿಗೆ ನಂಬಿಕೆಯೇ ತಳಹದಿಯಾಗಿತ್ತು. ಈ ನಂಬಿಕೆಯಿಂದ ಸತ್ತ ತನ್ನ ತಂದೆ-ತಾಯಿ ಮುಂತ್ತಾತಂರಿಂದ ಆತ್ಮಗಳನ್ನು ಹಾಗೂ ತಾವು ವಾಸಿಸುವ ಪರಿಸರದ ಸುತ್ತಾಮುತ್ತಾ ಗಿಡಮರಗಳನ್ನು ದೇವರೆಂದು ನಂಬಿ ಪೂಜಿಸತೊಡಗಿದರು. ಕಾಲಕ್ರಮೇಣ ತಮಗೆ ಒದಗಿಬಂದ ಕಷ್ಟನಷ್ಟಗಳ ನಿವಾರಣೆಗಳನ್ನು ಪರಿಹರಿಸುವ ಸಲುವಾಗಿ ತಮ್ಮ ಆರಾಧ್ಯದೇವರನ್ನು ಗ್ರಾಮ ದೇವತೆಗಳನ್ನಾಗಿ ಮಾಡಿಕೊಂಡರು.ದೇವರಲ್ಲಿ ಭಕ್ತಿ ಭಯ ಗೌರವ ಶ್ರದ್ಧೆಯುಳ್ಳ ಜನರು

ದೇವರನ್ನು ಒಲಿಸಿಕೊಂಡು ಸಂಪ್ರೀತಿಗೊಳಿಸಿ, ಶಾಂತಿ ನೆಮ್ಮದಿಯನ್ನು ಕಂಡುಕೊಳ್ಳಲು ಈ ನಂಬಿಕೆಗಳನ್ನು ಆಶ್ರಹಿಸಿದರು. ಈ ನಂಬಿಕೆಯ ಹಿನ್ನೆಲೆಯಲ್ಲಿ ಹಲವಾರು ಹರಕೆ ಆಚರಣೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬಂದರು. ತಮಗೆ ಒದಗಿಬಂದ ಕಷ್ಟಗಳ ನಿವಾರಣೆಗೆ ತಾವುಗಳ ನಂಬಿದ ದೈವಕ್ಕೆ ಹರಕೆ ಆಚರಣೆಗಳನ್ನು ಸಲ್ಲಿಸುವುದು ಮೊದಲ ಕರ್ತವ್ಯವಾಯಿತು. ಕ್ರಮೇಣ ಇದು ಮುಂದುವರಿದಂತೆ ಒಂದು ಸಂಪ್ರದಾಯವಾಗಿ ಬೆಳೆದುಬಂದಿತು. ಈ ಹರಕೆ ಆಚರಣೆಗಳು ದೈವಾರಾಧನೆ, ಜಾತ್ರೆ, ಹಬ್ಬ, ಉತ್ಸವಗಳಲ್ಲಿ ವಿಶೇಷವಾಗಿ ವ್ಯಕ್ತಗೊಳ್ಳುತ್ತಾ ಬಂದು ಪರಂಪರಾನುಗತವಾಗಿ ಮುಂದಿನ ಪೀಳಿಗೆಗೆ ವರ್ಗಾಯಿಸಿಕೊಂಡು ಬಂದರು.

ಜನಪದ ಸಂಸ್ಕೃತಿಗೆ ಆಚರಣೆ ಅಂದಿನಿಂದಲೂ ಆಸರೆಯಾಗಿ ಬಂದಿದೆ. ಆಚರಣೆಯಿಲ್ಲದ ಯಾವುದೇ ದೈವದ ಅಸ್ತಿತ್ವ ಇರಲು ಸಾಧ್ಯವಿಲ್ಲ. ಜನಪದ ಧಾರ್ಮಿಕ ಸಂಸ್ಕೃತಿ ಒಂದು ಬಗೆಯಲ್ಲಿ ಆಚರಣೆಯ ಧರ್ಮ ಎನ್ನಬಹುದು. ಭಕ್ತರು ಸಲ್ಲಿಸುವ ಸೇವೆ ಆಚಾರ ವಿಚಾರಗಳು ಸಾಂಸ್ಕೃತಿಕ ನೆಲೆಯಲ್ಲಿ ತುಂಬಾ ಗಮನಾರ್ಹವೆನಿಸುತ್ತವೆ.

ಗ್ರಾಮದೇವತೆಗಳ ಬಗೆಗೆ ಇಂದು ಕೂಡ ಹೆಚ್ಚಿನ ಪ್ರಮಾಣದಲ್ಲಿ ಐತಿಹ್ಯ ಪುರಾಣಗಳು ಯತೇಚ್ಚವಾಗಿ ಸಿಗುತ್ತವೆ. ಇದರಿಂದ ನಂಬಿಕೆ, ಸಂಪ್ರದಾಯಗಳು ಬೆಳೆದುಕೊಂಡು ಬಂದಿವೆ. ನಂಬಿಕೆ ಸಂಪ್ರದಾಯಗಳ ಆಧಾರದಿಂದ ಭಕ್ತರು ಸಲ್ಲಿಸುವ ಸೇವೆ ಆಯಾಮ ಸಂಸ್ಕೃತಿಯ ಒಂದು ಮಹತ್ವದ ಅವಿಭಾಜ್ಯ ಅಂಗವಾಗಿ ನಡೆದುಕೊಂಡು ಬರುತ್ತದೆ. ಹೀಗೆ ನಂಬಿಕೆಯ ತಳಹದಿಯ ಮೇಲೆ ಹುಟ್ಟಿಕೊಂಡ ಹರಕೆಗಳು ಕಾಲಸಂತರದಲ್ಲಿ ಆಚರಣೆಯ ಸೇವೆಗಳಾಗಿ ಪ್ರಕಟಗೊಳ್ಳುತ್ತವೆ.

ನಂಬಿದ ದೇವತೆಗೆ ಭಯ ಭಕ್ತಿಯಿಂದ ಒಪ್ಪಿಕೊಂಡು ಮಾಡಿಕೊಂಡದುದೇ ಹರಕೆ ಆಚರಣೆಯೇ ಅದರ ಸೇವೆ ಹರಕೆಯನ್ನು ಪಡೆದುಕೊಳ್ಳುವ ಇಲ್ಲಿನ ದೇವತೆಗಳೆಲ್ಲಾ ಮನುಷ್ಯನಿಂದ ಸೃಷ್ಟಿಗೊಂಡ ಪ್ರತೀಕವಾಗಿದೆ. ಭರವಸೆಯ ಭವಿಷ್ಯದ ಗತಿಯಲ್ಲಿ ಆಗುವ ಮನುಷ್ಯನ ಬದುಕು ತನಗೊದಗಿದ ಸಂಕಷ್ಟಗಳ ಪರಿಹಾರಕ್ಕಾಗಿ

ಹರಕೆಯನ್ನು ಹೊತ್ತುಕೊಳ್ಳುವುದು. ಇದರಿಂದಾಗಿ ಆಭರಣ, ವಸ್ತ್ರಾದಿಗಳನ್ನು ಕೊಡುವುದು, ಗುಡಿಗೋಪುರಗಳನ್ನು ಕಟ್ಟಿಸುವುದು, ಪಲ್ಲಕಿಗಳನ್ನು ಕೊಡಿಸುವುದು, ಧನ ದಾನ್ಯಾದಿಗಳನ್ನು ಒದಗಿಸುವುದು ಇನ್ನಿತರ ಸೇವಾಕಾರ್ಯವನ್ನು ಮಾಡುವುದು ಮುಂತಾದ ಕಾರ್ಯಗಳಲ್ಲಿ ವ್ಯಕ್ತಿ ತೊಡಗಬೇಕಾಗುತ್ತದೆ. ಇಲ್ಲಿ ಕಾಣುವ ಅವನ ಛಲ, ನಿಷ್ಠೆ, ಮಡಿ ಮೈಲಿಗೆಗಳ ಸೂಕ್ಷ್ಮತೆ ಹಾಗೂ ಸಂಪ್ರದಾಯ ನಿಷ್ಠೆಗಳು ಕ್ರಿಯಾತ್ಮಕ ರೂಪಗಳಾಗಿ ಪ್ರಮುಖ ಪಾತ್ರವಹಿಸುತ್ತವೆ. ಈ ಮೇಲಿನ ಮಾತು ಸಾರ್ವಕಾಲಿಕ ಸತ್ಯವಾಗಿದ್ದು ತನ್ನ ಇಡೀ ಬದುಕಿನಲ್ಲಿ ಸುಖ ಸಮೃದ್ಧಿಯನ್ನು ಕಾಣುವ ಕಾರಣಕ್ಕೆ ದೇವರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸೇವೆ ಸಲ್ಲಿಸುತ್ತಾ ಇದು ವರ್ಗಾವಣೆಯಾಗುತ್ತಾ ಬಂದಿರುವುದನ್ನು ಕಾಣುತ್ತೇವೆ. ಒಂದು ವರ್ಗ ಪರಂಪರಾನುಗತವಾಗಿ ಒಪ್ಪಿಕೊಂಡಿರುವ ಮಾನವ ಕ್ರಿಯಾವಿನ್ಯಾಸವನ್ನು ಸಂಪ್ರದಾಯವೆಂತಲ್ಲೂ ಕರೆಯುತ್ತಾರೆ. ಕಾಲಾನುಕಾಲದಿಂದ ಬದಲಾಗದೇ ಉಳಿದು ಬಂದ ರೂಢಿ ಎಂದರ್ಥ. ಪದ್ಧತಿ, ರೂಢಿ, ಸಂಪ್ರದಾಯ ಎಲ್ಲಾ ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಧ್ವನಿಸುವಂತಹ ಪದಗಳು. ಇಂಗ್ಲೀಷಿನ (Tradition) ಎಂಬ ಪದಕ್ಕೆ ಸಂವಾದಿಯಾಗಿ ಸಂಪ್ರದಾಯ ಎಂಬ ಪದವನ್ನು ಬಳಸಬಹುದು. ಯಾವುದೇ ಒಂದು ನಡವಳಿಕೆ ರೂಢಿಗತವಾಗಿ ಒಂದು ಸಮಾಜದಲ್ಲಿ ಸ್ಥಾಪನೆಯಾದಾಗ ಅದು ಸಂಪ್ರದಾಯವಾಗುತ್ತದೆ. ಹೀಗೆ ತಾವು ನಂಬಿಕೊಂಡ ಶ್ರದ್ಧಾಭಕ್ತಿಯಿಂದ ಮಾಡಿಕೊಂಡ ಹರಕೆಗಳು ಕಾರ್ಯರೂಪಕ್ಕೆ ಬರುವುದನ್ನು ಆಚರಣೆ ಎನ್ನುತ್ತೇವೆ. ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಗವಾಗಿ ಆಚರಣೆ ರೂಪ ಪಡೆಯುತ್ತವೆ. ಇವು ತಲತಲಾಂತರದಿಂದ ಸಮುದಾಯದ ಅಂಗೀಕರಣವನ್ನು ಪಡೆದು ಬಳಕೆಯಲ್ಲಿರುವ ಮೂಲ ಮತ್ತು ಧಾರ್ಮಿಕ ವಿಧಗಳೇ ಜನಪದ ಆಚರಣೆ.

ಕಬ್ಬಾಳಿನಲ್ಲಿ ಸಾಮಾಜಿಕ, ಸಾಂಸ್ಕೃತಿಕ ವೈಶಿಷ್ಟ್ಯಗಳ ಆಧಾರದ ಮೇಲೆ ಭೌಗೋಳಿಕ ಹಿನ್ನಲೆಯಲ್ಲಿ ಕ್ರಮಬದ್ಧವಾಗಿ ಅರ್ಥಪೂರ್ಣವಾದ ಹಾಗೂ ವೈವಿಧ್ಯಮಯವಾದ ಜಾತ್ರೆಯ ಆಚರಣೆಗಳು ಇಂತಿವೆ.

ಸೋಮವಾರ ಮೂರು ಗಂಟೆಗೆ ವಡ್ಡರದೊಡ್ಡಿಯ ಗ್ರಾಮಸ್ಥರು ಮೂವತ್ತು ಅಡಿ ಎತ್ತರದ ರಥವನ್ನು ಕಟ್ಟಿ, ಹೂ, ಬಣ್ಣ-ಬಣ್ಣದ ಬಟ್ಟೆ, ಬಾಳೆ ಕಂದು, ಬಾವುಟಗಳಿಂದ ಶೃಂಗಾರ ಮಾಡಿ, ಅದರಲ್ಲಿ ಕಬ್ಬಾಳಮ್ಮ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ, ದೇವಸ್ಥಾನದಿಂದ ಹಿಡಿದು ಮುಂಭಾಗದ ರಸ್ತೆಯಲ್ಲಿ ಹಾದು ದೇವಸ್ಥಾನದ ಸುತ್ತಾ ರಥವನ್ನು ಎಳೆಯುತ್ತಾರೆ.

ಕರ್ನಾಟಕದಾದ್ಯಂತ ಕಬ್ಬಾಳಮ್ಮ ದೇವರ ಭಕ್ತರಿದ್ದು, ಹರಕೆ ಕಟ್ಟಿಕೊಂಡವರು ಮನೆಯನ್ನು ಶುಚಿಗೊಳಿಸಿ, ಹಸಿ ತಂಬಿಟ್ಟನ್ನು ಮಾಡಿ, ಹೊಸ ಬುಟ್ಟಿಯಲ್ಲಿ ಹೊಸ ಕರಗ ಹಸಿ ತಂಬಿಟ್ಟು, ಹೂವು, ಎಲೆ, ಅಡಿಕೆ, ಕಡ್ಡಿ, ಕರ್ಪೂರಗಳನ್ನು ಹೆಡಗೆಯಲ್ಲಿ ಹಾಕಿಕೊಂಡು ದೇವಸ್ಥಾನದ ಬಳಿ ಬಂದು ಕೊಂಡ ಮುಗಿದ ನಂತರ ಹೆಡಗೆಯನ್ನು ಬಿಚ್ಚಿ, ಹೊಸ ಮಡಿಕೆಯಲ್ಲಿ ತಂಬಿಟ್ಟನ್ನು ಇಟ್ಟು, ಗಣಗಲ ಹೂವಿನಿಂದ ಅಲಂಕರಿಸಿ ಮೆರವಣಿಗೆ ಮುಖಾಂತರ ದೇವಸ್ಥಾನಕ್ಕೆ ಬಂದು ಆರತಿ ಸಲ್ಲಿಸುತ್ತಾರೆ.

ಮಂಗಳವಾರ ಬೆಳ್ಳಿಗ್ಗೆ ಹನ್ನೊಂದು ಗಂಟೆಗೆ ಕೊಂಡದ ಬಾಗಿಲಿನಲ್ಲಿ ಸಿಡಿಕಂಬವನ್ನು ನೆಟ್ಟು, ಹರಕೆ ಕಟ್ಟಿಕೊಂಡವರನ್ನು ಸಿಡಿಯಾಡಿಸುತ್ತಾರೆ. ಅಂದು ರಾತ್ರಿ ಕಬ್ಬಾಳಮ್ಮನನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಉತ್ಸವ ಮಾಡುತ್ತಾರೆ. ಈ ಉತ್ಸವದಲ್ಲಿ ದೊಳ್ಳು ಕುಣಿತ, ಪಟದ ಕುಣಿತ, ಪೂಜಾ ಕುಣಿತ, ಕೀಲು ಕುದುರೆ ಕುಣಿತಗಳು ಆಕರ್ಷಣೀಯವಾಗಿರುತ್ತವೆ. ಮಂಗಳವಾರ ರಾತ್ರಿ ಸಿಡಿಯ ದಿವಸ ಹುಣಸನಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಬಿಸಿಲಮ್ಮ ದೇವರ ಅರ್ಚಕರು ಗ್ರಾಮಸ್ಥರ ಜೊತೆ ಹಿರಿಯ ಸತ್ಕಮ್ಮನ್ನು ಕಬ್ಬಾಳಿಗೆ ತಂದು ದೇವಸ್ಥಾನದ ಹಜಾರದಲ್ಲಿ ದೇವರಿಟ್ಟು, ತಾವು ಮಾಡಿಕೊಂಡು ಬಂದಿರುವ ಕೋಳಿ ಮಾಂಸದ ನೈವೇದ್ಯವನ್ನು ಕೋಣನ ಮಾರಮ್ಮ, ಮಂತಿನ ಮಾರಮ್ಮ ದೇವರ ಮುಂದಿಟ್ಟು ಪೂಜೆ ಸಲ್ಲಿಸುತ್ತಾರೆ.

## ೪. ಮಹಿಮೆಗಳು

ಕಬ್ಬಾಳಮ್ಮನ ಮಹಿಮೆಗಳು ಅಪಾರವಾಗಿದ್ದು, ತಾಯಿ ತನ್ನ ಮಹಿಮೆಗಳಿಂದಲೇ ಲಕ್ಷಾಂತರ ಜನರನ್ನು ಭಕ್ತರನ್ನಾಗಿ ಪಡೆದುಕೊಂಡಿದ್ದಾಳೆ. ಕಬ್ಬಾಳಮ್ಮ ಕೇಳಿದ ಜನರಿಗೆ ಇಲ್ಲ ಎನ್ನದೆ ಕೊಡುವಂತ ದೇವಿ ಈ ದುರ್ಗದ ದುರ್ಗಿ ಕಬ್ಬಾಳಮ್ಮ.

ಒಂದು ದಿನ ಕಬ್ಬಾಳಮ್ಮ ತಂಗಿಯನ್ನು ನೋಡಲು ಹೋದಾಗ ತಂಗಿ ತನ್ನ ಅಕ್ಕ ಬಂಜೆ ಎಂದು ಮಕ್ಕಳನ್ನು ಬುಟ್ಟಿಯಲ್ಲಿಟ್ಟು ಮುಚ್ಚಿಟ್ಟು ಕುಳಿತಿರುತ್ತಾಳೆ. ಕಬ್ಬಾಳಮ್ಮ ಬಂದು ತಂಗಿಯನ್ನು ಮಕ್ಕಳೆಲ್ಲಾ ಎಂದು ಕೇಳಿದಾಗ ಮಕ್ಕಳು ಆಡವಾಡಲು ಹೋಗಿವೆ ಎಂದು ಹೇಳುತ್ತಾಳೆ. ಅದಕ್ಕೆ ಈ ಬುಟ್ಟಿಯಲ್ಲಿರುವ ಮಕ್ಕಳು ಕಲ್ಲಾಗಲಿ ಎಂದು ಶಾಪ ಕೊಡುತ್ತಾಳೆ.

## ೫. ಜಾತ್ರೆ

ಕಬ್ಬಾಳಮ್ಮನ ಜಾತ್ರೆ ಸುತ್ತಮುತ್ತಲ ಪ್ರದೇಶದಲ್ಲೇ ತನ ಆಚರಣಾ ವಿಧಾನದಿಂದ ವಿಶೇಷತೆಯನ್ನು ಪಡೆದುಕೊಂಡಿದೆ. ಗ್ರಾಮದೇವತೆಯಾದ ಕಬ್ಬಾಳಮ್ಮ ತನ್ನ ಪಾರಂಪರಿಕ ಕ್ರಿಯಾ ಆಚರಣೆ ಸಂಪ್ರದಾಯಗಳನ್ನು ಪಡೆದುಕೊಂಡು ತನನ್ನು ನಂಬಿರುವ ಭಕ್ತರಿಗೆ ಸದಾ ಆಶಯವನ್ನು ಬಯಸುವ ಗ್ರಾಮದೇವತೆಯಾಗಿದ್ದಾಳೆ.

ಗ್ರಾಮದೇವತೆಯ ಜಾತ್ರೆಗಳು ನಮ್ಮ ಪರಂಪರೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಾವೇಶದಂತೆ ಕಂಡು ಬರುತ್ತವೆ. ಆದ್ದರಿಂದ ಪ್ರತಿಯೊಂದು ಗ್ರಾಮದೇವತೆಗಳಿಗೂ ಪೂಜೆ ಆರಾಧನೆಗಳಂತೆಯೇ ಹಬ್ಬ ಜಾತ್ರೆಗಳು ಮಹತ್ವದೆನಿಸುತ್ತವೆ. ಇದರಿಂದ ಪೂಜಿಸುವ ಭಕ್ತ ಮತ್ತು ಒಪ್ಪಿಕೊಂಡ ಮನುಷ್ಯರ ನಡುವೆ ಇರುವ ಸಂಬಂಧವನ್ನು ಭದ್ರಪಡಿಸುವಲ್ಲಿ ಗ್ರಾಮದೇವತೆಗಳ ಜಾತ್ರೆಗಳು ಪೂರಕವಾಗಿ ಕೆಲಸ ಮಾಡುತ್ತವೆ.

ಕಬ್ಬಾಳು ಸುತ್ತಮುತ್ತಲ ಪ್ರದೇಶದ ಜನತೆಯ ಆರಾಧ್ಯ ದೈವದಂತೆ ಗ್ರಾಮದೇವತೆ ಕಬ್ಬಾಳಮ್ಮನನ್ನು ಪೂಜಿಸುತ್ತಿರುವುದರಿಂದ ಕಷ್ಟಕಳೆದು ಇಷ್ಟಾರ್ಥಗಳು ಸಿದ್ದಿಸುತ್ತವೆ ಎಂದು ಜನರು ತುಂಬಾ ಹಿಂದಿನಿಂದಲೂ ನಂಬಿಕೊಂಡು ಆರಾಧಿಸುತ್ತಾ ಬಂದಿದ್ದಾರೆ.ನಮ್ಮ ಬದುಕಿನ ಏಳು ಬೀಳುಗಳಿಗೆ ಈ ತಾಯಿಯನ್ನಿಟ್ಟುಕೊಂಡು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಜಾತ್ರೆ ಎಂಬುದು ಹಲವಾರು ಸಮುದಾಯಗಳು, ಸಾಮೂಹಿಕವಾಗಿ ಒಂದು ಕಡೆ ಸೇರಿ ದೇವತೆಯ ಹೆಸರಿನಲ್ಲಿ ಆಚರಿಸುವ ಒಂದು ಸಂಭ್ರಮ, ಜನಪದೀಯ ಚಟುವಟಿಕೆಗಳು ವಿಶಿಷ್ಟ ಆಚರಣೆಗಳು, ವಿವಿಧ ಕಲೆಗಳು, ಪ್ರದರ್ಶನಗೊಳ್ಳುತ್ತಾ ನೋಡು ನೋಡುತ್ತಲೇ ಆಕರ್ಷಿಸುತ್ತವೆ. ಸಾಮಾನ್ಯವಾಗಿ ವರ್ಷಕ್ಕೊಂದು ಬಾರಿ ಆಚರಿಸುವ ಇಂತಹ ಜಾತ್ರೆಗಳಲ್ಲಿ ಊರಿನ ಜನರ ಸಾಮಾಜಿಕ ಆರ್ಥಿಕ ಬದುಕನ್ನು ಬಿಂಬಿಸುವ ರೀತಿಯಲ್ಲಿ ನೆರವೇರುತ್ತವೆ. ಹಿಂದಿನಿಂದಲೂ ದೇವಸ್ಥಾನಗಳೆಂದರೆ ಯಾವುದೇ ಜನಪದ ಸಾಮೂಹಿಕ ಶ್ರದ್ಧಾಕೇಂದ್ರಗಳಾಗಿ ಹುಟ್ಟಿಕೊಂಡವು. ಇವು ಭಾರತದಲ್ಲಿಯೂ ದೈವಸ್ಥಾನಗಳಾಗಿರ–ಬಹುದು. ಸಾಮೂಹಿಕವಾಗಿ ಎಲ್ಲರೂ ಸೇರಿ ವಿವಿಧ ಕಾರ್ಯಗಳನ್ನು ಹಂಚಿಕೊಂಡು ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಭಾಗವಹಿಸುವ ಚಟುವಟಿಕೆಯಾಗಿ ಜಾತ್ರೆ ರೂಪಗೊಂಡಿತು.

ಎಲ್ಲಾ ಗ್ರಾಮದೇವತೆಯ ಹಬ್ಬ ಅಥವಾ ಜಾತ್ರೆಗಳು ಅಲ್ಲಿಯ ದೈವದ ಹೆಸರಿನಿಂದ ಅಥವಾ ಊರಿನ ಹೆಸರಿನಿಂದ ಜಾತ್ರೆಯಾಗಿರುವುದನ್ನು ಕಾಣಬಹುದು. ಹಾಗಾದರೆ ಜಾತ್ರೆ ಎಂಬ ಪದವೂ ಸಂಸ್ಕೃತದ ಯಾತ್ರಾ ಎಂಬ ಪದ ಕನ್ನಡದಲ್ಲಿ ಜಾತ್ರೆ ಎಂಬುದಾಗಿದೆ. ಜಾತ್ರೆ ಎಂದರೆ ಪರಿಷೆ, ಹೆಚ್ಚು ಜನರು ಸೇರುವ ದೊಡ್ಡ ಸಮೂಹವೆಂತಲೂ ಕರೆಯುತ್ತಾರೆ. ಜಾತ್ರೆ ಇಂದು ಪುಣ್ಯಕ್ಷೇತ್ರದ ಜಾತ್ರೆಯಾಗಿ ಕೇವಲ ಧಾರ್ಮಿಕ ಉದ್ದೇಶದ ಮಹತ್ವವನ್ನು ಬೀರುವ ಪ್ರಯತ್ನವನ್ನು ಕೇವಲ ಪುಣ್ಯಕ್ಷೇತ್ರಗಳಲ್ಲಿ ಕಾಣಬಹುದು. ವ್ಯಕ್ತಿಯೊಬ್ಬ ಭಾಗವಹಿಸಿದ ಜಾತ್ರೆಯಲ್ಲಿ ದೇವರ ರಥ, ಪಲ್ಲಕ್ಕಿ, ಕೊಂಡ, ಬಂಡಿಗಳು ಕೂಡಿ ಅಪಾರ ಜನಸ್ತೋಮವನ್ನು ಆಕರ್ಷಿಸುವಲ್ಲಿ ನೆರವಾಗುತ್ತವೆ.

ಜಾತ್ರೆಯು ಸಮಷ್ಟಿಯ ಸಂಪತ್ತು ಕ್ಷೇಮಾಭಿವೃದ್ಧಿಗಾಗಿ ನಿಗದಿತ ಅವಧಿಯಲ್ಲಿ ಒಂದು ದೇವತೆ ಇಲ್ಲವೆ, ಮಹಾಪುರುಷರ ಹೆಸರಿನಲ್ಲಿ ಧಾರ್ಮಿಕ ಕ್ಷೇತ್ರವೊಂದರಲ್ಲಿ ಸಾಮೂಹಿಕವಾಗಿ ಆಚರಿಸುವ ಧಾರ್ಮಿಕ ವಿಧಿಯಾಗಿ ಇಂದು ರೂಢಿಯಲ್ಲಿದೆ. ಜಾತ್ರೆಯಿಂದ ಮನುಷ್ಯನ ಮನಸ್ಸು ಧಾರ್ಮಿಕತೆ ಮತ್ತು ಆಧ್ಯಾತ್ಮದ ಸವಿಯನ್ನು ಪಡೆದು ನಿತ್ಯ ದುಡಿಯುವ ಭೌದ್ಧಿಕ ಮತ್ತು ದೈವಿಕ ಶ್ರಮಕ್ಕೆ ಸ್ವಲ್ಪ ವಿರಾಮವನ್ನು ನಿತ್ಯಜೀವನದ ಲೌಖಿಕ ಜೀವನದ ಹೊಸ ಆಯಾಮವನ್ನು ಪಡೆಯುತ್ತಾನೆ. ನಿತ್ಯಜೀವನದ ಜಂಜಾಟದ ಬದುಕು ದುಸ್ತರ ಎನಿಸುತ್ತಾ ಹೋದಗೆಲ್ಲಾ ಜಾತ್ರೆಯು ಒಂದು ಮಹಾಕಾರ್ಯದ ಸಂತೃಪ್ತಿಯ ಮನಸ್ಸನ್ನು ಕೊಡುತ್ತದೆ. ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಸಂಸ್ಕೃತಿಯ ಪ್ರವಾಹವನ್ನು ಮುಂದುವರೆಸಲು ಜಾತ್ರೆ ಇಂದು ಕೂಡ ಪ್ರಸ್ತುತವೆನಿಸುತ್ತದೆ.

ಜಾತ್ರೆ ಎಂದರೆ ಕೇವಲ ದೇವರ ಅಥವಾ ಧಾರ್ಮಿಕ ಪ್ರಜ್ಞೆಯಷ್ಟೇ ಅಲ್ಲದೇ ಮಾನಸಿಕ ಸಂತೋಷ ಮನರಂಜನೆ, ಜನಪದರ ಜೀವನ ಕ್ರಮ ಹಾಗೂ ಕುಣಿತ, ಕೋಲಾಟ, ಗಾಡಿ ಓಟ, ನಾಟಕ, ರಥೋತ್ಸವ, ಪಲ್ಲಕ್ಕಿ ಹೀಗೆ ವಿವಿಧ ರೀತಿಯ ಪ್ರದರ್ಶನಗಳು ನಡೆದು ಅವುಗಳಿಂದ ಉಲ್ಲಸಿತರಾಗುವ ಲಕ್ಷಾಂತರ ಜನಸಮೂಹ ಒಂದು ಕಡೆ ಮತ್ತೊಂದು ಕಡೆಯಲ್ಲಿ ಕಿರಿಯ ಪೀಳಿಗೆಯೆನಿಸಿದ ಚಿಕ್ಕಮಕ್ಕಳು ಕುತೂಹಲದಿಂದಲೇ ಮನರಂಜನೆಯನಷ್ಟೇ ಅಲ್ಲದೇ ದೈವಿಕ ಭಾವನೆಯನ್ನು ಇಂತಹ ಜಾತ್ರೆಯಿಂದಲೇ ಕಲಿಯುತ್ತಿರುತ್ತಾರೆ.

ಹಿಂದೇ ಸ್ಥಳೀಯ ಅಥವಾ ದೇಶೀಯ ಉತ್ಪನ್ನಗಳಾದ ಮಣ್ಣಿನ ಮಡಿಕೆ, ಮೊರ, ಜರಡಿ, ಬುಟ್ಟಿ, ಹಣತೆದೀಪಗಳು, ತೊಟ್ಟಿಲುಗಳು ಮಾರಾಟವಾಗುತ್ತಿದ್ದು, ಲೋಹಯುಗದ ಪ್ರವೇಶದಿಂದ ಸಾಕಷ್ಟು ಬದಲಾವಣೆಗೊಳಪಡಿಸಿತು. ತಾಮ್ರ, ಕಂಚು, ಹಿತ್ತಾಳೆ, ಅಲ್ಯೂಮಿನಿಯಂನಿಂದ ನಿರ್ಮಿತ ವಸ್ತುಗಳಾದ ಹಂಡೆ, ಬಿಂದಿಗೆ, ಕೊಳಗ, ಗುಂಡಿ, ಕಂಚಿನ ತಟ್ಟೆ, ಚಂಬುಗಳೇ ಜಾಸ್ತಿಯಾಗಿ ಮಾರಾಟದ ವಸ್ತುಗಳಾಗಿವೆ. ಪ್ಲಾಸ್ಟಿಕ್ ಪದಾರ್ಥಗಳೇ ಜಾಸ್ತಿಯಾಗಿ ಮಾರಾಟದ ವಸ್ತುಗಳಾಗಿ ಬರುತ್ತವೆ. ಇವು ಮನುಷ್ಯನ

ಆಧುನಿಕ ಜೀವನಕ್ಕನುಗುಣವಾಗಿ ಪ್ರಾಚೀನತೆಯನ್ನು ಗರ್ಭೀಕರಿಸಿಕೊಂಡಂತೆ ಹೊಸ ರೂಪ ಪಡೆಯುತ್ತಾ ಬದಲಾಗತೊಡಗಿವೆ.

ಮರದ ಬೊಂಬೆ, ಬಣ್ಣದ ಬುಗುರಿ, ಪಿಳ್ಳಂಗೋವಿ, ಕೊಳಲು, ಪೀಪಿ, ಚೆಂಡು, ಪ್ಲಾಸ್ಟಿಕ್ ಚೆಂಡು, ಕಣ್ಣಪ್ಪು, ಪ್ರಾಣಿ ಪಕ್ಷಿಗಳ ಚಿತ್ರ, ಮೂರ್ತಿ ಮೊದಲಾದವು ಮರ ಮಣ್ಣಿನಿಂದ ಮಾಡುತ್ತಿದ್ದ ಕರಕುಶಲ ವಸ್ತುಗಳ ಜಾಗದಲ್ಲಿ ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟ ಪ್ಲಾಸ್ಟಿಕ್ ಬೊಂಬೆ, ಬ್ಯಾಟ್, ಕಾರ್, ಜೀಪ್, ವಾಚ್, ಪ್ಲಾಸ್ಟಿಕ್ ಮೊಬೈಲ್, ಗನ್, ಹಾವು, ಬಲೂನ್, ಹಾರುವ ವಿಮಾನ, ತಗಡಿನ ರೈಲು ಇತ್ಯಾದಿಗಳು ಪ್ರವೇಶ ಪಡೆದವು. ಗಿರಗಿಟ್ಟಲೆ ಬದಲು ಡಮರುಗ, ಕುಲಾವಿ ಟೋಪಿ, ಹೀಗೆ ಹಲವು ವೈವಿಧ್ಯಮಯ ವಸ್ತುಗಳು ಹೊಸ ಲೋಹದೊಂದಿಗೆ ಹೊಸ ರೂಪ ಪಡೆದುಕೊಂಡಿದೆ. ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯೆಂಬ ಒಂದೇ ನಾಣ್ಯದ ಎರಡು ಮುಖಗಳಂತೆ ಇರಬೇಕಾಗಿದ್ದ ನಗರ ಮತ್ತು ಗ್ರಾಮಗಳು ಎರಡು ವಿರುದ್ದ ದೈವಗಳಾಗುತ್ತಾ ಅಕ್ಷರಶಃ ಅಜಗಜಾಂತರ ಆಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ವಾಲೆ, ಕೈ ಕಾಲಿಗೆ ಕಡಗ, ಕಾಸಿನಸರ, ಮಣಿ, ಕರಿಮಣಿ, ಕೈಬಳೆ, ಡಾಬು, ಕಾಡಿಗೆ, ಮರದ ಬಾಚಣಿಗೆ, ಹಲ್ಲುಕಡ್ಡಿ, ಅಡಿಕೆ ಚೀಲ, ಕನ್ನಡಿ, ಚೌಲಿಕೂದಲು, ಜೆಡೆ, ಕುಚ್ಚು, ಟೇಪುಗಳು ಇಂದು ಹೊಸ ರೂಪವನ್ನು ಪಡೆಯುತ್ತಿವೆ. ಚಿತ್ತಾರದ ಗಾಜಿನ ಬಳೆಗಳು, ರಿಬ್ಬನ್, ಲಿಫ್‌ಸ್ಟಿಕ್, ನೈಲ್ ಪಾಲಿಷ್, ಮೆಹಂದಿ, ರೋಸ್ ಪೌಡರ್, ಸೆಂಟ್ ವಿವಿಧ ಬಗೆಯ ಸ್ಯಾಂಪು, ಏರ್ ಆಯಿಲ್ ಮೊದಲಾದವುಗಳು ರಾರಾಜಿಸುತ್ತಿವೆ. "ಜಾಗತೀಕರಣದಿಂದ ಮಾರುಕಟ್ಟೆ ಪ್ರಾರಂಭವಾಗಿದೆ. ವಿದೇಶದಲ್ಲಿ ತಯಾರಾದ ಸರಕು ಸಾಮಾಗ್ರಿಗಳು ಕಡಿಮೆ ಬೆಲೆಗೆ ಭಾರತಕ್ಕೆ ಬರುತ್ತಿವೆ.

➢ ಹಬ್ಬ

ಹಬ್ಬ ಎಂದರೆ ಪರ್ವಕಾಲದ ಆಚರಣೆಗಳು ಇವು ಪ್ರತಿವರ್ಷ ವಿಶೇಷ ಸಂದರ್ಭದಲ್ಲಿ ಸಾಮಾಜಿಕ ಕ್ಷೇಮಕ್ಕಾಗಿ ಆಚರಿಸಲ್ಪಡುತ್ತದೆ. ಬಂಧು ಬಳಗವು ಸೇರುವ

ಸಂದರ್ಭ, ಊರು ಕೇರಿಗಳನ್ನು ಹತ್ತಿರ ತರುವ ಸಂದರ್ಭ, ಪುಣ್ಯದ ಸಂದರ್ಭ, ಸಂತೋಷದ ಸಂದರ್ಭ ಎಂದು ನಿರ್ದಿಷ್ಟ ಪಡಿಸಿದ ಜನಗಳಲ್ಲಿ ಆಚರಿಸುವ ಶುಭ ಕಾರ್ಯದ ಸಂಕೇತವಾಗಿ ಹಬ್ಬಗಳು ಮಾನ್ಯವಾಗಿವೆ. ಊರಿನ ಎಲ್ಲಾ ಜನಾಂಗದವರು ಹಬ್ಬವನ್ನು ಆಚರಿಸುತ್ತಾರೆ. ಇಲ್ಲಿ ವ್ರತ, ನಿಯಮಗಳಿಂದ ಹಬ್ಬವನ್ನು ಆಚರಿಸುತ್ತಾರೆ.

ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪವೇ ಹಬ್ಬಗಳು. ಡಾ॥ ದೇ. ಜವರೇಗೌಡರ ಪ್ರಕಾರ ನಿಯಂತ್ರಿಸುವ ಅಥವಾ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದವು. ಸಾಮಾನ್ಯವಾಗಿ ಪ್ರತಿ ವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬ ಎಂದಿದ್ದಾರೆ.

ಕಬ್ಬಾಳಮ್ಮ ಹಬ್ಬವನ್ನು ಹದಿನೈದು ದಿವಸ ಮುಂಚಿತವಾಗಿ ತೋಟಿ ಹೊಳೆಯಲ್ಲಿ ಸ್ನಾನ ಮಾಡಿ, ದೇವಸ್ಥಾನಕ್ಕೆ ಬರುತ್ತಾನೆ. ದೇವಾಲಯದ ಅರ್ಚಕರು ಆತನಿಗೆ ಮಡಿ ಬಟ್ಟೆ ಕೊಟ್ಟು, ಜನಿವಾರ ಹಾಕಿ, ಶ್ರೀಗಂಧದ ತಿಲಕವನ್ನು ಹಣೆಗೆ ಇಟ್ಟು ಗ್ರಾಮದಲ್ಲಿ ಜಾತ್ರೆಗೆ ಸಾರುವಂತೆ ತಿಳಿಸುತ್ತಾರೆ. ಅದೇ ರೀತಿ ದೇವಾಲಯಕ್ಕೆ ಸೇರಿದ ಕಬ್ಬಾಳು, ಕಚ್ಚುಗನಹಳ್ಳಿ, ತೋಟಹಳ್ಳಿ, ಅರೆಕಟ್ಟೆದೊಡ್ಡಿ, ಗೇರಹಳ್ಳಿ, ಮಲವಹಳ್ಳಿ, ಬೊಮ್ಮನಹಳ್ಳಿ, ಮಾರನಹಳ್ಳಿ, ಹತ್ತಿಹಳ್ಳಿ, ಹೊಸಹಳ್ಳಿ ಗ್ರಾಮಗಳಲ್ಲಿ ಮೂರು ದಿವಸಗಳ ಕಾಲ ಸಾರುತ್ತಾನೆ. ಆತ ಸಾರುವುದರಿಂದ ಹಿಡಿದು ಹದಿನೈದು ದಿವಸಗಳ ಕಾಲ ದೇವಸ್ಥಾನದಲ್ಲಿ ಉಳಿದು ಶ್ರದ್ಧೆ ಭಕ್ತಿಯಿಂದ ಪೂಜೆ ಸಲ್ಲಿಸಿ ನೈವೇದ್ಯವನ್ನು ಸ್ವೀಕರಿಸುತ್ತಾನೆ. ಸಿಡಿ ಹಬ್ಬದ ದಿವಸ ಸಿಡಿ ಕಂಬಕ್ಕೆ ಪೂಜೆ ಸಲ್ಲಿಸಿ ಜನಿವಾರವನ್ನು ಬಿಚ್ಚಿ ಸಿಡಿ ಕಂಬಕ್ಕೆ ಕಟ್ಟುತ್ತಾನೆ. ಅಲ್ಲಿಯವರೆಗೆ ಆತ ದೇವಸ್ಥಾನದಲ್ಲೇ ಇರುತ್ತಾನೆ.

ಶುಕ್ರವಾರ ಕಚ್ಚುನಹಳ್ಳಿ ದುರ್ಗೇಗೌಡರ ವಂಶಸ್ಥರು ತಮ್ಮ ಮನೆಯನ್ನು ಶುಚಿಗೊಳಿಸಿ ಮಡಿ ಬಟ್ಟೆಯನ್ನು ಧರಿಸಿ ಉಪವಾಸವಿದ್ದು, ಕಬ್ಬಾಳಿಗೆ ಬಂದು ರಂಗಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಚಪ್ಪರವನ್ನು ಹಾಕಿ ದೇವಸ್ಥಾನ

ಮುಂಭಾಗದಲ್ಲಿ ಹೊಲಕ್ಕೆ ಹೇರನ್ನು ಕಟ್ಟಿ ಹೊನ್ನೇರು ಮಾಡುವ ಹಾಗೆ ಮನುಷ್ಯರನ್ನು ಹೇರುಗಳಾಗಿ ಕಟ್ಟಿ ದೇವಸ್ಥಾನದ ಸುತ್ತಾ ಒಂದು ಸುತ್ತು ಹಾಕಿ ಪೂಜೆ ಸಲ್ಲಿಸುತ್ತಾರೆ. ಅದೇ ದೇವಸ್ಥಾನದ ಮುಂಭಾಗದಲ್ಲಿ ಭತ್ತವನ್ನು ಕುಟ್ಟಿ, ಅಕ್ಕಿಯನ್ನು ಕೇರಿ ಹಸಿ ತಂಬಿಟ್ಟನ್ನು ಮಾಡಿ ರಂಗಪ್ಪ ದೇವರಿಗೆ ಪೂಜೆ ಸಲ್ಲಿಸಿ ತಂಬಿಟ್ಟನ್ನು ಪ್ರಸಾದವಾಗಿ ಎಲ್ಲ ಜನರಿಗೆ ಹಂಚುತ್ತಾರೆ.

ಶನಿವಾರ ಸಂಜೆ ದೇವಸ್ಥಾನದ ಅರ್ಚಕರು ಕಬ್ಬಾಳಮ್ಮನಿಗೆ ಅರಿಶಿಣ-ಕುಂಕುಮವಿಟ್ಟು ಕಬ್ಬಾಳಮ್ಮನಿಗೆ ಎಣ್ಣೆ ಮಜ್ಜನ ಮಾಡುತ್ತಾರೆ. ಭಾನುವಾರದ ಬೆಳಿಗ್ಗೆ ದೇವಸ್ಥಾನದ ಅರ್ಚಕರು ಒಕ್ಕಲು ಜನಾಂಗದವರಾಗಿದ್ದು ಕಬ್ಬಾಳಮ್ಮನಿಗೆ ಹೋಮ, ಅಭಿಷೇಕ, ಪೂಜೆ, ಮಹಾಮಂಗಳಾರತಿ ಮಾಡುತ್ತಾರೆ. ಕಬ್ಬಾಳು ಗ್ರಾಮದ ಸುತ್ತಮುತ್ತ ನೂರಾರು ಗ್ರಾಮಗಳಿಂದ ರಾತ್ರಿ ಹನ್ನೆರಡು ಗಂಟೆಯವರೆಗೆ ಎಳವಾರಗಳು ಬಂದು ಸೇರುತ್ತವೆ. ತುಂಡು ಎತ್ತಿನಿಂದಿಡಿದು ದೊಡ್ಡ ದೊಡ್ಡ ಎತ್ತಿನವರೆಗೆ ಸಾಮೂಹಿಕವಾಗಿ ಕೊಂಡದ ಸೌದೆಯಲ್ಲಿ ಭಾಗವಹಿಸುವಿಕೆ ಗಂಡಸರಿಗೆ ಬಹಳ ಪ್ರತಿಷ್ಠೆಯಾಗಿದೆ. ಪ್ರತಿಯೊಬ್ಬ ಗಂಡಸರೂ ಉಮ್ಮಸ್ಸಿನಿಂದ ಎಷ್ಟು ಹೊತ್ತಿಗೆ ಕಬ್ಬಾಳಮ್ಮನ ಗುಡಿಯ ಸೇರುತ್ತೇವೆಂದು ಕಾತುರಿಸುತ್ತಿರುತ್ತಾರೆ. ಕಾರಣ ಇಂತಹ ಜಾತ್ರೆಗಳಲ್ಲಿ ಯುವಕರಿಗೆ ಎಲ್ಲಿಲ್ಲದ ಉತ್ಸಾಹ, ಸುತ್ತಲಿನ ಹೆಣ್ಣುಮಕ್ಕಳು ನನ್ನನ್ನು ನೋಡಿ ಆನಂದ ಪಡುವರು ಎಂಬ ತಮ್ಮ ಮನಸ್ಸಿನ ಭ್ರಾಂತಿ ಮತ್ತು ಪ್ರತಿಷ್ಠೆಯ ಸಲುವಾಗಿಯೂ ಮುಂದೆ ಮುಂದೆ ನುಗ್ಗಲು ಹಾತೊರೆಯುತ್ತಾರೆ.

ಕೊಂಡದ ಸೌದೆಯನ್ನು ನೋಡಲು ಸುತ್ತಮುತ್ತಲಿನ ಊರುಗಳಿಂದ ಲಕ್ಷಾಂತರ ಜನರು ಬಂದು ಸೇರುತ್ತಾರೆ. ಜೊತೆಗೆ ಗಂಡಸರೇ ಜಾಸ್ತಿ ಇದ್ದು ಭರಾಟೆಯಿಂದ ದನಗಳನ್ನು ಓಡಿಸುತ್ತಾ ದೇವಸ್ಥಾನವನ್ನು ತಲುಪುವ ದೃಷ್ಟಿ ಒಂದೇ ಆಗಿರುತ್ತದೆ. ಇದೇ ಅಲ್ಲದೇ ಗಾಡಿಯಲ್ಲಿ ಇತ್ತೀಚೆಗೆ ಅಗತ್ಯಕ್ಕಿಂತ ಹೆಚ್ಚಿನ ಸೌದೆಯನ್ನು ತುಂಬಿರುತ್ತಾರೆ. ಬಾಳೆ ಕಂದು, ಕಬ್ಬಿನ ಗರಿ, ಮಾವಿನ ಸೊಪ್ಪು, ಬಣ್ಣ ಬಣ್ಣದ ಕಾಗದಗಳು, ತೋಟಿಗಳಿಂದ ಅಲಂಕರಿಸಿ ಟ್ರೈರ್ ಗಾಡಿಯನ್ನು ಹಸಿರಿನಿಂದ ಕಂಗೊಳಿಸುವಂತೆ

ಮಾಡುತ್ತಾರೆ. ನಂತರ ಇಲ್ಲಿಗೆ ಹತ್ತಳ್ಳಿ, ಸೂರನಹಳ್ಳಿ, ಹೊಸಕಬ್ಬಾಳು, ಕಬ್ಬಾಳು, ಗೇರಹಳ್ಳಿ, ಕುರುಬರಹಳ್ಳಿ, ಸುತ್ತಮುತ್ತಲ ಊರುಗಳಿಂದ ಹೇರುಗಳು ಬರುತ್ತವೆ. ಅಷ್ಟೇ ಅಲ್ಲದೇ ಮೊದಲನೆ, ಎರಡನೇ, ಮೂರನೇ ಹೇರು ಬಿಡುವುದಕ್ಕೆ ಹರಾಜಾಗುವ ಕೂಗುತ್ತಾರೆ. ಆ ಹರಾಜಿನಲ್ಲಿ ಮೂರು ಸಾವಿರದಿಂದ ಐದು ಸಾವಿರದವರೆಗೂ ಹರಾಜುಗುವುದುಂಟು. ಇದರಿಂದ ಬಂದ ಹಣವನ್ನು ದೇವರ ಕಾರ್ಯಕ್ಕೆ ಉಪಯೋಗಿಸುತ್ತಾರೆ.

ಇತ್ತೀಚೆಗೆ ಆಧುನಿಕತೆಯ ವೇಗದಿಂದ ಲಾರಿಗಳ ಮುಖಾಂತರ, ಟೆಂಪೋಗಳ ಮುಖಾಂತರ ಮರಗಳನ್ನು ತುಂಬಿಕೊಂಡು ಬಂದು ಕೊಂಡದ ಬಯಲಿಗೆ ತಮ್ಮ ಹರಕೆಗಳನ್ನು ಅರ್ಪಿಸುತ್ತಾರೆ. ರಾತ್ರಿ ಹನ್ನೆರಡು ಗಂಟೆಯವರೆಗೆ ಎಳವಾರಗಳು ಬಂದು ಸೇರುತ್ತವೆ. ರಾತ್ರಿ ಹನ್ನೆರಡು ಗಂಟೆಗೆ ಕಬ್ಬಾಳು ಮತ್ತು ಹೊಸ ಕಬ್ಬಾಳು ಗ್ರಾಮದ ಜನರು ಕೊಂಡಕ್ಕೆ ಸೌದೆಯನ್ನು ಜೋಡಿಸುತ್ತಾರೆ. ಬಂದ ಸಾವಿರಾರು ಭಕ್ತರು ಕೈ ಜೋಡಿಸುತ್ತಾರೆ. ದೂರದಲ್ಲಿ ಬಿದ್ದ ದೊಡ್ಡ ದೊಡ್ಡ ಮರಗಳು ಐದಾರು ಜನರು ಸೇರಿ ತಂದು ಇಡುತ್ತಾರೆ. ರಾಶಿ ರಾಶಿ ಸೇರಿ ದೇವಸ್ಥಾನದ ಎತ್ತರಕ್ಕೆ ಕೊಂಡದ ಸೌದೆ ಸೇರುತ್ತಾ ಹೋಗುತ್ತದೆ. ಏಣಿಗಳನ್ನು ಹಾಕಿಕೊಂಡು ಸೌದೆಯನ್ನು ಜೋಡಿಸುವುದು ಉಂಟು. ಇಷ್ಟೊಂದು ಪ್ರಮಾಣದ ಸೌದೆಯನ್ನು ಬಹುತೇಕವಾಗಿ ಕಾಡಿನಿಂದಲೇ ತರುತ್ತಾರೆ. ಇದಕ್ಕೆ ದೊಡ್ಡ ಪ್ರಮಾಣದ ಸೌದೆಯ ರಾಶಿಯನ್ನು ನೋಡಿದ ಜನ ಬಾಯಿ ಮೇಲೆ ಬೆರಳಿಟ್ಟು ಅಬ್ಬಾ! ಎಷ್ಟೊಂದು ಸೌದೆ ಎಂದು ಆಶ್ಚರ್ಯ ಪಡುವುದುಂಟು.ಕೊಂಡ ಬೇಯಲು ಪ್ರಾರಂಭವಾದ ಮೇಲೆ ಸುತ್ತಮುತ್ತಲ ಬಂಭತ್ತು ಹಳ್ಳಿಗಳಿಂದ ತಂಬಿಟ್ಟಿನ ಆರತಿಯನ್ನು ತಂದು ದೇವರಿಗೆ ಪೂಜೆ ಸಲ್ಲಿಸುತ್ತಾರೆ.

ಸೋಮವಾರದ ಬೆಳಿಗ್ಗೆ ದೇವಸ್ಥಾನದ ಪಕ್ಕದಲ್ಲಿರುವ ಕಲ್ಯಾಣಿ ಬಳಿ ಕಬ್ಬಾಳಮ್ಮ ದೇವರನ್ನು ಕರೆದೊಯ್ದು ಕರಗಕ್ಕೆ ಅಡಿಕೆ ಹೊಂಬಾಳೆ ಹೂವಿನ ಅಲಂಕಾರವನ್ನು ಮಾಡಿ ಮಡಿ ಬಟ್ಟೆಯ ಮೇಲೆ ಮೆರವಣಿಗೆ ಮಾಡುತ್ತಾ ಕೊಂಡದ ಬಾಗಿಲಿಗೆ ಕರೆ

ತರುತ್ತಾರೆ.ರಾತ್ರಿ ಹಿಡಿ ಯಳನೀರಿನಿಂದ ಉನಿಸಿದ ಬಿಳಿ ಮಡಿ ಬಟ್ಟೆಯನ್ನು ಕೆಂಡದ ಮೇಲೆ ಹಾಸಿ ದೇವರನ್ನು ಅಗ್ನಿ ಪ್ರವೇಶ ಮಾಡಿಸುತ್ತಾರೆ.

➢ **ಹರಕೆಗಳು**

ಮನುಷ್ಯ ತನ್ನ ಕಷ್ಟ ಕಾರ್ಪಣ್ಯಗಳನ್ನು ಮತ್ತು ತನ್ನ ಇಷ್ಠಾರ್ತಗಳನ್ನು ಹೀಡೇರಿಸಿಕೊಳ್ಳಲು ದೇವರ ಮೊರೆ ಹೋಗುತ್ತಾನೆ. ದೇವರ ಮೊರೆಹೋದ ಮನುಷ್ಯ ಬಲಿಕೊಡುವ ಪದ್ದತಿಯಿಂದ ಹಿಡಿದು ಹಲವಾರು ಹರಕೆಗಳನ್ನು ಹೊತ್ತು ಕೊಳ್ಳುತ್ತಾನೆ. ಕಬ್ಬಾಳಮ್ಮನಿಗೆ ಕೋಳಿ, ಕುರಿ, ಆಡುಗಳನ್ನು ಬಲಿಯಾಗಿ ಕೊಡುತ್ತಾರೆ. ಆದರೆ ಕೊಡುವಂತ ಬಲಿಗಳು ಕಬ್ಬಾಳಮ್ಮನಿಗಲ್ಲ ಅವರ ಪಕ್ಕದಲ್ಲಿರುವ ಇಬ್ಬರು ಮಾರಿಯರಿಗೆ.ಅಷ್ಟೇ ಅಲ್ಲದೇ ಚಿನ್ನ, ಬೆಳ್ಳಿ, ತಾಮ್ರ ಹೀಗೆ ಮುಂತಾದ ವಡವೆಗಳನ್ನು ಹರಕೆಯಾಗಿ ಒತ್ತು ತಂದು ತಾಯಿಗೆ ಅರ್ಪಿಸುತ್ತಾರೆ.

- **ಬ್ಯಾಲದ ಹರಕೆ**

ಕಮ್ಮಸಂದ್ರ ಎಂಬ ಗ್ರಾಮದಲ್ಲಿ ಮುಖಂಡನ ಮನೆಯಲ್ಲಿ ಐದು ಜನ ಹುಡುಗರು ಕೆಲಸ ಮಾಡುತ್ತಿದ್ದರು.ಅವರ ಕೆಲಸ ಆಡು, ಕುರಿ, ದನ ಮೇಯಿಸುವುದು. ಇದು ಬಹಳ ದಿನದಿಂದ ಸರಿಯಾಗಿಯೇ ಯಾವ ತೊಂದರೆಯೂ ಇಲ್ಲದೇ ಸಾಗುತ್ತಿತ್ತು. ಆದರೆ ಇದ್ದಕ್ಕಿದ್ದ ಹಾಗೆ ಈ ದನ ಮೇಯಿಸುವ ಬಯಲಲ್ಲಿ ಒಂದು ಹುಲಿ ಪ್ರತ್ಯಕ್ಷವಾಗಿ ಅಲ್ಲಿದ್ದ ಕುರಿ, ಮೇಕೆ, ದನಗಳನ್ನು ಹಿಡಿದು ತಿಂದು ಬಿಡುತ್ತಿತ್ತು. ಗ್ರಾಮದ ಮುಖಂಡನು ಆ ಹುಡುಗರಿಗೆ ನೀವೇ ಯಾರಿಗೋ ಮಾರಿ ಬಿಟ್ಟಿದ್ದೀರಿ ಎಂದು ಹೊಡೆದು ಬಡಿದು ಹಿಂಸೆ ಮಾಡುತ್ತಿದ್ದಾ. ಇದರಿಂದ ನೊಂದ ಹುಡುಗರು ಒಮ್ಮೆ ದನ, ಕರು ಮೇಯಿಸಲು ಹೋರಟಾಗ ಕಬ್ಬಾಳು ದೇವಿಯನ್ನು ನೆನೆದು ಹರಕೆ ಕಟ್ಟಿ ಕೊಂಡರೇ ನಮ್ಮ ಕಷ್ಟ ಕಳೆಯುವುದು ಎಂದು ಮಾತನಾಡಿಕೊಂಡರು. ಬಡ ಹುಡುಗರು ಯಾವ ಹರಕೆ ತಾನೆ ಕಟ್ಟಿಕೊಂಡರು. ಬ್ಯಾಲದ ಮರದ ಕೆಳಗೆ ಕುಳಿತ ಹುಡುಗರು ತಲೆ ಎತ್ತಿ ನೋಡಿ ಈ ಬ್ಯಾಲದ ಹರಕೆಯನ್ನು ಕಟ್ಟಿಕೊಳ್ಳೋಣ ಎಂದು:

ಅವ್ವಾ ಕಬ್ಬಾಳು ದುರ್ಗವ್ವಾ ನಮ್ ದನ ಕುರಿ ಆಡು ಕರನಾ ಆ ಹುಲಿರಾಯನ್ ಬಾಯಿಂದ ಉಳಿಸಿದ್ರೆ ನಿಂಗೆ ೧೦೧ ಬ್ಯಾಲದ ಕಾಯ್ ಒಡೀತಿವಿ ತಾಯಿ ಎಂದು ಹರಕೆ ಕಟ್ಟಿಕೊಂಡರು. ಹರಕೆ ಮರುದಿನ ಅವರ ದನ ಮೇಯಿಸಲು ಬಂದಾಗ ಅಲ್ಲಿಗೆ ಹುಲಿಯೊಂದು ಬಂತು ಹುಡುಗರು ಭಯದಿಂದ ಹೋಡಿದರು. ಆದರೆ ಹುಲಿ ದನ ಕರುಗಳಿಗೆ ಏನು ಮಾಡದೆ ಹೊರಟು ಹೋಯಿತು. ಓಡಿ ಹೋಗಿದ್ದ ಹುಡುಗರು ಬಂದು ನೋಡಿದರು ದನ, ಕರ, ಕುರಿ ಎಲ್ಲವೂ ಮೇಯುತ್ತಿದ್ದೋ ಆಗ ಹುಡುಗರು ದೇವಿಯ ಗುಡಿಗೆ ಬಂದು ೧೦೧ ಬ್ಯಾಲದ ಕಾಯಿ ಹೊಡೆದು ಹರಕೆ ಒಪ್ಪಿಸಿದರು. ಇದನ್ನು ನೋಡಿ ಭಕ್ತರು ಮದುವೆ ಮುಂಜಿಯಂಥಹ ಶುಭ ಕಾರ್ಯಗಳು ನಿರ್ವಿಘ್ನವಾಗಿ ನಡೆಯಲಿ ಎಂದು ಕಷ್ಟ, ನಷ್ಟ, ರೋಗ, ಋಜಿನ ದೂರವಾಗಲೀ ಎಂದು ಇಂದಿಗೂ ದೇವಿಗೆ ಬ್ಯಾಲದ ಕಾಯಿ ಒಪ್ಪಿಸುತ್ತಾ ಬರುತ್ತಿದ್ದಾರೆ.

- **ಕೊಂಬಿನ ಟಗರಿನ ಹರಕೆ**

ಅಮ್ಮನಿಗೆ ವಡವೆಗಳನ್ನು ಧರಿಸಿ ಪೂಜೆ ಮಾಡಿ ಹಬ್ಬವನ್ನು ಆಚರಿಸುತ್ತಿದ್ದರು. ಅಂದು ರಾತ್ರಿ ಎಲ್ಲಾ ಮಲಗಿದ ಮೇಲೆ ಕಳ್ಳನೊಬ್ಬ ಬಂದು ತಾಯಿಯ ಮೇಲಿದ್ದ ವಡವೆ, ವಸ್ತ್ರ, ಬೆಲೆಬಾಳುವ ಎಲ್ಲಾ ವಸ್ತುಗಳನ್ನು ಬಾಚಿ, ಗಂಟು ಕಟ್ಟಿಕೊಂಡು ದೇವರ ಗುಡಿಯಿಂದ ಹೊರಬಂದು ಓಡುತ್ತಿರುವಾಗ ಗರಬಡಿದಂತೆ ನಿಂತು ಬಿಟ್ಟಿದ್ದ. ಭಕ್ತಾದಿಗಳು ಇದನ್ನು ಕಂಡು ಊರಿನ ಹಿರಿಯರು ಗ್ರಾಮದ ಮುಖ್ಯಸ್ಥರಿಗೆ ವಿಷಯ ಮುಟ್ಟಿಸಿದರು. ಅಲ್ಲಿಗೆ ಜನರೆಲ್ಲ ಬಂದು ದೌಡಾಯಿಸಿ ನಿಂತರು. ಅವನ ಕೈಯಲ್ಲಿದ್ದ ವಡವೆ, ವಸ್ತ್ರಗಳನ್ನು ತೆಗೆದುಕೊಂಡು ಅವನನ್ನು ಎಚ್ಚರಿಸಿದರು. ನಂತರ ಎಲ್ಲಾರು ಸೇರಿ ಕಳ್ಳನಿಗೆ ಶಿಕ್ಷೆ ಕೊಡಲು ಗ್ರಾಮದ ಅರಳಿಕಟ್ಟೆಯತ್ತಿರ ಸೇರಿ ಕಳ್ಳನಿಗೆ ಯಾವ ಶಿಕ್ಷೆಕೊಡಬೇಕೆಂದು ಪಂಚಾಯಿತಿ ಮಾಡಿ ಕಾಳವ್ವನ ದುರ್ಗದ ಕಮರಿಯಲ್ಲಿ ತಳ್ಳುವಂತೆ ಹೇಳಿದರು. ಇವನನ್ನು ಕಮರಿಗೆ ತಳ್ಳುವ ಸಿದ್ದತೆ ಪ್ರಾರಂಭವಾಯಿತು. ಆಗ ಆ ಕಳ್ಳ ಕಾಳವ್ವನಲ್ಲಿ ಹರಕೆ ಕಟ್ಟಿಕೊಂಡು ಬೇಡಿಕೊಂಡ "ತಾಯಿ ಕಾಳವ್ವ ಬಡತನ್ದ ಕಷ್ಟ ತಾಳಲಾರದೆ ಬುದ್ದೀ ಮಣ್ಣ್ ತಿಂದು ತಪ್ ಮಾಡ್‌ಬಿಟ್ಟೆ ನಿನ್ ಮಗಾ ತೆಪ್ ಮಾಡ್ಡಾ

ಅಂತ ತಿಳ್ದು ನನ್ನ ಕ್ಷಮಿಸಿ ಉಳಿಸವ್ವ ನಿಂಗೆ ಕಿರೀಟಾ ಮಾಡ್ಸಿ ಕೊಂಬಿನ ಟಗರು ತಂದು ಒಪ್ಪಿಸ್ತೀನಿ" ಅಂದ. ಎಲ್ಲರೂ ಬಂದು ಕಳ್ಳನನ್ನು ದಬ್ಬಿಕೊಂಡು ಹೋಗಿ ಊರ ಹಿರಿಯರ ಆದೇಶದಂತೆ ಉಘೇ ಕಬ್ಬಾಳಿ ಅಂತ ಕಳ್ಳನನ್ನು ಕಮರಿಗೆ ನೂಕಿ ಬಿಟ್ಟರು.ಕಮರಿಯ ಕೆಳಗಡೆ ಇದ್ದ ಹೆಬ್ಬಿದಿರು ಕ್ಷಣ ಮಾತ್ರದಲ್ಲಿ ದೊಡ್ಡದಾಗಿ ಅವವನ್ನು ಬಾಚಿ ತಬ್ಬುವಂತೆ ಹಿಡಿದುಕೊಂಡಿತು. ಕಳ್ಳನು ನಿರಾಯಸವಾಗಿ ಆ ಬಿದಿರಮೆಳೆಯಿಂದ ಇಳಿದು ಕಮರಿಯಿಂದ ಮೇಲೇರಿ ಬಂದು ತಾಯಿಗೆ ವಂದಿಸಿ ಹರಕೆ ತಂದು ಒಪ್ಪಿಸುವುದಾಗಿ ಹೊರಟನು.ನಂತರ ಕೆಲವು ತಿಂಗಳುಗಳ ನಂತರ ಆತನು ಕಟ್ಟಿಕೊಂಡ ಹರಕೆಯಂತೆ ಕೊಂಬಿನ ಟಗರು, ಕಿರೀಟವನ್ನು ತಂದು ತಾಯಿಗೆ ಅರ್ಪಿಸಿದ.

- **ಬಾಯಿಬೀಗ**

ಹಿಂದೆ ಒಮ್ಮೆ ಸಂಕಷ್ಟಕ್ಕೆ ಒಳಗಾಗಿ ಹಲವು ರೀತಿಯ ಕಷ್ಟಗಳನ್ನು ನುಂಗಿ ಹಿಂಸೆಪಟ್ಟು ಮನಸ್ಸುಗಳು ಹಲವು ರೀತಿಯಲ್ಲಿ ತಮ್ಮ ಹರಕೆಗಳನ್ನು ಹೊತ್ತು ಅರ್ಪಿಸುತ್ತಾರೆ.ಬೆಳ್ಳಿ ತಂತಿಯಿಂದ ಎರಡು ಕೆನ್ನೆಗಳ ಮಧ್ಯೆ ಚುಚ್ಚಿಸಿಕೊಂಡು ಮಾತನಾಡದಂತೆ ಮಾಡಲಾಗುತ್ತದೆ. ಬಾಯಿಬೀಗ ಚುಚ್ಚಿಸಿಕೊಳ್ಳುವವರು ಬೆಳಿಗ್ಗೆ-ಯಿಂದ ಉಪವಾಸವಿದ್ದು, ತಣ್ಣೀರಿನಲ್ಲಿ ಸ್ನಾನಮಾಡಿ ಬಂದಿರುತ್ತಾರೆ. ಗಂಡಸರು, ಹೆಂಗಸರು, ಮಕ್ಕಳೆನ್ನದೇ ಚುಚ್ಚಿಸಿಕೊಳ್ಳುತ್ತಾರೆ. ಚಿಕ್ಕ ಮಕ್ಕಳಾದರೆ ಬಾಳೆಹಣ್ಣಿನಲ್ಲಿ ಚುಚ್ಚಿಸಿಕೊಳ್ಳುತ್ತಾರೆ. ಗಂಡಸರಿಗಿಂತ, ಹೆಂಗಸರೇ ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ (ಚುಚ್ಚಿಸಿಕೊಳ್ಳುತ್ತಾರೆ). ಯಾವ ವಯಸ್ಸಿನ ಮಿತಿಯಿಲ್ಲದೇ ಮಾರುಬೇಕಾದರೂ ಈ ಹರಕೆಯಲ್ಲಿ ಪಾಲ್ಗೋಳಬಹುದು. ಗುಡಿಯ ಮುಂದೆ ನೆರೆದ ಈ ಸಮೂಹ ಪ್ರತಿ ಬಾಯಿ ಬೀಗಕ್ಕೆ ಎಲೆ-ಅಡಿಕೆ ಜೊತೆಯಲ್ಲಿ ಹತ್ತು ರೂಪಾಯಿ ಸೇರಿಸಿ ದಕ್ಷಿಣೆಯಾಗಿ ಕೊಡುತ್ತಾರೆ. ಬಂದ ಹಣವನ್ನು ಕೊನೆಯಲ್ಲಿ ಚುಚ್ಚಿದವರು ಹಂಚಿಕೊಳ್ಳುತ್ತಾರೆ.

- **ಮಡಲು ತುಂಬಿಸುವುದು**

ಹರಕೆಗಳು ಬೇಡಿಕೆಯನ್ನು ತನ್ನ ಇಷ್ಟಾರ್ಥಗಳನ್ನು ಪೂರೈಸುವ ಪ್ರಾರ್ಥನೆಯ ರೂಪದಲ್ಲಿರುತ್ತವೆ. ತಮಗೆ ಬಂದ ಕಷ್ಟ ನಿವಾರಣೆಗಳ ಪರಿಹಾರಕ್ಕಾಗಿ ಕಬ್ಬಾಳಮ್ಮನಲ್ಲಿ

ಪ್ರಾರ್ಥಿಸಿ ಅದು ನೆರವೇರಿದಾಗ ತಾವು ಅಂದುಕೊಂಡಂತೆ ಪ್ರತಿಯಾಗಿ ಅರ್ಪಿಸುವುದೇ ಹರಕೆಯಾಗಿದೆ. ಅಂದರೆ ಹರಕೆಗಳು ಮನುಷ್ಯನ ಅಭಿವೃದ್ಧಿ ಆರ್ಥಿಕ, ಸಾಮಾಜಿಕ, ಸಂತನಾಭಿವೃದ್ಧಿಗೆ, ಕೃಷಿ ಫಲಿಸುವಿಕೆ, ರೋಗಾಗಿಗಳಿಂದ ಗುಣವಾಗಲು, ಜಾನುವಾರಗಳ ಮೇಲೆ ರೋಗ ಹರಡದಂತೆ, ರಕ್ಷಣೆ, ಮನೆ, ಕಾಟ, ಭೂತ ಪಿಶಾಚಿಗಳಿಂದ ದೂರವಾಗಲು ಈ ಹರಕೆಗಳನ್ನು ಮನಸ್ಸಿನಲ್ಲಿಟುಕೊಂಡು ಹೊರಲಾಗುತ್ತದೆ. ಹರಕೆ ಎನ್ನುವುದು ವ್ಯಕ್ತಿಗತವಾಗಿ ಕಾಯ, ವಾಚ, ಮನಸ ಬಯಸ್ಸಿ ತಂದುಕೊಡುವುದಾಗಿದೆ. ಭಕ್ತಾದಿಗಳು ತಾವು ಹೊತ್ತ ಹರಕೆಯನ್ನು ತೀರಿಸಲು, ಒಂದು ಅಚ್ಚು ಬೆಲ್ಲ, ಒಂದು ಸೇರು ಅಕ್ಕಿ, ಎಲೆ–ಅಡಿಕೆ, ಕಡ್ಡಿ–ಕರ್ಪೂರ, ಅರಿಶಿಣ–ಕುಂಕುಮ ಒಂದು ಹಸಿರು ಅಥವಾ ಕೆಂಪು ಬಣ್ಣದ ಸೀರೆ ತಮಗೆ ಕೊಡಬೇಕೆಂದಷ್ಟು ಹಣ ಅಂದರೆ ಬಡವರು ಹನ್ನೊಂದು ರೂ ಕೊಟ್ಟರೆ ಹಣವಂತರು ಐನೂರ ಒಂದು, ಸಾವಿರದ ಒಂದು ಈ ರೀತಿಯಾಗಿ ಕೊಡುತ್ತಾರೆ. ಇಷ್ಟೆಲ್ಲವನ್ನು ಒಂದು ಹೊಸದಾದ ತಟ್ಟೆಯಲ್ಲಿ ಇಟ್ಟುಕೊಂಡು ತಾಯಿ ಮೆರವಣಿಗೆಯ ಸಂದರ್ಭದಲ್ಲಿ ತಾಯಿಗೆ ಅರ್ಪಿಸುತ್ತಾರೆ.

- **ಸಿಡಿ ಉತ್ಸವ/ಹರಕೆ**

ಮಂಗಳವಾರ ಬೆಳ್ಳಿಗೆ ಹನ್ನೊಂದು ಗಂಟೆಗೆ ಕೊಂಡದ ಬಾಗಿಲಿನಲ್ಲಿ ಸಿಡಿ ಕಂಬವನ್ನು ನೆಟ್ಟು ಹರಕೆ ಕಟ್ಟಿಕೊಂಡ ಭಕ್ತರನ್ನು ಸಿಡಿಯಲ್ಲಿ ಕೂರಿಸುತ್ತಾರೆ.ಮತ್ತೊಂದು ಕಡೆ ಭಕ್ತಾಧಿಗಳು ಮತ್ತು ಊರಿನವರು ಸೇರಿ ಸಿಡಿಯನ್ನು ತಿರುಗಿಸುತ್ತಾರೆ.

ಮಾರನೆಯ ದಿನ ಅಂದರೆ ಬುಧವಾರ ಮರ್ಸಿಡಿ(ಮರಿಸಿಡಿ) ಈ ಸಿಡಿಗೆ ಸಾವಿರಾರು ಜನರು ಸೇರಿರುತ್ತಾರೆ. ಇದನ್ನು ಬೆಳಿಗ್ಗೆ ಹತ್ತು ಗಂಟೆಗೆ ಸುರು ಮಾಡಿ ಸಂಜೆ ಐದು ಗಂಟೆಗೆ ಮುಗಿಸುತ್ತಾರೆ. ಹಲವಾರು ಜಿಲ್ಲೆ, ತಾಲ್ಲೂಕುಗಳಿಂದ ಬಂದಂತಹ ಜನರು ಈ ಸಿಡಿಯನ್ನು ಹಾಡಿ ದೇವಿಯ ಹರಕೆಯನ್ನು ತೀರಿಸಿ ಹೋಗುತ್ತಾರೆ.

**ಕೊಂಡಕ್ಕೆ ಅರಳು ಹಾಕುವುದು**

ಗ್ರಾಮದೇವತೆ ನಡೆಯುವ ಅನೇಕ ಊರುಗಳಲ್ಲಿ ಮತ್ತು ಕೊಂಡದ ಆಚರಣೆ ನಡೆಯುವ ಬಹುತೇಕ ಹಳ್ಳಿಗಳಲ್ಲಿ ಈ ಅರಳು ಹಾಕುವ ಆಚರಣೆ ಸಂಪ್ರದಾಯಿಕವಾಗಿ

ನಡೆಯುತ್ತದೆ. ತಮಗೆ ಬಂದ ಕಷ್ಟ ಪರಿಹಾರ, ತಮ್ಮ ಮೈಮೇಲೆ ಆದಂತಹ ಗಾಯ, ಸಿಡುಬು, ಚರ್ಮರೋಗ, ಹುಲ್ಲುಗುರು(ಎಂಜಲಿನ ನೀರು ಬಿದ್ದರೆ ಆಗುವ ಗುಳ್ಳೆ) ಬೆನ್ನಿನ ಮೇಲೆ ಆಗುವ ಕೆಲವು ಮಚ್ಚೆಗಳು, ಕೆಲವು ಚರ್ಮರೋಗಗಳು ವೈದ್ಯರಿಂದ ಗುಣಪಡಿಸಲು ಅಸಾಧ್ಯವಾಗದಂತಹ ರೋಗಗಳು ಮತ್ತು ಹುಳುಕಡ್ಡಿಯಂತಹ ತುರಿಕೆಯ ಚರ್ಮ ಸಂಬಂಧಿ ಇಂತಹ ಹಲವಾರು ಸಣ್ಣಪುಟ್ಟ ರೋಗಗಳಿಂದ ಮುಕ್ತಿ ಹೊಂದಲು ಹೆಂಗಸರು, ಮಕ್ಕಳು ಹೆಚ್ಚಾಗಿ ಮೊದಲೇ ಅರಳು ಹಾಕುತ್ತೇವೆಂದು ಹರಕೆ ಹೊತ್ತುಕೊಂಡಿರುತ್ತಾರೆ. ಜಾತ್ರೆಯ ಈ ದಿನದಲ್ಲಿ ನಂಬಿಕೊಂಡು ಕಟ್ಟಿಕೊಂಡ ನೇಮದಂತೆ ಅರಳನ್ನು ಮೂರು ಹಿಡಿ ಹಾಕುತ್ತಾರೆ. ಅರಳನ್ನು ಬಟ್ಟೆಯಲ್ಲಿ ಗಂಟು ಹಾಕಿಕೊಂಡು ಬಂದು ಮೂರು ಸಾರಿ ಕೊಂಡದ ಸೌದೆಯ ಮೇಲೆ ಲೊಲ್ ಎಂಬ ಶಬ್ದ ಬರುವಂತೆ ಎರಚುತ್ತಾರೆ.ನಂತರ ದೇವಿಗೆ ಕೈ ಮುಗಿದು ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ. ಅರಳು ಹಾಕುವ ಮತ್ತೊಂದು ವೈಜ್ಞಾನಿಕ ಸತ್ಯವೆಂದರೆ ಅರಳಿನಲ್ಲಿ ಎಣ್ಣೆಯ ಅಂಶ ಅಧಿಕವಾಗಿರುವುದರಿಂದ ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ, ಅರಳು ಹಾಕಿದಾಗ ಬೆಂಕಿ ಚೆನ್ನಾಗಿ ಉರಿಯಲು ಸಹಾಯವಾಗುತ್ತದೆ ಮತ್ತು ಈ ನೆಪದಲ್ಲಿ ಅರಳನ್ನೇ ಹಾಕಬೇಕೆಂಬ ಪ್ರತೀತಿ ಬಹು ಹಿಂದೆ ಆಗಿರಬೇಕು ಎನಿಸುತ್ತದೆ.

# ಅಧ್ಯಾಯ – ೪

# ಜನಪದೀಯ ಅಂಶಗಳು

## ೧. ಹಾಡುಗಳು

### ಹಾಡು – ೧

ಕಬ್ಬಾಳು ಬೆಟ್ಟ ಚಂದ ತಂದನೋತಾನೋ
ಇಲ್ಲಿ ಕಾಳಮ್ಮ ದೇವಿ ಚಂದ ತಂದನೋ ತಾನೋ
ಕಬ್ಬಾಳಿಯ ಗುಡಿ ಚಂದ ತಂದನೋ ತಾನೋ
ಇಲ್ಲಿ ದುರ್ಗಮ್ಮ ಪೂಜೆ ಚಂದ ತಂದನೋ ತಾನೋ
॥ ಕಬ್ಬಾಳು ಬೆಟ್ಟ ಚಂದ ॥

ಕಬ್ಬಾಳಿ ಕಲ್ಯಾಣಿ ಚಂದ ತಂದನೋ ತಾನೋ
ದೇವಿ ಕರಗದ ಮನೆ ಚಂದ ತಂದನೋ ತಾನೋ
ಬಿಸಿಲಮ್ಮ ಗುಡಿ ಚಂದ ತಂದನೋ ತಾನೋ
ಇಲ್ಲಿ ಕರಿಯಮ್ಮ ತೋಪು ಚಂದ ತಂದನೋ ತಾನೋ
ಕಬ್ಬಾಳಿ ಕಲ್ಯಾಣಿ ಚಂದ ತಂದನೋ ತಾನೋ
ದೇವಿ ಕರಗದ ಮನೆ ಚಂದ ತಂದನೋ ತಾನೋ
॥ ಕಬ್ಬಾಳು ಬೆಟ್ಟ ಚಂದ ॥

ಕಬ್ಬಾಳಮ್ಮ ಅಣ್ಣ ಭಸವ ತಂದನೋ ತಾನೋ
ಅವ ಕುಳಿತಿರುವ ನೋಟ ಚಂದ ತಂದನೋ ತಾನೋ
ಭೈರವ ಸ್ವಾಮಿ ಬಂದು ತಂದನೋ ತಾನೋ
ಇಲ್ಲಿ ನೆಲೆಸಿರುವ ಗುಡಿ ಚಂದ ತಂದನೋ ತಾನೋ
॥ ಕಬ್ಬಾಳು ಬೆಟ್ಟ ಚಂದ ।

ಹೆಬ್ಬೆಟ್ಟರಾಯ್ಯನ ಬೆಟ್ಟ ಚಂದ ತಂದನೋ ತಾನೋ
ಇಲ್ಲಿ ಕಂಬದರಯಪ್ಪ ಚಂದ ತಂದನೋ ತಾನೋ
ಕಬ್ಬಾಳಿ ಪೂಜೆ ಚಂದ ತಂದನೋ ತಾನೋ
ಇಲ್ಲಿ ಅಮವಾಸೆ ಪೂಜೆ ಚಂದ ತಂದನೋ ತಾನೋ
ಉಣ್ಣಿಮೆಯ ಪೂಜೆ ಚಂದ ತಂದನೋ ತಾನೋ
ಇಲ್ಲಿ ಕಡೆ ಹೊಡೆಯೇ ರೀತಿ ಚಂದ ತಂದನೋ ತಾನೋ

॥ ಕಬ್ಬಾಳು ಬೆಟ್ಟ ಚಂದ ॥

ಕಬ್ಬಾಳಮ್ಮ ಜಾತ್ರೆ ಚಂದ ತಂದನೋ ತಾನೋ
ಇಲ್ಲಿ ವನ್ನೇರು ಚಪ್ರ ಚಂದ ತಂದನೋ ತಾನೋ
ಯಳವಾರ ಭಂಡಿ ಚಂದ ತಂದನೋ ತಾನೋ
ದೇವಿ ಕೊಂಡ ಸೇವೆ ನೋಡಿ ಚಂದ ತಂದನೋ ತಾನೋ
ಕಬ್ಬಾಳಮ್ಮ ತೇರು ಚಂದ ತಂದನೋ ತಾನೋ
ಸಿಡಿರಣ್ಣನ ಸಿಡಿ ಚಂದ ತಂದನೋ ತಾನೋ

॥ ಕಬ್ಬಾಳು ಬೆಟ್ಟ ಚಂದ ॥

ಪಾನಕದ ಭಂಡಿ ಚಂದ ತಂದನೋ ತಾನೋ
ಸಂಜೆ ದೇವಿ ಪಲ್ಲಕ್ಕಿ ಚಂದ ತಂದನೋ ತಾನೋ
ದೇವಿ ಪ್ರಸಾದ ಚಂದ ತಂದನೋ ತಾನೋ
ಶುಕ್ರ–ಮಂಗಳವಾರ ಪೂಜೆ ಚಂದ ತಂದನೋ ತಾನೋ
ಭಕ್ತರ ಭಕ್ತಿ ಚಂದ ತಂದನೋ ತಾನೋ
ಕಬ್ಬಾಳಿದರುಸನದ ಭಾಗ್ಯ ಚಂದ ತಂದನೋ ತಾನೋ

॥ ಕಬ್ಬಾಳು ಬೆಟ್ಟ ಚಂದ ॥

## ಹಾಡು – ೨

ನನ್ನಣ್ಣ ಬರುತಾನೇ ಕಬ್ಬಾಳಮ್ಮ ಕರಿತಾನೇ
ಕಬ್ಬಾಳದ ಜಾತ್ರೆಗೆ ನನ್ನ ವೈತಾನೇ....
ಕಬ್ಬಾಳಿ ತೇರ ತೋರ್ತಾನೇ
ನನಗೇ ತಾಯ ಪಲ್ಲಕ್ಕಿ ತೋರ್ತಾನೇ
॥ ನನ್ನಣ್ಣ ಬರುತಾನೇ ॥

ನಾ ಹೊತ್ತ ಅರಕೆಯ ಸಲುವಾಗಿ ನನ್ನಣ್ಣ
ಸಿಡಿಯಣ್ಣ ನನಗೆ ಆಡಿಸುತ್ತಾನೇ
ನನಗೆ ಮಕ್ಕಳ ಭಾಗ್ಯವು ದೊರಕಲಿ ಅಂತ ಬೇಡ್ತಾನೆ
ಕೊಂಡದಾಗಿ ದೇವಿ ಆಯುವ ಸಿರಿಯ ತೋರುತ್ತಾನೆ.
॥ ನನ್ನಣ್ಣ ಬರುತಾನೇ ॥

ವನ್ನೇರು ಚಪ್ಪರದಾಗೆ ನಡೆವಂತ ಸಡಗರವ
ನನ್ನಣ್ಣ ನನಗೆ ತೋರಿಸುತ್ತಾನೆ.
ನನ್ನ ಕುಂಕುಮ ಭಾಗ್ಯವು
ಸ್ಥಿರವಾಗಲೆಂದು ಬೇಡ್ತಾನೆ
ಕಬ್ಬಾಳದ ಜಾತ್ರೆ ವೈಭವ ನನಗೆ ತೋರುತ್ತಾನೆ.
॥ ನನ್ನಣ್ಣ ಬರುತಾನೇ ॥

## ೨. ಜನಪದೀಯ ನಂಬಿಕೆಗಳು

ಜಾನಪದ ಕ್ಷೇತ್ರ ವಿಸ್ತಾರವಾದದು ಅದರ ಬೇರುಗಳನ್ನು ಹಲವು ಶಾಸ್ತ್ರಗಳಲ್ಲಿ ಕಾಣಬಹುದು. ಮಾನವ ಅಪಾರ ಜ್ಞಾನಪದದ ಪೂರ್ಣ ಅರಿವಿಲ್ಲದೇ ಮಾನವ ಸಂಸ್ಕೃತಿಯ ಪೂರ್ಣ ಅಧ್ಯಯನ ಅಸಾಧ್ಯ.ಜಾನಪದ ಕ್ಷೇತ್ರದಲ್ಲಿ ಪ್ರವೇಶಿಸುತ್ತಲೇ ಜನಪದ ನಂಬಿಕೆಗಳು ನಮ್ಮ ಗಮನ ಸೆಳೆಯುತ್ತವೆ. ಜನಪದ ಸಂಸ್ಕೃತಿಯ ಅಂತರಾಳದ ಜೀವಂತ ಮಿಡಿತವನ್ನು ಈ ನಂಬಿಕೆಗಳನ್ನು ಗುರುತಿಸಬಹುದು.

ಜಾನಪದ ಒಂದು ಪ್ರಕಾರ. ನಂಬಿಕೆ ಎಂದರೆ ಒಂದು ಹೇಳಿಕೆ ಅಥವಾ ವಸ್ತು ಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ. ಜನಪದರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಈ ನಂಬಿಕೆಗಳು ಜನತೆಯ ಆಂತರಿಕ ಮನೋಭಾವ ಹಾಗೂ ಮೂಲ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಪ್ರಮುಖ ಸಾಧನಗಳಾಗಿವೆ. ಎಷ್ಟೋ ವೇಳೆ ಇವು ಜನಪದರ ಬಾಳನ್ನೇ ನಿರ್ದೇಶಿಸುತ್ತವೆ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರಪಂಚದಾದ್ಯಂತ ಕಂಡು ಬರುವಂತೆ ನಂಬಿಕೆಗಳು ಇಲ್ಲಿ ಕಂಡು ಬರುತ್ತವೆ. ಹೀಗೆ ಕಂಡುಬರುವ ನಂಬಿಕೆಗಳಲ್ಲಿ ಬಹಳಷ್ಟು ಮೂಢನಂಬಿಕೆಗಳೇ ಆದರೂ ಕೆಲವು ನಂಬಿಕೆಗಳಲ್ಲಿ ವೈಜ್ಞಾನಿಕ ಸತ್ಯ, ಸಾಮಾನ್ಯ ಜ್ಞಾನ, ಪೌರಾಣಿಕ ಐತಿಹ್ಯಾಂಶ ಹಾಗೂ ಕಥಾಂಶಗಳು ಅಡಕವಾಗಿವೆ.

ಜನಪದರ ನಂಬಿಕೆಗಳ ಉಗಮ ಮುಖ್ಯವಾಗಿ ಮೂರು ರೀತಿಯಲ್ಲಿ ಆಯಿತೆನ್ನಬಹುದು. ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ್ ಧಾರ್ಮಿಕ ನಂಬಿಕೆಗಳು ಭಯದಿಂದ ಹುಟ್ಟಿದವು. ಮನಸ್ಸಿನ ಅಸ್ಥಿರತೆ ಮತ್ತು ಅತಿಮಾನುಷ ಭಯ.ಈ ವರ್ಗದ ನಂಬಿಕೆಗಳ ಹುಟ್ಟಿಗೆ ಮುಖ್ಯ ಕಾರಣ ಭೂತರಾಧನೆ. ಪಿತೃಪೂಜೆ, ದೇವತೆಗಳ ಆರಾಧನೆ, ಕುಲದೇವತಾಪದ್ಧತಿ ಇತ್ಯಾದಿಗಳಿಗೆ ಸಂಬಂಧಿಸಿದ ನಂಬಿಕೆಗಳು ಈ ಗುಂಪಿನಲ್ಲಿ ಸೇರುತ್ತವೆ.

ವೈಯಕ್ತಿಕ ನಂಬಿಕೆಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ನಂಬಿಕೆಗಳ ಸಂಸ್ಕಾರದಿಂದ ಒಬ್ಬ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಸಾರ್ವತ್ರಿಕವಾದರೂ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು.ಒಬ್ಬನಿಗೆ ಮಂಗಳವಾರ ಅಶುಭವಾದರೆ, ಮತ್ತೊಬ್ಬನಿಗೆ ಅದು ಶುಭವಾಗಬಹುದು.ಒಬ್ಬನಿಗೆ ಒಂದಕ್ಕಿ ಅದೃಷ್ಟ ಸಂಖ್ಯೆಯಾದರೆ ಮತ್ತೊಬ್ಬನಿಗೆ ದುರದೃಷ್ಟದ ಸಂಕೇತವಾಗಬಹುದು.ಈ ಬಗೆಯ ನಂಬಿಕೆಗಳಲ್ಲಿ ಬಾಳಿನ ಅನುಭವ ಹಾಗೂ ಮಾನಸಿಕ ಅನುಭವಗಳ ಮಿಳಿತವನ್ನು ಕಾಣಬಹುದು. ಅವಳು ಯಾವ ಗಳಿಗೆಯಲ್ಲಿ ನನ್ನ ಮನೆಗೆ ಹೆಜ್ಜೆ ಇಟ್ಟು ಬಂದಲೋ ನನ್ನ ಮನೆ ಬಂಗಾರವಾಯಿತು ಎಂದು ಸೊಸೆ ಮನೆಗೆ ಬಂದ ಅನಂತರ ಮನೆಯ ಉತ್ತಮ ಪರಿಸ್ಥಿತಿಯನ್ನು ಕಂಡು ಅವಳ ಅತ್ತೆ ಅಥವಾ ಮಾವ ಹೇಳಿಕೊಳ್ಳಬಹುದು. ಹಾಗೆಯೇ ಸೊಸೆ ಕಾಲಿಟ್ಟಂದಿನದಿಂದ ಅವಳು ಬಂದ ಕಾಲುಗುಣ ಚೆನ್ನಾಗಿಲ್ಲವೆಂದು ನನ್ನ ಮನೆ ಗುಡಿಸಿ ಗುಂಡಾಂತರವಾಯಿತೆಂದೂ ಹೇಳಬಹುದು.

ನಂಬಿಕೆಗಳಲ್ಲಿ ಸಾರ್ವತ್ರಿಕತೆ ಮತ್ತು ಪ್ರಾದೇಶಿಕತೆ ಕಂಡು ಬರುತ್ತದೆ.ಇವುಗಳ ಮೂಲ ಆಶಯ ಒಂದೇ ಕೆಲವೊಮ್ಮೆ ರೂಪ ಮಾತ್ರ ಬೇರೆಯಾಗಿರುತ್ತದೆ. ಕೆರೆಗೆ ಬಲಿ ಕೊಟ್ಟರೆ ಏರಿ ಭದ್ರವಾಗಿ ನಿಲ್ಲುತ್ತದೆ. ನರಬಲಿ ಕೊಟ್ಟರೆ ಐಶ್ವರ್ಯ ಮತ್ತು ದೇವರ ದಯೆ ಗಳಿಸಬಹುದು. ಮನೆ ಭದ್ರವಾಗಿ ನಿಲ್ಲಬೇಕಾದರೆ ತಳಹದಿಗೆ ಮಕ್ಕಳನ್ನು ಬಲಿಕೊಡಬೇಕು ಮುಂತಾದ ನಂಬಿಕೆಗಳು ಪ್ರಪಂಚದ ಎಲ್ಲೆಡೆ ಇರುವುದನ್ನು ಕಾಣಬಹುದು.

ವೈಜ್ಞಾನಿಕವಲ್ಲದ ಕೆಲವು ನಂಬಿಕೆಗಳಲ್ಲಿ, ನಂಬಿಕೆ ಇಡುವುದರಿಂದ ಮಾನಸಿಕ ತೃಪ್ತಿಯಾದರೂ ದೊರೆಯಬಹುದು. ಉದಾಹರಣೆ: ಪಿತೃಪಕ್ಷವನ್ನು ಆಚರಿಸುವುದರಿಂದ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುತ್ತದೆ. ಅವರು ಪದೇ ಪದೇ ಬಂದು ಪೀಡಿಸುವುದಿಲ್ಲ ಎಂದು ನಂಬುವುದರಲ್ಲಿ ವೈಜ್ಞಾನಿಕ ಸತ್ಯವಿಲ್ಲದಿದ್ದರೂ ಅಂಥ ಆಚರಣೆಗಳಿಂದ ಆಚರಿಸುವವನಿಗೆ ಮಾನಸಿಕ ಸಂತೃಪ್ತಿ ದೊರೆಯಬಹುದು.

ವೈಜ್ಞಾನಿಕ ಸತ್ಯವನ್ನೊಳಗೊಂಡ ನಂಬಿಕೆಗಳು ಬಹಳಷ್ಟಿವೆ. ಊಟಕ್ಕೆ ಕುಳಿತಾಗ ತಟ್ಟೆ ಅಥವಾ ಎಲೆಯ ಸುತ್ತಲೂ ನೀರನ್ನು ಚುಮುಕಿಸಬೇಕು ಎಂಬ ನಂಬಿಕೆಯಿಂದ ಸಣ್ಣ ಕ್ರಿಮಿಕೀಟಗಳು ತಟ್ಟೆಯ ಒಳಗೆ ಹರಿದು ಬರುವುದನ್ನು ತಡೆಗಟ್ಟಬಹುದು.

ಕೆಲವೊಂದು ನಂಬಿಕೆಗಳಲ್ಲಿ ವೈದ್ಯಕೀಯ ಸಂಗತಿಗಳು ಅಡಕವಾಗಿವೆ. ಅಜೀರ್ಣದಿಂದ ಹೊಟ್ಟೆ ಉಬ್ಬರಿಸಿಕೊಂಡರೆ, ನೋವು ಕಾಣಿಸಿಕೊಂಡರೆ ಬೆಚ್ಚನೆಯ ಬೂದಿ ತಿಕ್ಕಿದರೆ ಸರಿಯಾಗುತ್ತದೆ ಎಂಬಲ್ಲಿ ಆ ರೀತಿ ಮಾಡುವುದರಿಂದ ಪಚನ ಕ್ರಿಯೆ ಚೇತನಗೊಂಡು ನೋವು ಕಡಿಮೆಯಾಗಬಹುದು.

ಪ್ರಕೃತಿಯೊಡನೆ ಹೊಂದಿರುವ ಸತ್ಯ ಸಂಪರ್ಕದಿಂದಾಗಿ ರೈತ ಅದರಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಕೆಲವು ನಂಬಿಕೆಗಳನ್ನು ಸೃಷ್ಟಿಸಿದ ಇವು ಕೆಲವೊಮ್ಮೆ ಸತ್ಯವಾಗುವುದುಂಟು ಕೋಟೆ ಮುಗಿಲೆದ್ದರೆ ಮಳೆಯಾಗುತ್ತದೆ, ಸೂರ್ಯ ಗುಡುಕಟ್ಟಿದರೆ, ಸೂರೆಲ್ಲ ಮಳೆಯಾಗುತ್ತದೆ, ಕೊಡತಿಹುಳು ಕಾಣಿಸಿಕೊಂಡರೆ ಮಳೆಯಾಗುತ್ತದೆ ಇತ್ಯಾದಿ ನಂಬಿಕೆಗಳಿಗೂ ವಾತಾವರಣದಲ್ಲಾಗುವ ಬದಲಾವಣೆ-ಗಳಿಗೂ ಏನೋ ಸಂಬಂಧವಿರಬೇಕು.

ನಂಬಿಕೆಗಳ ಮತ್ತೊಂದು ರೀತಿಯ ವಿಭಜನ ಕ್ರಮವೆಂದರೆ ಅವುಗಳನ್ನು ಮಾನುಷ, ಅತಿ ಮಾನುಷ, ಪ್ರಾಣಿ, ಪ್ರಕೃತಿ, ಕೌಟುಂಬಿಕ ಹಾಗೂ ಸಂಕೀರ್ಣ ಸಂಬಂಧದವು ಎಂದು ವಿಭಜಿಸಬಹುದು. ದೆವ್ವ, ಪೀಡೆ, ದೇವರುಗಳ ಬಗ್ಗೆ ಇರುವ ನಂಬಿಕೆಗಳು ಅತಿ ಮಾನುಷ ಗುಂಪಿನಲ್ಲಿ ಸೇರುತ್ತವೆ. ಪೂರ್ಣಿಮೆ ಅಮಾವಾಸ್ಯೆಯಲ್ಲಿ ದೆವ್ವಗಳ ಸಂಚಾರ ಹೆಚ್ಚು, ಜುಟ್ಟಿಲ್ಲದ ತೆಂಗಿನ ಕಾಯನ್ನು ದೇವರಿಗೆ ಒಡೆಯಬಾರದು, ಹುಣಸೆಮರದಲ್ಲಿ ದೆವ್ವಗಳಿರುತ್ತವೆ ಇತ್ಯಾದಿ ನಂಬಿಕೆಗಳು ಸಾಮಾನ್ಯವಾಗಿ ಅತಿಮಾನುಷ ಭಯದಿಂದ ಹುಟ್ಟಿದ ಮನಸ್ಸಿನ ಅಸ್ಥಿರ ಭಾವನೆಗಳು ಸಾಮಾನ್ಯವಾಗಿ ಅತಿಮಾನುಷ ಭಯದಿಂದ ಹುಟ್ಟಿದ ಮನಸ್ಸಿನ ಅಸ್ಥಿರ ಭಾವನೆಗಳು ಮನಸ್ಸಿನ ಅಂಗೀಕಾರ ಮುದ್ರೆ ಧರಿಸಿ ಸಮಾಜದಲ್ಲಿ ಬಳಕೆಯಲ್ಲಿವೆ.

ಹಬ್ಬ-ಹರಿದಿನಗಳು, ಹುಟ್ಟು-ಸಾವು, ಕಾಲ, ಕನಸು, ನಿದ್ರೆ, ಒಡಹುಟ್ಟಿದವರು, ವಿವಾಹ, ಪುರುಷ ಹಾಗೂ ಸ್ತ್ರೀ ದೇಹಗಳಿಗೆ ಸಂಬಂಧಿಸಿದ ವಿಷಯಗಳನ್ನೊಳಗೊಂಡ ನಂಬಿಕೆಗಳನ್ನು ಮಾನುಷ ಗುಂಪಿನಲ್ಲಿ ಸೇರಿಸಬಹುದು. ವರ್ಷಕ್ಕೊಮ್ಮೆ ಬರುವ ಹಬ್ಬದಲ್ಲಿ ಮಕ್ಕಳನ್ನು ಹೊಡೆಯಬಾರದು, ತಲೆ ಕೆಳಗೆ ಮಲಗಿದರೆ ಕನಸುಗಳು ಜಾಸ್ತಿ, ಸಂಜೆಯಾದ ಮೇಲೆ ಅಂಗಡಿಯಿಂದ ಅಥವಾ ಮನೆಯಿಂದ ಉಪ್ಪು, ಮಜ್ಜಿಗೆ, ಅರಿಶಿಣ ಕೊಡಬಾರದು. ಹೊತ್ತು ಮುಳುಗಿದ ಮೇಲೆ ಅಕ್ಕಿ ತಿನ್ನಬಾರದು ಇತ್ಯಾದಿಗಳು ಈ ವಿಭಾಗಕ್ಕೆ ಸೇರಿವೆ.

ಮದುವೆಗೆ ಸಂಬಂಧಿಸಿದ ನೂರಾರು ನಂಬಿಕೆಗಳಿವೆ. ಮದುವೆ ದಿನ ಮಳೆ ಬಂದರೆ ಗಂಡು-ಹೆಣ್ಣು ಅಕ್ಕಿ ತಿಂದಿದ್ದಾರೆಂದು, ಲಗ್ನ ಕಟ್ಟಿಸಿದ ದಿನದಿಂದ ಮದುವೆ ಮುಗಿಯುವವರೆಗೆ ಮನೆಯಲ್ಲಿ ಮಾಂಸ ಮಾಡಬಾರದು, ಮದುವೆಯಾದ ವರ್ಷ ಮನೆ ಕಟ್ಟಬಾರದು, ಮದುವೆಯಾದ ವರ್ಷವೇ ಮೂರು ತಲೆ ಕಾಣಬಾರದು ಕಂಡರೆ ಅವ್ವನಿಗೋ, ಅಪ್ಪನಿಗೋ ಕೇಡು ಇತ್ಯಾದಿ.

ಪ್ರಾಣಿ ಸಂಬಂಧಿಸಿದ ನಂಬಿಕೆಗಳಲ್ಲಿ ಪ್ರಾಣಿಗಳ ಚತುರತೆ, ಅವುಗಳಿಂದ ಬರುವ ಚತುರ ಅವುಗಳ ಬಗ್ಗೆ ಮಾನವನಿಗಿಂತ ಅನುಕಂಪ ಮೊದಲಾದವುಗಳನ್ನು ಕಾಣಬಹುದು. ಇರುವೆ ಗೂಡಿಗೆ ಅಕ್ಕಿ ಬೆಲ್ಲವಾಕಿದರೆ ಪುಣ್ಯ ಬರುತ್ತದೆ, ಕೋತಿ ಸಾಯಿಸಿದರೆ ಕಾಶಿಗೆ ಹೋದರೂ ಪಾಪ ಕಳೆಯುವುದಿಲ್ಲ ಇನ್ನೂ ಮುಂತಾದ ನಂಬಿಕೆಗಳು ಪ್ರಾಣಿಗಳ ಮೇಲೆ ಮಮತೆ, ಅನುಕಂಪವನ್ನು ತೋರುತ್ತವೆ.

### ೩. **ಕಥೆಗಳು**

ಪುರಾಣವೆಂದರೆ ಪುರಾತನವಾದ, ಧರ್ಮ ಮತ್ತು ದೈವಕ್ಕೆ ಸಂಬಂಧಪಟ್ಟ ಪ್ರತಿಯೊಂದು ದೇವರ ಹಿಂದೆ ಪೌರಾಣಿಕ ಹಿನ್ನಲೆಯನ್ನು ಗುರುತು ಮಾಡುವ ಕೆಲಸ ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಈ ಪೂರ್ವ ಪುರಾಣದಲ್ಲಿ ಹಲವಾರು ರೀತಿಯ ಉಪಕತೆಗಳು, ಬೇರೆ ಬೇರೆ ರೀತಿಯ ಚರಿತ್ರೆಯ ಘಟನೆಯನ್ನು ಹೇಳುತ್ತಾ

ಕಥೆಗಳ ಬೆಳವಣಿಗೆಗೆ ಪೂರಕವಾಗಿರುತ್ತದೆ. ಆರ್ಯರ ನಂತರ ಹೆಚ್ಚು ಪ್ರಸಿದ್ಧಿಗೆ ಬಂದ ನೀತಿ ನಿಯಮಗಳನ್ನು ಪಾಲಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಪುರಾಣಗಳು ಮಾನವ ಕುಲದ ಇತಿಹಾಸವನ್ನು ತಂದು ಮುಂದಿನ ಹೊಸ ತಲೆಮಾರಿಗೆ ವರ್ಗಾಯಿಸುವವನ ಬೌದ್ಧಿಕಶಕ್ತಿ ಬೆಳವಣಿಗೆ ಹಾಗೂ ತಾನು ಹುಟ್ಟಿದ ಪರಿಸರ ಧಾರ್ಮಿಕ ಹಿತಾಶಕ್ತಿಗನುಗುಣವಾಗಿ ಬೇರೆ ಬೇರೆ ಮಾರ್ಪಾಟುಗಳಾಗಿ ಇಲ್ಲವೇ ಇನ್ನೊಂದು ಹೊಸ ಹುಟ್ಟನ್ನು ಪಡೆಯತೊಡಗುತ್ತದೆ. 

ಜನಪದರು ತಾವು ನಂಬಿದ ದೇವರ ಬಗೆಗೆ, ಆ ದೇವರ ಬಳಗದ ಬಗೆಗೆ ಒಂದೊಂದು ಕಥೆ ಕಟ್ಟಿ ಹೇಳುತ್ತಾ ಬಂದಿದ್ದಾರೆ. ಪ್ರತಿಭಾವಂತವರಾದವರು ಆ ಕಥೆಗಳನ್ನು ಸುಸಂಬದ್ಧವಾಗಿ ಹೆಣೆದು ಒಂದು ಪುರಾಣವನ್ನೇ ನಿರ್ಮಿಸುತ್ತಾರೆ. ಅದಕ್ಕೆ ಜನಪದ ಪುರಾಣವೆಂದು ಹೆಸರು. ಇಂತಹ ಸ್ಥಳೀಯ ಪುರಾಣಗಳು ಕೆಲಕಾಲದ ನಂತರ ಶಿಷ್ಟ ಪುರಾಣಗಳಾಗಿ ಮಾರ್ಪಟ್ಟಿರುವುದನ್ನು ಕಾಣುತ್ತೇವೆ. ಹಾಗಾಗಿ ಪುರಾಣಗಳಿಗೆ ಮೂಲವಸ್ತುವನ್ನು ಒದಗಿಸಿಕೊಟ್ಟ ಶ್ರೇಯಸ್ಸು ಜನಪದ ಪುರಾಣಗಳಿಗೆ ಸಲ್ಲುತ್ತದೆ. ಜನಪದ ಪುರಾಣಗಳು ತೋಂಡಿಯಾಗಿರುವುದರಿಂದ ಅವು ಹೇಳುವವ ಪ್ರತಿಭೆಯನ್ನು ಅನುಸರಿಸಿ ಸಾಕಷ್ಟು ಬದಲಾವಣೆ ಹೊಂದುತ್ತಿರುವುದು ಸಹಜ. ಒಂದು ಜನಾಂಗದ ಪ್ರದೇಶದ ಆರಾಧನೆ, ಭಕ್ತಿ ಪುರಾಣವನ್ನು ಸಾರ್ವತ್ರಿಕರಿಸುವುದರೊಂದಿಗೆ ಶಿಷ್ಟರ ಶಿಷ್ಟಪುರಾಣವನ್ನು ಬೆಸೆಯಲಾಯಿತು. ತಮ್ಮ ದೇವತೆಯ ಪ್ರಾಮುಖ್ಯತೆಯನ್ನು ಹೆಚ್ಚಿಸಲು ಶಿಷ್ಟರ ಪಾರ್ವತಿ, ಲಕ್ಷ್ಮೀ ಪರಂಪರೆಯವರೆಂದು ಹೇಳಿ ಒಪ್ಪಿಸುವಂತಾಯಿತು.

ಯಾವುದೇ ಒಂದು ಊರಿನ ಗ್ರಾಮದೇವತೆಯ ಉಗಮದ ರೀತಿಯನ್ನು ತಿಳಿಯಲು ಜನಪದರು ಹೇಳುವ ಕತೆ ಅಥವಾ ಪುರಾಣ ಆಧಾರವಾಗಿರುತ್ತವೆ. ಏಕೆಂದರೆ ಒಂದು ಬಂಡೆಕಲ್ಲಿನ ಇಲ್ಲವೇ ಮರದ ರೂಪದಲ್ಲಿ ಆರಂಭಗೊಂಡು ನಂತರ ಇದಕ್ಕೆ ಪುರಾಣದ ಸ್ಪರ್ಶ ಕೊಟ್ಟು ದೇವತೆಯ ರೂಪ, ಗುಣ, ಸ್ವಭಾವ ಇತರ ಅಮೂರ್ತವಾದ ಕಲ್ಪನೆಯನ್ನು ವರ್ಣಣೆಯಿಂದ ವರ್ಣಿಸಿ, ಭಯ ಮತ್ತು ಭಕ್ತಿಗಳನ್ನು

ಏಕಕಾಲದಲ್ಲಿ ಹುಟ್ಟಿಸುವ ಘಟನಾವಳಿಗಳನ್ನು ಸೃಷ್ಟಿ ಮಾಡಿಸುತ್ತವೆ. ವಿವಿಧ ಸಂಸ್ಕೃತಿಗಳ, ಜನತೆಯ ಸಂಪರ್ಕ ಪಡೆದಂತೆ ಬೇರೆ ಬೇರೆ ರೂಪಗಳನ್ನು ಪಡೆಯುತ್ತಾ ಮುಂದೆ ಸಾಗುತ್ತದೆ. ಹೀಗೆ ಉಗಮಗೊಂಡ ದೇವತೆಗಳಿಗೆ ಜನಪದ ಪುರಾಣವನ್ನು ತಪ್ಪಿಸಿ ಶಿಷ್ಟ ರೀತಿಯ ಪೌರಾಣಿಕ ಪುರಾಣಗಳಾಗಿ ಪರಿವರ್ತಿತವಾಗಿ ಮೂಲ ಉದ್ದೇಶವನ್ನು ಯಶಸ್ವಿಗೊಳಿಸಲು ಸಹಕಾರಿಯಾಗುತ್ತವೆ. ಶಿಷ್ಟ ಪುರಾಣಗಳು ಯಾರನ್ನು ಮತ್ತು ಏನನ್ನು ನಿರಾಕರಿಸಿದೆಯೋ ಅವುಗಳೇ ಜನಪದ ಪುರಾಣಗಳ ಪುನರ್ ಸೃಷ್ಠಿಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಈ ವಿವರಣೆ ಶಿಷ್ಟ ಮತ್ತು ಜನಪದ ಸಂಸ್ಕೃತಿಯಲ್ಲಿ ವಿಭಿನ್ನ ನೆಲೆಗಳನ್ನು ಸ್ಪಷ್ಟಪಡಿಸುತ್ತಾ ಹೋಗುತ್ತದೆ.

ಕಬ್ಬಾಳಮ್ಮ ಮತ್ತು ಬಿಸಿಲಮ್ಮ ಸ್ವಂತ ಅಕ್ಕ ತಂಗಿಯರು ಕಬ್ಬಾಲಮ್ಮ ಯುಗಾಗಿ ಹಬ್ಬಕ್ಕೆ ಎಂಟು ದಿನ ಮುಂಚಿತವಾಗಿ ತಂಗಿ ಬಿಸಿಲಮ್ಮ ಮತ್ತು ಮಕ್ಕಳನ್ನು ನೋಡಲು ಬರುತ್ತಾಳೆ.ಬಿಸಿಲಮ್ಮನಿಗೆ ಎಂಟು ಜನ ಮಕ್ಕಳು, ಕಬ್ಬಾಳಮ್ಮನಿಗೆ ಮಕ್ಕಳಿಲ್ಲದ ಬಂಜೆ ಎಂದು ಈಕೆ ಮುಟ್ಟಿದರೆ ತನ್ನ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲವೆಂದು ಏಳು ಮಕ್ಕಳನ್ನು ಮೂಲೆಯಲ್ಲಿ ಕುಳ್ಳಿರಿಸಿ ಒಂದು ಪುಟ್ಟಿಯನ್ನು ದಬಾಕಿ ಬಚ್ಚಿಡುತ್ತಾಳೆ. ಒಬ್ಬ ಮಗ ಸಿಡಿರಣ್ಣ ಆಟ ಆಡುವುದಕ್ಕೆ ಹೊರಗಡೆ ಹೋಗಿರುತ್ತಾನೆ. ಕಬ್ಬಾಳಮ್ಮ ತಂಗಿ ಬಿಸಿಲಮ್ಮನ ಮನೆಗೆ ಬಂದು ತಂಗಿ ಮಕ್ಕಳನ್ನು ನೋಡಿ ಸಾನೆ ದಿನವಾಯಿತು. ನೋಡಿ ಹೋಗೊಣ ಎಂದು ಬಂದೆ ಎಲ್ಲಿ ಮಕ್ಕಳ್ಯಾರು ಕಾಣಿಸುತ್ತಿಲ್ಲ ಎಲ್ಲಿ ಹೋದರು ಎಂದು ಕೇಳುತ್ತಾಳೆ.

ಬಿಸಿಲಮ್ಮ ಮಕ್ಕಳನ್ನು ಬಚ್ಚಿಟ್ಟು ಆಟ ಆಡುವುದಕ್ಕೆ ಹೋಗಿದ್ದಾರೆ ಅಕ್ಕ ಎಂಬುದಾಗಿ ಸುಳ್ಳು ಹೇಳುತ್ತಾಳೆ. ಎಷ್ಟೆಯಾಗಲೀ ಮಾಯ್ಕರಿ ಕಬ್ಬಾಳಿಗೆ ತಿಳಿಯದೇನಿದೆ. ಅಷ್ಟರಲ್ಲಾಗಲೇ ಹೊರಗೆ ಹೋಗಿದ್ದ ಸಿಡಿರಣ್ಣ ಒಬ್ಬ ಓಡೋಡಿ ಬಂದು ದೊಡ್ಡಮ್ಮ ಯಾವಾಗ ಬಂದೆ ಚೆನ್ನಾಗಿದಿಯ ಎಂದು ಮಾತನಾಡಿಸುತ್ತಾನೆ. ಅವನನ್ನು ತಬ್ಬಿ ಮುದ್ದಾಡಿ ನಿನ್ನ ಆಟವಾಡುತ್ತಿರುವ ಮಗ ಆಟವಾಡಿಕೊಂಡೆ ಇರಲಿ, ನೀನು

ಆವಿಸಿರುವ ಮಕ್ಕಳು ಕಲ್ಲಾಗಲಿ ಎಂಬುದಾಗಿ ಶಾಪ ಕೊಡುತ್ತಾಳೆ. ಆಗ ಬಿಸಿಲಮ್ಮನ ಏಳು ಜನ ಮಕ್ಕಳು ಕಲ್ಲಾಗುತ್ತಾರೆ.

ಕಬ್ಬಾಳಮ್ಮ ಶಾಪ ಕೊಟ್ಟು ನಂತರ ನಿನ್ನ ನೆಲೆಗೆ ನಾನು ಬರುವುದಿಲ್ಲ ನೀನೆ ನನ್ನ ನೆಲೆಗೆ ಬಂದು ಮೆರೆದೊಗು ಎಂದು ಹೇಳಿ ಹೊರಟುಬರುತ್ತಾಳೆ. ಅದರಂತೆ ಪ್ರತಿ ವರ್ಷ ಜಾತ್ರೆಯ ಸಂದರ್ಭದಲ್ಲಿ ಕಬ್ಬಾಳಮ್ಮನ ಸಿಡಿ ದಿವಸ, ಹುಣಸನಹಳ್ಳಿಯಿಂದ ಬಿಸಿಲಮ್ಮನನ್ನು ತೆಗೆದುಕೊಂಡು ಕಬ್ಬಾಳಿಗೆ ಬರುತ್ತಾರೆ. ಕಬ್ಬಾಳಮ್ಮ ದೇವಸ್ಥಾನದಲ್ಲಿ ಬಿಸಿಲಮ್ಮನನ್ನು ಇಟ್ಟು ರಾತ್ರಿ ಎಂಟು ಗಂಟೆಗೆ ಹುಣಸನಹಳ್ಳಿಯ ಪೂಜಾರಿಗಳು ಪೂಜೆ ಮಾಡುತ್ತಾರೆ.

ಬಿಸಿಲಮ್ಮನ ಜಾತ್ರೆಯ ಸಿಡಿ ದಿವಸ ಕಬ್ಬಾಳಮ್ಮ ದೇವಸ್ಥಾನದ ಪೂಜಾರಿಗಳು ತುಪ್ಪದ ಕಜ್ಜಾಯ, ಮೊಸರನ್ನವನ್ನು ಮಾಡಿಕೊಂಡು ಬಂದು ಬಿಸಿಲಮ್ಮ ದೇವರಿಗೆ ನೈವೇದ್ಯ ಮಾಡುತ್ತಾರೆ. ಹುಣಸನಹಳ್ಳಿಯ ತೋಟಿ ಕೋಡಂಬಳ್ಳಿಯಲ್ಲಿ ವಾಸವಾಗಿದ್ದು ಜಾತ್ರೆಗೆ ಮುನ್ನ ಹದಿನೈದು ದಿವಸ ಮುಂಚಿತವಾಗಿ ದೇವಸ್ಥಾನದಲ್ಲಿ ಜನಿವಾರ ಧಾರಣೆಯನ್ನು ಮಾಡಿಕೊಂಡು ದೇವಸ್ಥಾನದಲ್ಲಿ ವಾಸಿಸುತ್ತಿರುತ್ತಾರೆ. ಜನಿವಾರ ಧಾರಣೆಗೆ ಮುನ್ನ ನಾಲ್ಕೈದು ಊರಿಗೆ ಹೋಗಿ ಸಾರುತ್ತಾನೆ. ಹದಿನೈದು ದಿವಸ ಮುಂಚಿತವಾಗಿ ದೇವರನ್ನು ಪಟ್ಟಕ್ಕೆ ಕುಳ್ಳಿರಿಸಿದ್ದು ದೇವರನ್ನು ಬೇರೆ ಊರಿಗೆ ಕಳುಹಿಸುವುದಿಲ್ಲ.

# ಅಧ್ಯಾಯ – ೫

## ಕಬ್ಬಾಳಮ್ಮನ ಕುರಿತಾದ ಒಟ್ಟು ಸಾಂಸ್ಕೃತಿಕ ಅಧ್ಯಯನ

ಯಾವುದೇ ಒಂದು ಗ್ರಾಮದೇವತೆಯ ಅಧ್ಯಯನವನ್ನು ಕೈಗೊಂಡಾಗ ಇಂದಿನ ಸಮಕಾಲೀನ ಸ್ಥಿತಿಗತಿಗಳಿಗೆ ಹೊಂದಿಕೆಯಾಗುವಂತೆ ಮುಖಾಮುಖಿಯಾಗಿಸದೇ ಹೋದಲ್ಲಿ ಅದು ಸ್ಪಷ್ಟವಾದ ಅಧ್ಯಯನವಾಗುವುದಿಲ್ಲ. ಇದರಿಂದ ಇಂದಿನ ಸಮಯ ಸಂದರ್ಭಗಳಿಗೆ ಹಲವು ರೀತಿಯ ಕಾಲಘಟ್ಟಗಳಲ್ಲಿ ಉಂಟಾದ ಘಟನೆಗಳೊಂದಿಗೆ ಹಳೆಯ ವಿಷಯವನ್ನು ತಿಳಿದಂತಾಗುತ್ತದೆ. ಅಲ್ಲದೇ ಹಳೆಯ ಮತ್ತು ಇಂದಿನ ದಿನಗಳಿಗಿರುವ ಭಿನ್ನತೆಯೊಂದಿಗೆ ಮನುಷ್ಯನ ಬೌದ್ಧಿಕ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಮಾನವನ ಜೀವನ ನಿರಂತರವಾಗಿ ಪರಿವರ್ತನೆಯನ್ನು ಬಯಸುತ್ತದೆ. ನವ ನಾಗರೀಕತೆಯ ಅಂಚಿನಲ್ಲಿರುವ ಮಾನವ ಆಧುನಿಕ ಆವಿಷ್ಕಾರದ ಬದಲಾವಣೆಗೆ ಹೊಂದಿಕೊಳ್ಳುತ್ತಿದ್ದಾನೆ. ಇದರಿಂದ ದೇಶದ ಹಲವು ವಿಚಾರಗಳಿಗೆ ಸ್ಪಂದಿಸುತ್ತಾ ಆಧುನಿಕತೆ, ನಾಗರೀಕತೆ, ವಿಜ್ಞಾನ, ತಂತ್ರಜ್ಞಾನಗಳಂತಹ ಆವಿಷ್ಕಾರಗಳನ್ನು ತನಗೇ ಗೋತ್ತಿಲ್ಲದಂತೆಯೇ ಒಗ್ಗಿಸಿಕೊಳ್ಳುತ್ತಿದ್ದಾನೆ. ಈ ಮುಂಚೆ ತನ್ನ ಬದುಕಿಗೆ ಹೊಂದಿಕೊಂಡಿದ್ದ ಜೀವನ ಪದ್ಧತಿ, ಸಂಸ್ಕೃತಿ, ಸಂಪ್ರದಾಯ, ನಂಬಿಕೆಗಳಿಗಿಂತ ಅದೆಷ್ಟೋ ಆಚಾರಗಳು ದೂರವಾಗುತ್ತಿರುವುದಕ್ಕೆ ಕಾರಣೀ ಭೂತವಾಗಿವೆ. ಇದರಿಂದ ವೈಜ್ಞಾನಿಕ ಶಕ್ತಿಯ ಪಲ್ಲಟಕ್ಕೆ ಜನಪದರುನ್ನು ಒಪ್ಪಿಕೊಳ್ಳುವಾಗ ತಾನೂ ಸಹ ಬದಲಾಗಿ ಸಂದರ್ಭಕ್ಕೆ ಒಗ್ಗುವ ಅಂಶಗಳನ್ನು ಆತ ಸ್ವೀಕರಿಸಬೇಕಾಗುತ್ತದೆ. ಈ ಪರಿವರ್ತನೆಯಿಂದ ಒಂದೊಂದು ಸಾರಿ ನಿಧಾನವಾಗಿಯೂ ಕೆಲವೊಮ್ಮೆ ವೇಗವಾಗಿಯೂ ಸಾಗುತ್ತಾ ಅಲ್ಲಿನ ಜನಸಮುದಾಯ ಸಾಮಾಜಿಕ ಆರ್ಥಿಕ ಶೈಕ್ಷಣಿಕ ವೈಜ್ಞಾನಿಕತೆಗೆ ಹೇಗೆ ತೆತ್ತುಕೊಂಡಿದೆ ಎಂಬುದು ಕಾರಣವಾಗುತ್ತದೆ.

ಆಧುನಿಕತೆ–ವಿಜ್ಞಾನ ತಂತ್ರಗಾರಿಕೆ ಉಂಟು ಮಾಡಿದ ಬದಲಾವಣೆಯಿಂದ ಮಾನವನ ಸಂಸ್ಕೃತಿಯ ವಿಸ್ತಾರಗೊಳ್ಳಲು ಅವುಗಳೊಂದಿಗಿನ ಹೊಂದಾಣಿಕೆಯು ಅಷ್ಟೇ ಮುಖ್ಯವಾಗುತ್ತದೆ. ಅದೂ ಅಲ್ಲದೇ ಸಮಕಾಲೀನ ಸ್ಥಿತಿಯನ್ನು ತಿಳಿವುಗೊಳಿಸಿ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದಂತೆ ಆಗುತ್ತದೆ.

ಮನುಷ್ಯನ ಬದುಕು ನಿಸರ್ಗದಿಂದ ಸಂಸ್ಕೃತಿಗೆ, ಸಂಸ್ಕೃತಿಯಿಂದ ನಾಗರೀಕತೆಗೆ ನಾಗರೀಕತೆಯಿಂದ ಇತ್ತಿನ ನವನಾಗರೀಕತೆಗೆ ಪ್ರವೇಶಿಸಿದ ಹಿನ್ನಲೆಯಲ್ಲಿ ದೇವತೆಗಳ ಹಬ್ಬಗಳು ಮತ್ತು ಆರಾಧನೆಗಳನ್ನು ಅರ್ಥೈಸಿಕೊಳ್ಳಬೇಕಾಗಿದೆ. ಇಂದಿಗೂ ನಿಸರ್ಗದ ಹಂತದಲ್ಲಿ ಇರುವ ಹಾಗೂ ನಿಸರ್ಗ ಮತ್ತು ಸಂಸ್ಕೃತಿಯ ನಡುವೆ ಇರುವ ಗ್ರಾಮೀನ ಸಂಸ್ಕೃತಿಯನ್ನು ಮೀರಿ ಯಾವುದರ ತೆಕ್ಕೆಗೂ ಸಿಗಲಾರದು. ಆಧುನಿಕ ನಗರ ಸಂಸ್ಕೃತಿ ಇವುಗಳ ನಡುವೆ ನಡೆಯುತ್ತಿರುವ ಸಂಘರ್ಷವನ್ನು ಅರ್ಥಮಾಡಿಕೊಳ್ಳದೇ ಈ ಅಭಾವ ಆಚರಣೆಗಳನ್ನು ವಿಶ್ಲೇಷಿಸಲು ಸಾಧ್ಯವಿಲ್ಲ. ಏಕೆಂದರೆ ಭೂಮಿ, ಭೂಮಿಯ ಒಡೆತನ ಆನಂತರ ಬೆಳೆದ ಪ್ರಭುತ್ವ ನಂತರದ ಹಂತಗಳಲ್ಲಿ ಸೃಷ್ಟಿಗೊಂಡ ಶ್ರೇಣಿಕರಣ ವ್ಯವಸ್ಥೆ ಇವೆಲ್ಲವೂ ನಮ್ಮ ಇವತ್ತಿನ ಹಬ್ಬ ಆಚರಣೆಗಳ ಹಿನ್ನಲೆಯಲ್ಲಿ ಇಣುಕಿ ಸಾಗುತ್ತದೆ. ಆದ್ದರಿಂದಲೇ ಗ್ರಾಮದೇವತೆಗಳ ಹಬ್ಬವೆಂದರೆ ಅದು ಕೇವಲ ಮನರಂಜನೆಯಲ್ಲ. ಬದಲಾಗಿ ಹೊಸ ಇತಿಹಾಸವೊಂದನ್ನು ತೆರೆದಿಡುವ ಸಾಂಸ್ಕೃತಿಕ ಸತ್ಯಗಳು ಹಾಗೆಯೇ ಸಂಸ್ಕೃತಿ ಎಂಬುದು ಸರಳೀಕರಣ ವಸ್ತುವಲ್ಲ. ಬದಲಾಗಿ ಮಾನವಶಾಸ್ತ್ರದ ಅಗಣಿತ ಸತ್ಯಗಳನ್ನು ಒಳಗೊಂಡ ಒಂದು ಸಂಕೀರ್ಣ ಸಂಗತಿ. ಆದ್ದರಿಂದ ಇವತ್ತಿನ ನವನಾಗರೀಕತೆಗೆ ತಲುಪಿರಬಹುದಾದ ಮನುಷ್ಯ ಕೂಡ ಪರಂಪರೆಯಲ್ಲಿನ ಯಾವುದೇ ಒಂದು ಮೂಲದ ಮತ್ತು ಸತ್ಯದ ಎಳೆಗೆ ಅಂಟಿಕೊಂಡಿದ್ದಾನೆ ಎಂಬುದನ್ನು ಮನಗಾಣಬಹುದು.

ಆಧುನಿಕತೆಯಿಂದ ಬದಲಾದ ಪ್ರತಿಯೊಂದು ವಸ್ತುವಿಷಯದಲ್ಲೂ ಒಂದೊಂದು ರೀತಿಯ ಪ್ರಭಾವವನ್ನು ಬೀರುತ್ತವೆ. ಇದು ಮನುಷ್ಯನ ಬದುಕಿನಲ್ಲಿರಬಹುದು ಅಥವಾ

ತನ್ನ ಜೀವನೋಪಾಯಕ್ಕಾಗಿ ಅವಲಂಬನೆಯಾಗಿರುವರಬಹುದು. ಉಡುವ ಬಟ್ಟೆಯಲ್ಲಿ ಇಲ್ಲವೇ ಆತನ ಆರಾಧಿಸುವ ದೈವತೆಯ ಭಕ್ತಿಯಲ್ಲೇ ಇರಬಹುದು. ಮನುಷ್ಯ ನಂಬಿ ಪೂಜಿಸುವ ದೇವತೆಗಳು, ತಮ್ಮ ಕಷ್ಟಗಳನ್ನು ಪರಿಹರಿಸಿ ಸುಖ ನೆಮ್ಮದಿಯನ್ನು ನೀಡುತ್ತವೆ ಎಂಬ ನಂಬಿಕೆಯ ಹಿನ್ನಲೆಯಲ್ಲಿ ಪೂಜಿಸಿಕೊಂಡು ಬರುತ್ತಿರುವುದು ಪುರಾತನವಾದ ಸಂಗತಿ. ಕಾಲ ಬದಲಾದಂತೆ ಮನುಷ್ಯ ಎಲ್ಲಾ ರೀತಿಯ ಬದಲಾವಣೆಗೆ ಒಳಪಟ್ಟಂತೆ ತಾನು ಪೂಜಿಸುವ ದೇವರು ಮತ್ತು ಪರಿಸರವನ್ನು ಬದಲಾವಣೆ ಗುರಿ ಮಾಡಿದರೂ ಜೊತೆಗೆ ತಾನೂ ಕೂಡ ಯಾವುದೇ ತಂತ್ರಜ್ಞಾನದಿಂದ ವೈಜ್ಞಾನಿಕತೆಯತ್ತ ಸಾಗಿದರೂ ಪೂಜಿಸುವ ದೇವತೆ ಆರಾಧನೆಯಿಂದ ಹೊರತಾಗಿಲ್ಲ.

ದೇವರ ಆರಾಧನೆ ಮಾನವನ ಬದುಕಿನ ಒಂದಂಗವಾಗಿರುವುದರಿಂದ ಆತ- ಪೂಜಿಸುವ ದೇವರುಗಳಲ್ಲಿಯೂ ಹಲವಾರು ಬದಲಾವಣೆಗಳು ಆಗುತ್ತಿರುವುದು ಸಹಜವೇ ಆಗಿದೆ. ಆದರೆ ತನ್ನ ಮೂಲ ನೆಲೆಯನ್ನು ಕಾಪಾಡಿಕೊಂಡು ನಿತ್ಯ ಜೀವನಕ್ಕೆ ಅನುಗುಣವಾಗಿ ಹೊಸ ರೂಪ ಪಡೆಯುತ್ತಾ ಸಾಗಿದೆ. ಜನಪದರು ನಂಬಿಕೊಂಡು ಭಯಭಕ್ತಿಯೊಂದಿಗೆ ಪೂಜಿಸುವ ದೇವರ ಪೂಜೆಯ ವಿಧಾನ ಹರಕೆಗಳೆಲ್ಲಾ ವೈಧಿಕ ಸಂಸ್ಕೃತಿಯ ಪ್ರಭಾವದಿಂದ ಮೂಲ ಮಾಯವಾಗಿ ಹೊಸ ರೂಪವನ್ನು ಪಡೆದುಕೊಳ್ಳುತ್ತಿವೆ. ಯಾವುದೋ ಕಾಲದಲ್ಲಿ ನಡೆದಿರುವ ಆಚರಣೆಗಳು ಮುಂದೆ ಬರುವ ಕಾಲಮಾನದಲ್ಲಿ ಇಲ್ಲವಾಗಬಹುದು ಅಥವಾ ಬೇರೆ ರೀತಿಯ ಆಚರಣೆಗಳು ಚಾಲ್ತಿಗೆ ಬರಬಹುದು. ಹೀಗಾಗಿ ಮಾನವನ ಸಂಸ್ಕೃತಿ ಬದಲಾವಣೆಯ ಗುರಿಯನ್ನು ಹೊಂದಿದ್ದರೂ ಅದು ಆ ಕ್ಷಣಕ್ಕೆ ಪ್ರತಿಕ್ರಿಯೆ ನೀಡದೆ ಕಾಲಾನಂತರದಲ್ಲಿ ಬದಲಾವಣೆಗೊಳ್ಳುತ್ತಾ ಮುಂದೆ ಹೋದರೂ ಮೂಲ ಆಶಯವನ್ನು ಬಿಡದೇ ಮುಂದೆ ಸಾಗುತ್ತದೆ. ಹೀಗೆ ಮುಂದುವರಿಯುತ್ತಾ ಮೂಲ ಕೇಂದ್ರ ಬದಲಾವಣೆಗೊಳಪಟ್ಟು ದೂರವಾದರೂ ಇದರಲ್ಲಿ ಅನುಮಾನ ಪಡುವಂತದು ಏನೂ ಇಲ್ಲ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಜನಪದರಿಂದ ಆಚರಿಸಲ್ಪಡುವ "ಕಬ್ಬಾಳಮ್ಮನ ಜಾತ್ರೆ,

ಉತ್ಸವ, ಪೂಜಾ ವಿಧಾನ, ಹರಕೆ, ಆಚರಣೆ ಮೊದಲಾದವುಗಳು ಹಳೆಯದನ್ನು ಜೀರ್ಣಿಸಿಕೊಂಡು ಹೊಸದನ್ನು ಸ್ವೀಕರಿಸುತ್ತಾ ಸ್ವಲ್ಪ ಬದಲಾವಣೆಯಾಗಿವೆ. ಇದರ ಹಿಂದಿರುವ ಪ್ರಭಾವ ಪ್ರೇರಣೆ ಹಾಗೂ ಹಿಂದಿರುವ ಕ್ರಿಯಾಶೀಲತೆ ಯಾವುದು? ಎಂಬುದನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಬಹುದಾಗಿದೆ.

# ಉಪಸಂಹಾರ

ಸಾವಿರಾರು ವರ್ಷಗಳಷ್ಟು ದೀರ್ಘಕಾಲ ಇತಿಹಾಸವನ್ನು ಪಡೆದುಕೊಂಡಿರುವ ಕಬ್ಬಾಳಮ್ಮ ಇಂದು ಜನ ಸಮುದಾಯದ ನಿತ್ಯ ಜೀವನದಲ್ಲಿ ತುಂಬ ಮುಖ್ಯಳಾಗಿದ್ದಾಳೆ. ಆದರೆ ಅಧ್ಯಾಯನಕ್ಕೆ ಒಳಪಡದೇ ಎಷ್ಟೋ ಗ್ರಾಮದೇವತೆಗಳು ತೀರಾ ಹಿಂದುಳಿದಂತೆ ತಾತ್ಸರಕ್ಕೆ ಒಳಗಾಗಿ ಮೂಲೆಗುಂಪಾಗಿವೆ. ಮೊದಮೊದಲು ಕಬ್ಬಾಳಮ್ಮನನ್ನು ಕುರಿತು ಮಾಹಿಸಿ ಸಂಗ್ರಹಿಸಿದಾಗ ಹೊಸ ಆಲೋಚನೆಯು ಹೊಳೆಯಿತು. ಈ ದೇವತೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ನೋಡುವ ಅಧ್ಯಯನ ಹೆಚ್ಚಾಗಿ ನಡೆದಿಲ್ಲ. ಈ ಭಾಗದ ಜನರ ಮೇಲೆ ಪ್ರಭಾವಿತಳಾದ ಬಗ್ಗೆ ತಿಳಿಯಲು ಇಂತಹ ಅಧ್ಯಯನಗಳು ಬಹು ಉಪಯೋಗವಾಗಿವೆ.

"ಕಬ್ಬಾಳಮ್ಮ ಒಂದು ಸಾಂಸ್ಕೃತಿಕ ಅಧ್ಯಾಯ" ಎಂಬ ಈ ಪ್ರಬಂಧವು ಜನರ ಜೀವನ ಜೊತೆಗೆ ದೇವತೆಗೆ ತೋರುವ ಸ್ಥಾನಮಾನ ಮಾನ್ಯತೆ ಇವೆಲ್ಲವನ್ನು ಕುರಿತು ಚರ್ಚಿಸಲಾಗಿದೆ.ಮೂರು ದಿನಗಳ ಕಾಲ ನಡೆಯುವ ಕಬ್ಬಾಳಮ್ಮನ ಜಾತ್ರೆಯಲ್ಲಿ ಕಂಡುಬರುವ ಆಚರಣೆಗಳು, ನಂಬಿಕೆಗಳು, ಪದ್ಧತಿಗಳನ್ನು ನಾವು ಕಾಣಬಹುದಾಗಿದೆ. ಅಷ್ಟೇ ಅಲ್ಲದೇ ಪಾರಂಪರಿಕ ಮಹತ್ವ, ರೋಗಗಳನ್ನು ತಡೆಗಟ್ಟುವಲ್ಲಿ ಸಹಯಕಳಾದ ಬಗ್ಗೆ ಅಲ್ಲದೇ ಮಳೆ, ಬೆಳೆ ಮತ್ತು ಕಷ್ಟ ಕಾರ್ಪಣ್ಯದಿಂದ ರಕ್ಷಣೆ ಉದ್ಯೋಗವನ್ನು ಬೇಡುತ್ತಾ ಇದರ ಮೂಲಕ ಪ್ರಸಿದ್ಧಿಯಾಗುವ ಹಿನ್ನಲೆಯನ್ನು ಗುರುತಿಸಿದೆ.

ಬದಲಾಗುತ್ತಿರುವ ಈ ಸಮಾಜದಲ್ಲಿ ನವೀನ ರೀತಿಯ ಹೊಸ ಹೊಸ ಆಶೋತ್ತರಗಳು ದೇವತೆಯ ಮೇಲೆ ಪ್ರಭಾವ ಬೀರಲು ಕಾರಣ ಮತ್ತು ಎಲ್ಲಾ ವರ್ಗದ ಜನರನ್ನು ಗೆಲ್ಲುತ್ತಾ ದಿನೇ ದಿನೇ ತನ್ನ ಖ್ಯಾತಿಯನ್ನು ಹೆಚ್ಚಿಸಿಕೊಳ್ಳುವ ಬಗೆಯನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಜಾತ್ರೆಯ ಸಂದರ್ಭದಲ್ಲಿ ನಡೆಯುವ ಮನರಂಜನಾ ವಿಧಾನಗಳೇ ಬದಲಾಗಿ ಕ್ಯಾಸೆಟ್ ಲೋಕ ವಿಜೃಂಭಿಸುತ್ತಾ ಪಾಶ್ಚಾತ್ಯಾ

ಸಂಸ್ಕೃತಿಯ ಅನುಕರಣೆ, ಹಳ್ಳಿಗಳಿಗೂ ದಾಪುಗಾಲಿಡುತ್ತಿರುವುದು ದೇಶಿ ಸಂಸ್ಕೃತಿಯ ಬೇರುಗಳು ತನ್ನ ಶಕ್ತಿಯನ್ನು ಕಡಿಮೆ ಮಾಡಿಕೊಳ್ಳುತ್ತಿರುವುದನ್ನು ಕಾಣಬಹುದು.

ಜಾನಪದ ಕ್ಷೇತ್ರ ಮತ್ತು ದೇವತೆಗಳ ಅಧ್ಯಯನ ವಿಶಾಲವಾದದ್ದು ಮತ್ತು ಸೂಕ್ಷ್ಮವಾದದು ಕೂಡ. ಒಂದೊಂದು ದೇವತೆಯ ಸುತ್ತ ಹಲವಾರು ಕಲ್ಪನೆಗಳು ಹುಟ್ಟಿಕೊಳ್ಳುತ್ತವೆ. ಎಲ್ಲಾ ದೇವತೆಯ ಹುಟ್ಟಿನ ಹಿಂದೆ ಹಲವು ವರ್ಷಗಳ ದೀರ್ಘ ಇತಿಹಾಸ ಇರುವುದನ್ನು ಕಥೆ ಪುರಾಣದ ಮೂಲಕ ಕಾಣಬಹುದಾಗಿದೆ. ಇದೆಲ್ಲದರಿಂದ ಅಧ್ಯಯನಕ್ಕೆ ಪೂರಕವಾಗಿ ಸಹಾಯಕ ಮಾಡುತ್ತದೆಂದು ನನ್ನ ಅಭಿಪ್ರಾಯ.

ದೇವತೆಯ ಮುಂದೆ ನಡೆಯುವ ಆಚರಣೆಗಳು ಕೆಲವರಿಗೆ ಮಾನಸಿಕ ಶಾಂತಿ ದೊರೆತರೂ ಇದರಿಂದ ಒಂದು ವಿಮೋಚನೆ ಪಡೆಯಲಾಗದ ಸ್ಥಿತಿಯನ್ನು ಕಾಣುತ್ತೇವೆ ಹಾಗೂ ಶಿಕ್ಷಿಸಿಕೊಳ್ಳುವ ಕಟ್ಟುಪಾಟು ಇದರ ಹಿಂದಿನ ಸತ್ಯಾ ಸತ್ಯತೆಯನ್ನು ತಿಳಿಯಲು ಇಂತಹ ಅಧ್ಯಯನ ಮುಖ್ಯವಾಗುತ್ತವೆ.

ಬದಲಾದ ಜನಜೀವನ ಸಂಸ್ಕೃತಿ, ಹೊಸ ಆವಿಷ್ಕಾರಗಳ ನಡುವೆಯೂ ತನ್ನ ಸ್ಥಿತಿಯನ್ನು ಉಳಿಸಿಕೊಳ್ಳುತ್ತಾ ಸ್ವಲ್ಪ ಮಟ್ಟಿಗಾದರೂ ದೇಶಿಯ ಹಾಗೂ ಪಾರಂಪರಿಕ ನೈಜ ಸತ್ಯವನ್ನು ಪ್ರತಿಪಾದಿಸುವಲ್ಲಿ ಜಾತ್ರೆ ಹಾಗೂ ಹಬ್ಬಗಳು ನಡೆಯುತ್ತಿವೆ. ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗತಿಗನುಗುಣವಾಗಿ ವೈಚಾರಿಕತೆ ಬೆಳೆದಂತೆಲ್ಲಾ ಮೂಲ ಆಶಯವನಿಟ್ಟು ಕೊಂಡೆ ಮತ್ತೊಂದು ರೀತಿಯ ಆಚರಣೆಯನ್ನಾಗಲೀ, ಭಕ್ತಿಯನ್ನಾಗಲೀ, ಸಮರ್ಪಿಸುತ್ತಿದ್ದಾರೆ. ಅಲ್ಲದೇ ಯುವ ಸಮುದಾಯ, ಮಾಧ್ಯಮಗಳಿಂದ ಆಕರ್ಷಿತರಾಗಿ ಜನಪದ ಕಲೆಗಳನ್ನು ಅವಜ್ಞೆಗೆ ಅಪಾಯವೇ ಎಂದೆನಿಸುತ್ತದೆ.

ಇದೆಲ್ಲದರಿಂದ ಕಬ್ಬಾಳಮ್ಮನನ್ನು ಆರಾಧಿಸುವ ಜನತೆ ಹೊಸ ಬದುಕಿಗೆ ಹೊಂದಿಕೊಳ್ಳುತ್ತಾ ತನ್ನ ಬುದ್ದಿ ಕೌಶಲ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಕೆಲವು ಆಚರಣೆಗಳಲ್ಲಿ ಸಡಿಲತೆಯನ್ನು ಕಂಡುಕೊಂಡಿದ್ದಾರೆ. ಆದುದ್ದರಿಂದ ಈ ಅಧ್ಯಯನ

ಜನತೆಯ ಸಾಮಾಜಿಕ ಸಾಂಸ್ಕೃತಿಕ ಜಾನಪದೀಯ ಹಿನ್ನಲೆಯಲ್ಲಿ ಪರಿಶೀಲಿಸಿದೆ. ಹಾಗಾಗಿಯೇ ಇಲ್ಲಿನ ಎಲ್ಲಾ ವಿವರಗಳು ಇನ್ನೊಂದು ಗ್ರಾಮದೇವತೆಯ ಅಧ್ಯಾಯನಕ್ಕೆ ಸಹಕಾರಿಯಾಗಬಲ್ಲದು ಎಂದು ನನ್ನ ಅಭಿಪ್ರಾಯ.

# ವಕ್ತೃಗಳ ವಿವರ

| ಕ್ರಮ ಸಂಖ್ಯೆ | ಹೆಸರು | ಊರು | ವಯಸ್ಸು |
|---|---|---|---|
| ೧ | ಸಂಪತ್ (ಕೆಸೆಟ್ ಅಂಗಡಿ ಮಾಲೀಕರು) | ಕಬ್ಬಾಳು | ೪೩ |
| ೨ | ಕಬ್ಬಾಳೇಗೌಡ (ಅರ್ಚಕರು) | ಕಬ್ಬಾಳು | ೫೮ |
| ೩ | ಸಿದ್ದರಾಮು ಕೆ.ಟಿ | ಕಬ್ಬಾಳು | ೫೫ |
| ೪ | ಕೃಷ್ಣಮೂರ್ತಿ (ಪ್ರಾಧ್ಯಾಪಕರು) | ಕನಕಪುರ | ೫೮ |
| ೫ | ಸುಶೀಲಮ್ಮ | ಸೋಮೆಧ್ಯಾಪನಹಳ್ಳಿ | ೫೩ |
| ೬ | ಪುಟ್ಟಮ್ಮ | ಸೋಮೆಧ್ಯಾಪನಹಳ್ಳಿ | ೬೮ |
| ೭ | ಮಾದಯ್ಯ | ಸೋಮೆಧ್ಯಾಪನಹಳ್ಳಿ | ೬೫ |
| ೮ | ಮುದಂಕೇಗೌಡರು | ಸೋಮೆಧ್ಯಾಪನಹಳ್ಳಿ | ೮೦ |
| ೯ | ಯಶೋಧ (ಅಂಗನವಾಡಿ ಕಾರ್ಯಕರ್ತೆ) | ಕಬ್ಬಾಳು | ೪೫ |

# ಪರಾಮರ್ಶನ ಗ್ರಂಥಗಳು


೧. ರಾಮನಗರ ಜಿಲ್ಲೆಯ ಸಂಸ್ಕೃತಿ, ಡಾ. ಅಂಕನಹಳ್ಳಿ ಪಾರ್ಥ – ಅಂಕನಹಳ್ಳಿ ಪ್ರಕಾಶನ, ರಾಮನಗರ ತಾಲ್ಲೂಕ್.

೨. ಬಿಜಾಪುರ ಜಿಲ್ಲೆಯ ಜಾತ್ರೆಗಳು. ಡಾ. ಆರ್. ಆಯ್ ಚಪ್ಪರಬಂದ – ಯಾಸ್ಮಿನ್ ಪ್ರಕಾಶನ, ಬಿಜಾಪುರ.

೩. ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ. ಡಾ. ಅಂಕನಹಳ್ಳಿ ಪಾರ್ಥ – ಅಂಕನಹಳ್ಳಿ ಪ್ರಕಾಶನ, ರಾಮನಗರ ತಾಲ್ಲೂಕ್.

೪. ಉಜ್ಜನಿ ಚೌಡಮ್ಮ ಒಂದು ಜಾನಪದೀಯ ಅಧ್ಯಯನ, ಡಾ. ಬ್ಯಾಡರಹಳ್ಳಿ ಶಿವರಾಜ್, ಅಂಕನಹಳ್ಳಿ ಪ್ರಕಾಶನ, ರಾಮನಗರ ತಾಲ್ಲೂಕ್.

೫. ದೇವರು, ಎ.ಎನ್ ಮೂರ್ತಿರಾವ್, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

೬. ಸತ್ಯವಂತೆ ಕಬ್ಬಾಳಮ್ಮ, ಸಂಪತ್, ಕೆ. ಆರ್. ಎಸ್ ಆಯಾ ಕಂಪನಿ, ಕಬ್ಬಾಳು.

೭. ಜ್ಞಾನ ಶಾಸ್ತ್ರ ಹಿಂದೂಧರ್ಮಚಾರ ವಿಚಾರಗಳು, ಶ್ರೀ. ಜಿ. ವಿ ಶರ್ಮಾ ಪಂಡಿತ್, ದಿವ್ಯಚಂದ್ರ ಪ್ರಕಾಸನ, ಬೆಂಗಳೂರು.



ಕಬ್ಬಾರಮ್ಮನ ದುರ್ಗ




ಸಿದ್ದರಾಮಯ್ಯನವರು ಹೊಸ ದೇವಾಲಯವನ್ನು
ಉದ್ಘಾಟಿಸಿ ಹೊರಬರುತ್ತಿರುವುದು



ಕಬ್ಬಾಳಮ್ಮನ ವಿಗ್ರಹ



ಕಬ್ಬಾಳಮ್ಮ ಮತ್ತು ತಂಗಿ ಬಿಸಿ ಬಿಸಲಮ್ಮ ದೇವರನ್ನು ಮೆರೆಸುತ್ತಿರುವುದು







ಕಬ್ಬಾಳು ಗ್ರಾಮದಲ್ಲಿ ಯಳವಾರದ ಮೆರವಣಿಗೆ ಮಾಡುತ್ತಿರುವುದು




ಕೊಂಡಕ್ಕೆ ಸೌದೆ ಜೋಡಿಸುತ್ತಿರುವುದು




ಕೊಂಡ
ಅಣಿಮಾಡಿರುವುದು
(ಕೆಂಡವಾಗಿ
ಸಿದ್ಧಪಡಿಸಿರುವುದು)



ಕಬ್ಬಾಳಮ್ಮನ ಸಿಡಿ







ಕಬ್ಬಾಳಮ್ಮನ ಜಾತ್ರೆಗೆ ಸುತ್ತಮುತ್ತಲಿನ ಜಿಲ್ಲೆಗಳಿಂದ ಜನರು ಬಂದು ಸೇರಿರುವುದು



ಕಬ್ಬಾಳಮ್ಮನ ದೇವಾಲಯಕ್ಕೆ ಪೂಜೆಗಾಗಿ ನಿಂತಿರುವ ಜನರು